08 February 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮನಸ್ಸು ಭಾರವಾದಾಗ ಜೀವನದ ಪಯಣ ಕಷ್ಟಕರವಾಗುತ್ತದೆ! ಅದೇ ಜೀವನದ ಹಾದಿಯಲ್ಲಿ ಸಂತಸ ತುಂಬಿದ್ದರೆ ಜೀವನ ಕ್ಷಣಗಳಂತೆ ಕಳೆದುಹೋಗುತ್ತದೆ!

-ಸ್ನೇಹಾ ಆನಂದ್

info.varthaman@gmail.com



ತೆರವು ವೇಳೆ ಅಂಬೇಡ್ಕರ್ ಫ್ಲೆಕ್ಸ್‌ಗೆ ಅವಮಾನ: ಅಭಯ್ ವಿರುದ್ಧ ಪ್ರತಿಭಟನೆ — ಪುಟ ಸಂ. 2



ಫೆ.9ರಂದು ಜೀತ ಪದ್ಧತಿ ನಿರ್ಮೂಲನೆ ದಿನ ಗೆಜೆಟ್ ಕ್ರಮಕ್ಕೆ ವಿರೋಧ — ಪುಟ ಸಂ. 3



ರಾಮನಗರದಲ್ಲಿ ಗಜಗೌರಿ ವ್ರತಾಚರಣೆ | 10 ಸಾವಿರ ಗಾಯತ್ರಿ ಜಪ, ಹೋಮ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 94 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಡಿಕೆಶಿ ಪರ 'ಎಲ್ಲದಕ್ಕೂ ಸೈ'!

## ಡಿಕೆಶಿ ಪ್ರಾಣ ಕೇಳಿದರೂ ಕೊಡಲು ಸಿದ್ಧ | ಕೈ ಹೈಕಮಾಂಡ್‌ಗೆ ಬಂಡಾಯದ ಸಂದೇಶವೇ?

**ದಾವಣಗೆರೆ:** ಮುಖ್ಯಮಂತ್ರಿ ಹುದ್ದೆಗೆ ತಲಾ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಒಪ್ಪಂದ ಆಗಿರುವ ಬಗ್ಗೆ ನನಗೆ ಮಾಹಿತಿ ಇದೆ. ಕಾಂಗ್ರೆಸ್ ಹೈಕಮಾಂಡ್ ಈ ಬಗ್ಗೆ ತಕ್ಷಣ ಸ್ಪಷ್ಟಪಡಿಸಬೇಕು ಎಂದು ಶಾಸಕ ಬಸವರಾಜ್ ವಿ ಶಿವಗಂಗಾ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಗರದಲ್ಲಿ ಶನಿವಾರ ಪವರ್ ಶೇರಿಂಗ್ ಬಗ್ಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಪರವಾಗಿ 40ರಿಂದ 50 ಮಂದಿ ನಮ್ಮಂತ ಯುವ ಶಾಸಕರು ಡಿಕೆಶಿ ಏನೇ ಹೇಳಿದರೂ ಮಾಡಲು ಸಿದ್ಧರಿದ್ದೇವೆ. ಅವರು ಪ್ರಾಣ ಕೇಳಿದರೂ ಕೊಡಲು ನಾವು ಸಿದ್ಧರಿದ್ದೇವೆ ಎಂದು ಹೇಳುವ ಮೂಲಕ ಡಿಕೆಶಿಗೆ ಸಿಎಂ ಸ್ಥಾನ ನೀಡದಿದ್ದರೆ ಬಂಡಾಯದ ಮುನ್ಸೂಚನೆ ನೀಡಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಅವರು ಪರೋಕ್ಷವಾಗಿ ಎಚ್ಚರಿಕೆಯ ಸಂದೇಶ ನೀಡಿದ್ದಾರೆ.

ಡಿಕೆಶಿ ಸಾಹೇಬರು ಹೇಳಿದಂತೆ ಯತೀಂದ್ರ ಸಿದ್ದರಾಮಯ್ಯ ಪದೇ ಪದೇ ಮಾಧ್ಯಮಗಳ ಮುಂದೆ ಬಂದು ಪಕ್ಷಕ್ಕೆ ಡ್ಯಾಮೇಜ್ ಆಗುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಹೈಕಮಾಂಡ್ ಬೇರೆ ಇದೆ. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿಯವರು ಇದ್ದಾರೆ. ಹೈಕಮಾಂಡ್ ಕೂಡಲೇ ಒಪ್ಪಂದದ ಬಗ್ಗೆ ಸ್ಪಷ್ಟಪಡಿಸಲಿ. ಇಲ್ಲ ನಾನು ಯಾವುದೇ ಮಾತು ಕೊಟ್ಟಿಲ್ಲ ಎಂದು ಸಿದ್ದರಾಮಯ್ಯ ಅವರು ಕ್ಲಿಯರ್ ಮಾಡಲಿ. ಆಗ ನಾವು ಎಲ್ಲರೂ ಯಾವುದೇ ಪ್ರಶ್ನೆ ಎತ್ತೋದಿಲ್ಲ ಎಂದು ಖಡಕ್ ಆಗಿ ಹೇಳಿದ್ದಾರೆ.

ನನಗಿರುವ ಮಾಹಿತಿ ಪ್ರಕಾರ ಅಧಿಕಾರ ಹಂಚಿಕೆ ಒಪ್ಪಂದ ಆಗಿದೆ. ಆದರೆ, ಸಿಎಂ ಸಿದ್ದರಾಮಯ್ಯ ಐದು ವರ್ಷ ತನಕ ಸಿಎಂ ಎಂಬ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಪದೇ ಪದೇ ಈ ರೀತಿ ಹೇಳಿಕೆ ನೀಡುತ್ತಲೇ ಇದ್ದಾರೆ. ಯತೀಂದ್ರ ಸಿದ್ದರಾಮಯ್ಯ ಹೇಳಿಕೆಯನ್ನು ಪಕ್ಷದ ಹೈಕಮಾಂಡ್ ಗಮನಿಸಿದೆ. ರಾಹುಲ್, ಖರ್ಗೆ ಪ್ರಿಯಾಂಕಾ ಗಾಂಧಿ ಇದ್ದಾರೆ. ಪಕ್ಷದಲ್ಲಿ ಅಧಿಕಾರ ಹಂಚಿಕೆ ಆಗಿದೆಯಾ ಇಲ್ವಾ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಅವರು ಆಗ್ರಹಿಸಿದರು.





### ಯತೀಂದ್ರಗೆ ವೋಟ್ ಹಕ್ಕಿಲ್ಲ

ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ನನ್ನ ಹೇಳಿಕೆಯನ್ನು ಗಣನೆಗೆ ತೆಗೆದುಕೊಳ್ಳಲೇಬೇಕು. ಯಾಕಂದ್ರೆ ನಂದು ಒಂದು ವೋಟ್ ಇದೆ. ಆದರೆ ಯತೀಂದ್ರ ಸಿದ್ದರಾಮಯ್ಯ ಅವರದ್ದು ವೋಟ್ ಇಲ್ಲ, ಅವರ ಹೇಳಿಕೆ ಏಕೆ ಗಣನೆಗೆ ತೆಗೆದುಕೊಳ್ಳುತ್ತೀರಿ ಎನ್ನುವ ಮೂಲಕ ಯತೀಂದ್ರ ಸಿದ್ದರಾಮಯ್ಯಗೆ ಶಾಸಕ ಬಸವರಾಜ್ ವಿ ಶಿವಗಂಗಾ ತಿರುಗೇಟು ನೀಡಿದರು. ಡಿಕೆಶಿ ಸಾಹೆಬ್ರು ಸಿಎಂ ಆಗಬೇಕು ಎಂದು ನಾನು ಕೂಡ ವ್ರತ ಮಾಡುತ್ತಿದ್ದೇನೆಂದು ಸಂಕಲ್ಪದಾರವನ್ನು ತೋರಿಸಿದರು. ನಮ್ಮ ಹೈಕಮಾಂಡ್ ತುಂಬಾ ಸ್ಟ್ರಾಂಗ್ ಇದೆ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಕಡಿವಾಣ ಹಾಕುತ್ತಾರೆ ಕಾದು ನೋಡಿ. ನನಗೆ ನೋಟೀಸ್ ಕೊಟ್ಟಿದ್ದನ್ನು ಸ್ವಾಗತ ಮಾಡಿದ್ದೇನೆ. ಆದರೆ ಸಿಎಂ ಮಗ ಅಂತ ಸುಮ್ನೆ ಆಗಿಲ್ಲ. ಹೈಕಮಾಂಡ್ ವಿರುದ್ಧ ಮಾತನಾಡಿದ ಸಚಿವರನ್ನೇ ತೆಗೆದರು. ಆದ್ದರಿಂದ ಎಲ್ಲವನ್ನು ಹೈಕಮಾಂಡ್ ಗಮನಿಸುತ್ತಿದೆ ಎಂದು ಯತೀಂದ್ರಗೆ ಟಾಂಗ್ ನೀಡದರು.

# ನಾನು ಸಿಎಂ ಆಗಬೇಕೆಂದು ಎಲ್ಲರಿಗೂ ಕನಸಿದೆ: ಡಿಕೆಶಿ

**ಮಂಗಳೂರು:** ನಾನು ಮುಖ್ಯಮಂತ್ರಿ ಆಗ ಬೇಕು ಎಂಬ ಕನಸು ಜನರಿಗೂ ಇದೆ. ಶಾಸ ಕರಿಗೂ ಇದೆ, ನಿಮಗೂ ಇದೆ. ಆದರೆ, ಪಕ್ಷ ಏನು ಹೇಳುತ್ತದೆ ಅದನ್ನು ಕೇಳಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿ ಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯ ಬಜೆಟ್ ಬಳಿಕ ಅಧಿಕಾರ ಹಂಚಿಕೆ ಆಗುವುದೇ ಎಂದು ಕೇಳಿದಾಗ, ಸಮಯವೇ ಉತ್ತರ ನೀಡ ಲಿದೆ ಎಂದರು. ನಾನು ಸಿಎಂ ಆಗಬೇಕು ಎಂಬ ಕನಸು ಜನರಿಗಿದೆ ಎಂದು ಹೇಳಿದರು. ಚಿಕ್ಕಮಗಳೂರಲ್ಲಿ ದಲಿತ ಸಂಘಟನೆ ಗಳು ಗೃಹ ಸಚಿವ ಜಿ.ಪರಮೇಶ್ವರ ಅವರು ಸಿಎಂ ಆಗಬೇಕು ಎಂದು ಘೋಷಣೆ ಕೂಗಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅವರವರ ಅಭಿಮಾನಿಗಳು ಆಸೆ ಪಡುತ್ತಾರೆ. ಅದನ್ನು ನಾನು ಬೇಡ ಎಂದು ಹೇಳಲು ಆಗುವುದಿಲ್ಲ.




### ನಮ್ಮ ಅಭಿಪ್ರಾಯ ಕೇಳಿಲ್ಲ

ನಮ್ಮ ಮೆಟ್ರೊ ದರ ಏರಿಕೆ ಬಗ್ಗೆ ತೀರ್ಮಾನ ಮಾಡಲು ಪ್ರತ್ಯೇಕ ಸಮಿತಿ ಇದೆ. ಕೇಂದ್ರ ಸರ್ಕಾರದ ಕಾರ್ಯದರ್ಶಿ ಇದರ ಮುಖ್ಯಸ್ಥರು. ಮೆಟ್ರೊ ದರ ಏರಿಕೆ ವಿಚಾರವಾಗಿ ನಮ್ಮ ಅಭಿಪ್ರಾ ಯವನ್ನು ಕೇಳಿಲ್ಲ. ನಾನು ಬೆಂಗಳೂರಿಗೆ ಮರಳಿದ ಬಳಿಕ ಈ ಬಗ್ಗೆ ಚರ್ಚೆ ಮಾಡುವೆ. ಜನರಿಗೆ ತೊಂದರೆ ನೀಡಲು ನಮಗೆ ಇಷ್ಟವಿಲ್ಲ. ಆರ್ಥಿಕ ಸ್ಥಿತಿಗತಿ ಪರಿಶೀಲನೆ ಮಾಡುತ್ತೇನೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

# ಹೈಕಮಾಂಡ್ ತೀರ್ಮಾನಕ್ಕೆ ಬದ್ಧ

## ವಿವಾದಿತ 'ಗ್ರೀನ್ ಸಿಗ್ನಲ್' ಹೇಳಿಕೆಗೆ ಎಂಎಲ್‌ಸಿ ಡಾ.ಯತೀಂದ್ರ ಉಲ್ಟಾ



**ಬೀದರ್:** ಹೈಕಮಾಂಡ್ ಅಂದರೆ ಹೈಕಮಾಂಡೇ! ಅವರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ. ನಾನು ಅದನ್ನೇ ನಿನ್ನೆ ಹೇಳಿದ್ದೇನೆ. ಹೈಕಮಾಂಡ್ ಸದ್ಯಕ್ಕೆ ನಾಯಕತ್ವ ಬದಲಾವಣೆ ಬಗ್ಗೆ ಹೇಳಿಲ್ಲ. ಹಾಗಾಗಿ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿ ಯುತ್ತಾರೆ ಎಂದು ಹೇಳಿದ್ದೇನೆಂದು ಯತೀಂದ್ರ ಸಿದ್ದರಾಮಯ್ಯ ಶನಿವಾರ ಉಲ್ಟಾ ಹೊಡೆದಿದ್ದಾರೆ.

ಮೈಸೂರಿನಲ್ಲಿ ನಿನ್ನೆ ಮಾತನಾಡಿದ್ದ ಅವರು, ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ. ಅಧಿಕಾರ ಮುಂದುವರಿಸಲು ಹೈಕಮಾಂಡ್ ಗ್ರೀನ್ ಸಿಗ್ನಲ್ ಕೊಟ್ಟಿದೆ. ಹೈಕಮಾಂಡ್ ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡುತ್ತಿಲ್ಲ. ತಂದೆಯರೇ 5 ವರ್ಷ ಸಿಎಂ ಆಗಿ ಇರುತ್ತಾರೆ ಎಂದು ನಾನು ಅಂದುಕೊಳ್ಳುತ್ತೇನೆ ಎಂದಿದ್ದರು. ಅದಕ್ಕೆ ಡಿ.ಕೆ ಶಿವಕುಮಾರ್ ಅವರು ಯತೀಂದ್ರ ಹೇಳಿದ ಮೇಲೆ ಮುಗೀತು,



ಅವರೇ ಹೈಕಮಾಂಡ್ ಎಂದು ಭಾವಿಸೋಣ ಎಂದು ತಿರುಗೇಟು ನೀಡಿದ್ದರು.

ಆದರೆ ಇಂದು ಬೀದರ್‌ನಲ್ಲಿ ಮಾತನಾಡಿ, ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರವೇ ಅಂತಿಮ. ಎಲ್ಲಾ ಪಕ್ಷಗಳಲ್ಲಿಯೂ ಮುಖ್ಯಮಂತ್ರಿ ಆಕಾಂಕ್ಷಿಗಳು ಇರುತ್ತಾರೆ. ನಿಜವಾದ ಅರ್ಹತೆ ಇರುವವರು ಸಹ ಕೇಳುತ್ತಿರುತ್ತಾರೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ನಮ್ಮ ಪಕ್ಷ ದಲ್ಲೇನೂ ಹೊಸ ವಿಚಾರವಲ್ಲ. ಹೈಕಮಾಂಡ್ ಸದ್ಯಕ್ಕೆ ಏನೂ ಹೇಳಿಲ್ಲ. ಹೀಗಾಗಿ ಸಿದ್ದರಾಮಯ್ಯನವರೇ ಮುಂದುವರಿಯುತ್ತಾರೆ ಎಂದು ಹೇಳಿದರು.

# ಶಾಸಕರೂ ತಮ್ಮ ಗೌರವ ಉಳಿಸಿಕೊಳ್ಳಬೇಕು: ಸ್ಪೀಕರ್

**ಮಂಗಳೂರು:** ವಿಧಾನಸಭೆಯ 224 ಶಾಸಕರಲ್ಲಿ ಕೆಲವು ಶಾಸಕರ ವರ್ತನೆ ಮಾತ್ರ ಅಶಿಸ್ತಿನಿಂದ ಇರುತ್ತದೆ. ಬೇರೆ ಶಾಸಕರ ವರ್ತನೆ ಈ ರೀತಿ ಇರುವುದಿಲ್ಲ. ಸದನದಲ್ಲಿ ತಪ್ಪು ಮಾಡಿದವರಿಂ ದಲೇ ಮತ್ತೆ ಅಂತಹ ತಪ್ಪುಗಳು ಪುನರಾವರ್ತನೆ ಆಗುತ್ತಿರುತ್ತವೆ ಎಂದು ಸ್ಪೀಕರ್ ಯು.ಟಿ.ಖಾದರ್ ಅಸಮಾಧಾನ ವ್ಯಕ್ತಪಡಿಸಿದರು.



ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸದನವನ್ನು ಶಿಸ್ತಿನಿಂದ ನಡೆಸು ವುದು ಸಭಾಧ್ಯಕ್ಷರ ಜವಾಬ್ದಾರಿ ಮಾತ್ರವಲ್ಲ. ಎಲ್ಲ ಸದಸ್ಯರ ಜವಾಬ್ದಾರಿಯಾಗಿದೆ. ಜನರು ಸಭೆಯ ಕಲಾಪ ವೀಕ್ಷಿಸುತ್ತಾರೆ, ನಮ್ಮನ್ನು ಗಮನಿಸುತ್ತಾರೆ ಎನ್ನುವ ಅರಿವು ಪ್ರತಿ ಶಾಸಕನಲ್ಲೂ ಇರಬೇಕು. ಶಾಸಕರು ತಮ್ಮ ಗೌರವ ಉಳಿಸಿಕೊಳ್ಳಬೇಕು ಎಂದರು.

ಎಲ್ಲವನ್ನೂ ಕಾನೂನು, ನಿಯಮಗಳಿಂದಲೇ ಜಾರಿಗೆ ತರಲು ಸಾಧ್ಯವಾಗದು. ಶಾಸಕರಿಗೆ ತಮ್ಮ ಹೊಣೆಗಾರಿಕೆಯ ಅರಿವು ಇರಬೇಕು. ಕಾನೂನು ಮತ್ತು ನಿಯಮದ ಬಗ್ಗೆ ತಿಳಿವಳಿಕೆ ಇರುವವರೇ ಶಾಸಕ ರಾಗಿ ಆಯ್ಕೆಯಾಗಿ ಬರುವವರು ಎಂದು ಹೇಳಿದರು.

ಶಾಸಕ ಶಿವಲಿಂಗೇಗೌಡ ಅವರು ಸದನದಲ್ಲಿ ಬಳಕೆ ಮಾಡಿರುವ ಪದಗಳ

ಪುಟ 2ಕ್ಕೆ

# ಹೈಕಮಾಂಡ್ ಹೇಳುವವರೆಗೂ ಸಿದ್ದರಾಮಯ್ಯ ಸಿಎಂ: ಪರಮೇಶ್ವರ್

**ಮೈಸೂರು:** ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಯತೀಂದ್ರ ಅವರು ಅವರಿಗಿರೂವ ಮಾಹಿತಿ ಮೇರೆಗೆ ಮಾತನಾಡಿರಬಹುದು. ಆದರೆ, ನಮ್ಮಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮವಾಗಿದೆ. ಹೈಕಮಾಂಡ್ ಒಂದು ವೇಳೆ ನಾಳೆಯೇ ಬದಲಾವಣೆ ಮಾಡಿದರೆ ಬದಲಾಗಬಹುದು, ಮುಂದುವರೆಸಿದರೆ ಮುಂದುವರೆಯಲು ಬಹುದಾಗಿದೆ. ಹೀಗಾಗಿ ಹೈಕಮಾಂಡ್ ಅಂತಿಮವಾಗಿ ನಿರ್ಧಾರ ಕೈಗೊಳ್ಳಲಿದೆ ಎಂದರು.

ನನ್ನ ಗಮನಕ್ಕೆ ಬಂದಂತೆ ಎಲ್ಲಿಯೂ ಸಿಎಂ ಅಧಿಕಾರ ಹಂಚಿಕೆಯ ಪ್ರಸ್ತಾಪವೇ ನಡೆದಿಲ್ಲ. ಅಂತಹ ಪ್ರಸ್ತಾಪವೇ ಇಲ್ಲ ಎಂದ ಮೇಲೆ ಬದಲಾವಣೆ ಪ್ರಶ್ನೆಗಳೇ ಇಲ್ಲ. ಸಿದ್ದರಾಮಯ್ಯ ಅವರನ್ನು ಸಿಎಂ ಎಂದು ಹೈಕಮಾಂಡ್ ಘೋಷಣೆ ಮಾಡಿದೆ. ಎಲ್ಲಾ ಬೆಳವಣಿಗೆಗಳನ್ನು ಗಮನಿಸುತ್ತಿದೆ. ಸಮಯ ಸಂದರ್ಭ ನೋಡಿ ಬದಲಾವಣೆ ಮಾಡಬೇಕಾ ಅಥವಾ ಮುಂದುವರೆಸುವ ಬಗ್ಗೆಯಾಗಲಿ ತೀರ್ಮಾನಿಸಲಿದೆ ಎಂದು ತಿಳಿಸಿದರು.

ಸಿಎಂ ಸ್ಥಾನ ಕುರಿತು ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಇದೆಲ್ಲಾ ಕೇವಲಮಾಧ್ಯಮಗಳ ಸೃಷ್ಟಿಯಾಗಿದೆ. ಹಾಗೊಂದು ವೇಳೆ ಅಧಿಕಾರ ಗೊಂದಲ ಇದ್ದಿದ್ದರೆ, ಸಿಎಲ್‌ಪಿ ಸಭೆಯಲ್ಲಿ ಶಾಸಕರು



ಕೇಳುತ್ತಿದ್ದರು.

ಯಾರು ಕೂಡ ಆ ಬಗ್ಗೆ ಮಾತನಾಡಿಲ್ಲ ಹಾಗಾಗಿ ಯಾವ ಗೊಂದಲ ಇಲ್ಲ ಎಂದು ಅರ್ಥ ಎಂದರು.

ಇನ್ನೂ ಅನೇಕರಿಗೆ ಹಾಗೂ ಸ್ವತಃ ನನಗೆ ಕೆಲವು ಕಡೆ ಪರಮೇಶ್ವರ್ ಮುಂದಿನ ಸಿಎಂ ಎಂದು ಕಾರ್ಯಕರ್ತರು ಜೈ ಜೈ ಎನ್ನುತ್ತಾರೆ ಹಾಗೆ ಅಂದ ಕೂಡಲೇ ಸಿಎಂ ಆಗಲು ಆಗುತ್ತಾ.? ಅದೆಲ್ಲವನ್ನೂ ಹೈಕಮಾಂಡ್ ನಿರ್ಧಾರ ಮಾಡಬೇಕು.

ನಾನು ಹೋದ ಮೇಲೆ ಇನ್ನೊಬ್ಬರ ಪರ

ಪುಟ 2ಕ್ಕೆ

# ಎಲ್ಲಾ ಕ್ಷೇತ್ರದಲ್ಲೂ ಯತೀಂದ್ರ ಹಸ್ತಕ್ಷೇಪ: ಶಾಸಕ ತನ್ವೀರ್ ಸೇಠ್

**ಮೈಸೂರು:** ಮುಖ್ಯಮಂತ್ರಿ ಪುತ್ರ ಯತೀಂದ್ರ ಅವರು ಹಸ್ತಕ್ಷೇಪ ವಿವಿಧ ಇಲಾಖೆಗಳಲ್ಲಿ ಹಸ್ತಕ್ಷೇಪ ವಿಚಾರದ ಬಗ್ಗೆ ಸಮಯ ಬಂದಾಗ ಮಾತನಾಡುತ್ತೇನೆ ಎಂದು ಶಾಸಕ ತನ್ವೀರ್ ಸೇಠ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ವಿವಿಧ ಸಚಿವರ ಇಲಾಖೆಗಳಲ್ಲಿ ಯತೀಂದ್ರ ಹಸ್ತಕ್ಷೇಪದ ಬಗ್ಗೆ ನಗರದಲ್ಲಿ ಶನಿವಾರ ಪ್ರತಿಕ್ರಿಯೆ ನೀಡಿದ ಅವರು, ಕೇವಲ ನನ್ನ ಕ್ಷೇತ್ರವಲ್ಲ. ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿಯೂ ಹಸ್ತಕ್ಷೇಪ ಮಾಡುತ್ತಿದ್ದಾರೆ. ಸಮಯ ಬಂದಾಗ ಹೇಳುತ್ತೇನೆಂದು ತಿಳಿಸಿದರು. ಕೆಲವು ಅಧಿಕಾರಿಗಳು ಶಂಖದಿಂದ ಬಂದರೆ ತೀರ್ಥ ಎನ್ನುವಂತೆ ವರ್ತನೆ ತೋರುತ್ತಿದ್ದಾರೆ. ನಾವು ಕೂಡ ಶಂಖ ಊದುವ ಕೆಲಸ ಮಾಡುತ್ತೇವೆ ಮಾರ್ಮಿಕವಾಗಿ ಹೇಳಿದರು.

ಮೈಸೂರಿನಲ್ಲಿ ಸಿಎಂ ಸ್ಥಾನ ಹಂಚಿಕೆ ಕುರಿತಂತೆ 5 ವರ್ಷದ ಸಿದ್ದರಾಮಯ್ಯ ಅವರೇ ಸಿಎಂ ಎಂಬ ಯತೀಂದ್ರರು ಹೇಳಿಕೆ ಬಗ್ಗೆ ಪ್ರತಿಕ್ರಯಿಸಿ, ಈ ಹಿಂದೆಯೂ ನಾನು ಹೇಳಿದ್ದೇನೆ. ಜನ ನಮಗೆ ಆರ್ಶಿವಾದ ನೀಡಿದ್ದಾರೆ. 136 ಶಾಸಕರು ಗೆದಿದ್ದಾರೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಯಾರಿಗೂ ಅಧಿಕಾರ ಶಾಶ್ವತ ಇಲ್ಲ. ನಮ್ಮ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ ಎಂದರು.

ನಾನು ಡಿಕೆಶಿ ಹೇಳಿಕೆಗೆ ಸಮರ್ಥಿಸುತ್ತೇನೆ. ನಾನು ಡಿಕೆಶಿ ಅವರ ಹೇಳಿಕೆಯನ್ನು ಸಮ್ಮತಿಯಿದೆ ಎಂದರು. ಸಂಪುಟ ಪುನರ್ ರಚನೆ ವಿಳಂಬ ವಿಚಾರವಾಗಿ ಪ್ರತಿಕ್ರಯಿಸಿ, ಯಾವ ಜನವರಿ ಅಂತ ಹೇಳಿಲ್ಲ ಎಂದು ವ್ಯಂಗ್ಯವಾಡಿದರು.

# 140 ಕೋಟಿ ಬೆಲೆಬಾಳುವ 2 ಎಕರೆ ಒತ್ತುವರಿ ತೆರವು

**ಮೈಸೂರು:** ನಗರದ ವಿಜಯನಗರ 3ನೇ ಹಂತದಲ್ಲಿ ಒತ್ತುವರಿ ಮಾಡಿ ಕೊಂಡಿದ್ದ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸುಮಾರು 7 ಎಕರೆ ಜಾಗವನ್ನು ಶನಿವಾರ ಬೆಳಗ್ಗೆ ಕಾರ್ಯಾಚರಣೆ ನಡೆಸಿ ತೆರವು ಮಾಡಲಾಯಿತು. ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಸುಮಾರು 140 ಕೋಟಿ ಮೌಲ್ಯದ ಜಾಗವನ್ನು ಅಧಿಕಾರಿಗಳು ತೆರವುಗೊಳಿಸಿ ವಶಕ್ಕೆ ಪಡೆದುಕೊಂಡಿದ್ದಾರೆ. ನಗರದಲ್ಲಿ ಅತಿಕ್ರಮಣಗಳ ವಿರುದ್ಧ ಮುಂದುವರಿದ ಕ್ರಮದ ಭಾಗವಾಗಿ ಈ ಕಾರ್ಯಾಚರಣೆ ನಡೆದಿದೆ. ಅತಿಕ್ರಮಣ ಕುರಿತು ಬಂದ ದೂರುಗಳ ಹಿನ್ನೆಲೆ ಎಂಡಿಎ ಆಯುಕ್ತ ರಕ್ಷಿತ್, ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ ನಡೆಸಿ ಅಕ್ರಮ ಕಟ್ಟಡ ಗಳು ಹಾಗೂ ತಾತ್ಕಾಲಿಕ ನಿರ್ಮಾಣಗಳನ್ನು ತೆರವುಗೊಳಿಸಿದರು. ಈಗ ಜಾಗ ವನ್ನು ಸಂಪೂರ್ಣವಾಗಿ ಖಾಲಿ ಮಾಡಿ ವಶಕ್ಕೆ ಪಡೆಯಲಾಗಿದೆ.

# ಕೋಟ್ಯಂತರ ಬೆಲೆ ಗಾಂಜಾ ವಶ: ಮೂವರ ಬಂಧನ

**ಬೆಂಗಳೂರು:** ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಕೋಟಿ ಕೋಟಿ ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ. ಮಲೇಶಿಯಾದಿಂದ ಬೆಂಗಳೂರಿಗೆ ಬಂದ ಪ್ರಯಾಣಿಕನಿಂದ 1.91 ಕೋಟಿ ರೂ. ಮೌಲ್ಯದ



5.48 ಕೆ.ಜಿ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಪುಕೆಟ್‌ನಿಂದ ಬಂದ ಇಬ್ಬರು ಪ್ರಯಾಣಿಕರನ್ನು ಪರಿಶೀಲನೆಗೆ ಒಳಪಡಿಸಿದಾಗ 1.6 ಕೋಟಿ ರೂ. ಮೌಲ್ಯದ 3.03 ಕೆಜಿ ಹೈಡ್ರೋಪೋನಿಕ್ ಗಾಂಜಾ ಪತ್ತೆಯಾಗಿದೆ. ಎರಡು ಪ್ರತ್ಯೇಕ

ಪುಟ 2ಕ್ಕೆ

# ಮೃಗಾಲಯದಲ್ಲಿ 'ಪ್ರಾಚಿ' ಸಾವು

**ಮೈಸೂರು:** ನಗರದ ಚಾಮರಾಜೇಂದ್ರ ಮೃಗಾಲಯದ ಸುಮಾರು 10 ವರ್ಷ ವಯಸ್ಸಿನ ಪ್ರಾಚಿ ಎಂಬ ಹೆಸರಿನ ತಾಯಿ ಹೆಣ್ಣು ಜೀಬ್ರಾ ಮರಿಗೆ ಜನ್ಮ ನೀಡಿ ಸಾವನ್ನಪ್ಪಿದೆ. 2018ರ ಸೆ.4ರಲ್ಲಿ ಇಸ್ರೇಲ್‌ನ



ರಾಮತ್ ಗ್ಯಾನ್‌ನಲ್ಲಿರುವ ಮೃಗಾಲಯದಿಂದ ತರಲಾಗಿತ್ತು. ಜೀಬ್ರವು ಮೈಸೂರು ಮೃಗಾಲಯದಲ್ಲಿ ಈಗಾಗಲೇ 5 ಮರಿಗಳಿಗೆ ಜನ್ಮ ನೀಡಿತ್ತು. ಪ್ರಸ್ತುತ ಪ್ರಾಚಿಯು ಗರ್ಭವತಿಯಾಗಿತ್ತು. ಕರುಳಿಗೆ

ಪುಟ 2ಕ್ಕೆ

# ಕೆರೆಗೆ ಈಜಲು ಹೋದ ವಿದ್ಯಾರ್ಥಿ ನೀರುಪಾಲು

**ಹಾಸನ:** ಕೆರೆಗೆ ಈಜಲು ಹೋಗಿದ್ದ ವಿದ್ಯಾರ್ಥಿ ನೀರುಪಾಲಾದ ಘಟನೆ ಹಾಸನದ ಉದ್ದೂರು ಗ್ರಾಮದಲ್ಲಿ ಶನಿವಾರ ನಡೆದಿದೆ. ಮೃತಪಟ್ಟ ವಿದ್ಯಾರ್ಥಿಯನ್ನು ಪ್ರಜ್ವಲ್ (18) ಎಂದು ಗುರುತಿಸಲಾಗಿದೆ. ಈತ ಖಾಸಗಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ.



ಶನಿವಾರ ಮಧ್ಯಾಹ್ನ ನಾಲ್ವರು ಸ್ನೇಹಿತರ ಜೊತೆ ಉದ್ದೂರು ಕೆರೆಗೆ ಈಜಲು ತೆರಳಿದ್ದ. ಐವರಲ್ಲಿ ಇಬ್ಬರು ಸ್ನೇಹಿತರು ಈಜಲು ನೀರಿಗೆ ಇಳಿದಿದ್ದರು. ಕೆರೆಯ ಆಳವಾದ ಪ್ರದೇಶಕ್ಕೆ ಈಜುತ್ತಾ ಹೋಗಿದ್ದ ಪ್ರಜ್ವಲ್ ವಾಪಾಸ್ ಬರಲು ಆಗದೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಅಗ್ನಿಶಾಮಕದಳದ ಸಿಬ್ಬಂದಿ ಕೆರೆಯಿಂದ ಮೃತದೇಹವನ್ನು ಹೊರಗೆ ತೆಗೆದಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

# ಎಂಎಸ್‌ಐಎಲ್ ಚಿಟ್ಸ್‌ನಲ್ಲಿ ಹೂಡಿಕೆ ಸುರಕ್ಷಿತ

## ಸರ್ಕಾರಿ ಸ್ವಾಮ್ಯದ ಸಂಸ್ಥೆ ಆಗಿರುವುದರಿಂದ ಮೋಸ ಆಗಲ್ಲ: ಸಿದ್ದರಾಮಯ್ಯ

**ಬೆಂಗಳೂರು:** ಎಂಎಸ್‌ಐಎಲ್ ಸರ್ಕಾರಿ ಸ್ವಾಮ್ಯದ ಸಂಸ್ಥೆ ಆಗಿರುವುದರಿಂದ ಇದರಲ್ಲಿ ಹೂಡುವರ ಹಣ ಸುರಕ್ಷಿತವಾಗಿರುತ್ತದೆ. ಮೋಸ ಆಗಲು ಸಾಧ್ಯವೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದಲ್ಲಿ ಶನಿವಾರ ಅವರು ಎಂಎಸ್‌ಐಎಲ್ ಚಿಟ್ಸ್ ಸಂಸ್ಥೆಯ ಹೊಸ ತಂತ್ರಾಂಶ ಮತ್ತು ಮೊಬೈಲ್ ಆಪ್ ಬಿಡುಗಡೆ ಮಾಡಿ ಅವರು ಮಾತನಾಡಿದರು. ಎಂಎಸ್‌ಐಎಲ್ ಆರಂಭವಾಗಿ 60 ವರ್ಷಗಳಾಯಿತು. ಜನರ ವಿಶ್ವಾಸ, ನಂಬಿಕೆ, ಪ್ರೀತಿ ಉಳಿಸಿಕೊಳ್ಳುವ ಕೆಲಸ ಮಾಡಿದೆ. 2005ರಿಂದ ಚಿಟ್ ಫಂಡ್ ವ್ಯವಹಾರ ಆರಂಭವಾಗಿತ್ತು. ಆರಂಭದಲ್ಲಿ ಅಷ್ಟ ದೊಡ್ಡ ಪ್ರಮಾಣದಲ್ಲಿ ಆಗಿರಲಿಲ್ಲ. ಇತ್ತೀಚೆಗೆ ಎಂಎಸ್‌ಐಎಲ್ ಈ ಬಗ್ಗೆ ಹೆಚ್ಚು ಗಮನ ಕೊಡುತ್ತಿದ್ದಾರೆ ಎಂದರು.



ಗೃಹ ಲಕ್ಷ್ಮಿ ಯೋಜನೆಯಲ್ಲಿ ನಾವು ಮಾಸಿಕ 2 ಸಾವಿರ ಕೊಡುತ್ತಿದ್ದೇವೆ. ಶಕ್ತಿ ಯೋಜನೆ ಮೂಲಕ ಮಹಿಳೆಯರು ಉಚಿತ ಪ್ರಯಾಣ ಮಾಡಲು ಅವಕಾಶ ನೀಡಲಾಗಿದೆ. ಗೃಹ ಜ್ಯೋತಿ ಯೋಜನೆಯಲ್ಲಿ ಯಾರು ಕೂಡಾ ವಿದ್ಯುತ್ ಬಿಲ್ ಕಟ್ಟುವಂತಿಲ್ಲ. ಅನ್ನ ಭಾಗ್ಯದಲ್ಲಿ ಅಕ್ಕಿ ಕೊಡುತ್ತಿದ್ದೇವೆ. ಹೀಗಾಗಿ, ಹಣ ಉಳಿತಾಯ ಆಗುತ್ತದೆ. ಹೀಗೆ ಉಳಿತಾಯ ಆಗುವ ಹಣ ಹೂಡಿಕೆ ಮಾಡಿದರೆ, ಬೇಕಾದ ಸಮಯದಲ್ಲಿ ಬಳಕೆ ಮಾಡಬಹುದು ಎಂದು ಸಲಹೆ ನಿಡಿದರು.

ಹಳ್ಳಿ ಕಡೆ ಕೆಲವರು ಚೀಟಿ ಹಾಕುತ್ತಾರೆ. ಇದರಿಂದ ಮೋಸ ಮಾಡುತ್ತಾರೆ. ಖಾಸಗಿ ಚೀಟಿಗಳಲ್ಲಿ ಗ್ಯಾರಂಟಿ ಇಲ್ಲ. ಎಂಎಸ್‌ಐಎಲ್ ಸರ್ಕಾರಿ ಸಂಸ್ಥೆ ಆಗಿರುವುದರಿಂದ ಇಲ್ಲಿ ಹಣಕ್ಕೆ ಗ್ಯಾರಂಟಿ ಇದೆ. ಹಣ ವಾಪಸ್ ಬರುತ್ತದೆ ಎಂದು ನಂಬಿಕೆ ಇಟ್ಟುಕೊಳ್ಳಬಹುದು.

ಪುಟ 2ಕ್ಕೆ

# ಸೇನಾ ಕ್ಯಾಂಟೀನ್ ಮಾದರಿಯಲ್ಲಿ ಎಂಎಸ್‌ಐಎಲ್ ಸ್ಟೋರ್: ಎಂ.ಬಿ.ಪಾಟೀಲ್

**ಬೆಂಗಳೂರು:** ಸರ್ಕಾರಿ ನೌಕರರಿಗೆ ದಿನಬಳಕೆಯ ವಸ್ತುಗಳನ್ನು ಸಬ್ಸಿಡಿ ದರದಲ್ಲಿ ಸಿಗುವಂತೆ ಮಾಡಲು ಸೇನಾ ಕ್ಯಾಂಟೀನ್ ಮಾದರಿಯಲ್ಲಿ ಎಂಎಸ್‌ಐಎಲ್ ಸ್ಟೋರ್ ತೆರೆಯುವ ಚಿಂತನೆ ಇದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.



ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರನ್ಯಾಷನಲ್ ಲಿಮಿಟೆಡ್ (ಎಂಎಸ್ ಐಎಲ್) ಸಂಸ್ಥೆಯು ಸುಗಮ ಮತ್ತು ಪಾರದರ್ಶಕ ಚಿಟ್ ಫಂಡ್ ವ್ಯವಹಾರದ ಅನುಕೂಲಕ್ಕೆ ಅಭಿವೃದ್ಧಿಪಡಿಸಿರುವ ತಂತ್ರಾಂಶ ಮತ್ತು ಮೊಬೈಲ್ ಆಪ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಎಂಎಸ್‌ಐಎಲ್ ಸ್ಟೋರ್ ತೆರೆಯುವ ಕುರಿತಂತೆ ಸಾಧಕ–ಬಾಧಕ ಅಧ್ಯಯನ ಮಾಡಲಾಗುತ್ತಿದೆ. ಇದರಿಂದ 20 ಲಕ್ಷ ಕುಟುಂಬಗಳಿಗೆ ಅನುಕೂಲ ಆಗಲಿದೆ ಎಂದೂ ತಿಳಿಸಿದರು.

ಎಂಎಸ್‌ಐಎಲ್ ಚಿಟ್ಸ್ ಸಂಸ್ಥೆಯು ಈಗ 27 ಶಾಖೆಗಳನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಿಗೂ ವಿಸ್ತರಿಸಲಾಗುವುದು. ಮುಖ್ಯವಾಗಿ ಗ್ರಾಮೀಣ ಭಾಗ ಮತ್ತು ಮಹಿಳೆಯರ ಉಳಿತಾಯದ ಮೇಲೆ ನಮ್ಮ ಗಮನವಿದೆ. ನಮ್ಮಲ್ಲಿ ಬ್ಯಾಂಕುಗಳಲ್ಲಿ ಕೊಡುವುದಕ್ಕಿಂತ ಹೆಚ್ಚಿನ ಲಾಭ ಇದರ ಮೂಲಕ ಸಿಗಲಿದೆ ಎಂದು ಹೇಳಿದರು.

## ಮೊದಲ ಪುಟದಿಂದ

### ಹೈಕಮಾಂಡ್ ಹೇಳುವವರೆಗೂ ಸಿದ್ದರಾಮಯ್ಯ ಸಿಎಂ: ಪರಮೇಶ್ವರ್

ಜೈಕಾರ ಕೂಗುತ್ತಾರೆ. ಹೀಗಾಗಿ ಘೋಷಣೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕಾಗಿಲ್ಲ. ಇನ್ನೂ ಅಧಿಕಾರ ಹಂಚಿಕೆ ವಿಚಾರದಲ್ಲಿ ಎಲ್ಲಾ ಶಾಸಕರು ಮಾತನಾಡುತ್ತಿದ್ದಾರೆ. ಅವರವರ ಅಭಿಪ್ರಾಯ ಹೇಳುತ್ತಿದ್ದಾರೆ. ಆದರೆ ಅಂತಿಮವಾಗಿ ಪಕ್ಷದ ಹೈಕಮಾಂಡ್ ತಿರ್ಮಾನಿಸಲಿದೆ. ನಾನು ಸಿಎಂ ಆಗುವುದಕ್ಕೂ ಹೈಕಮಾಂಡ್ ತೀರ್ಮಾನಿಸಿದಾಗ ಎಂದು ತಮ್ಮ ಪರ ವಿವಿಧೆಡೆ ಘೋಷಣೆ ಕೂಗಿದ ಕುರಿತು ಸ್ಪಷ್ಟೀಕರಣ ನೀಡಿದರು.

ಮೈಸೂರಿನಲ್ಲಿ ಡ್ರಗ್ಸ್ ಪತ್ತೆ ವಿಚಾರವಾಗಿ ಮಾತನಾಡಿ, ಮೈಸೂರಿನಲ್ಲಿ ಯಾವುದೇ ಡ್ರಗ್ ಪತ್ತೆಯಾಗಿಲ್ಲ. ಎನ್ ಸಿ ಬಿ ಕೋರ್ಟ್ ಗೆ ಕೊಟ್ಟಿರುವ ಮಾಹಿತಿಯಲ್ಲಿ ಡ್ರಗ್ಸ್ ಸಿಕ್ಕಿಲ್ಲ ಎಂದು ಹೇಳಿದೆ. ಪತ್ರಿಕಾ ಹೇಳಿಕೆಯಲ್ಲಿ ಡ್ರಗ್ಸ್ ಸಿಕ್ಕಿದೆ ಎಂದು ಹೇಳಿದೆ. ಯಾಕೆ ಈ ರೀತಿ ದ್ವಂದ್ವ ಮಾಡಿದರು ಎಂಬುದು ಗೊತ್ತಿಲ್ಲ. ಇದರ ಹಿಂದಿನ ಉದ್ದೇಶ ಏನು ಅಂತ ಎನ್ಸಿಬಿಯೇ ಹೇಳಬೇಕು. ಎನ್ ಸಿ ಬಿ ರೇಡ್ ಮಾಡಿದಾಗ ನಮ್ಮ ಪೊಲೀಸರು ಜೊತೆಯಲ್ಲೇ ಇದ್ದರು.ರೈಡ್ ನಲ್ಲಿ ಯಾವುದೇ ಡ್ರಗ್ಸ್ ಸಿಕ್ಕಿಲ್ಲ. ಆದರೂ ಎರಡೆರಡು ಹೇಳಿಕೆಗಳನ್ನ ಎನ್ ಸಿ ಬಿ ಕೊಟ್ಟಿದೆ.

ಮೈಸೂರು ಪೊಲೀಸರು ನನಗೆ ಸರಿಯಾದ ಮಾಹಿತಿ ಕೊಟ್ಟಿದ್ದಾರೆ. ಮೈಸೂರಿನಲ್ಲಿ ಯಾವ ಡ್ರಗ್ಸ್ ಪತ್ತೆಯಾಗಿಲ್ಲ.ಆದರೂ ರಾಜ್ಯದ ಎಲ್ಲಾ ಕೆಮಿಕಲ್ ಫ್ಯಾಕ್ಟರಿಗಳ ಮೇಲೆ ಹೆಚ್ಚಿನ ನಿಗಾ ಇಡುವುವಂತೆ ಸೂಚನೆ ಕೊಟ್ಟಿದ್ದೇನೆ ಎಂದರು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸಾಲ ಮನ್ನ ವಿಚಾರವಾಗಿ ಮಾತನಾಡಿದ ಅವರು, ಅದರಲ್ಲಿ ತಪ್ಪೇನಿದೆ ಸಾಲ ಮನ್ನ ಹೊಸದೇನು ಅಲ್ಲ. ಕೇಂದ್ರ ಮತ್ತು ರಾಜ್ಯ ಎರಡು ಸರ್ಕಾರಗಳು ಸಾಲ ಮನ್ನಾ ಮಾಡಿದೆ. ರೈತರ ಸಾಲ ಮನ್ನಾ ಆಗಿಲ್ವ, ಹಿಂದುಳಿದ ವರ್ಗಗಳ ಸಾಲ ಮನ್ನಾ ಆಗಿಲ್ಲವಾ.? ಇದು ಅದೇ ರೀತಿ. ಯಾರಿಗೆ ಸಾಲ ಕಟ್ಟಲು ಆಗುವುದಿಲವೋ ಅಂತವರಿಗೆ ಸಾಲ ಮನ್ನ ಮಾಡುತ್ತೇವೆ. ಇದು ಕೂಡ ಅದೇ ರೀತಿಯ ಪ್ರಕ್ರಿಯೆ ಎಂದು ಹೇಳಿದರು.

### ಶಾಸಕರೂ ತಮ್ಮ ಗೌರವ ಉಳಿಸಿಕೊಳ್ಳಬೇಕು: ಸ್ಪೀಕರ್

ಕುರಿತು ಆಕ್ಷೇಪ ವ್ಯಕ್ತವಾಗಿರುವ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು. ಸದನ ಎಂದರೆ ಕುಟುಂಬ ಇದ್ದಂತೆ. ಇಂತಹ ಚರ್ಚೆಗಳು ಹಿಂದೆಯೂ ಆಗಿವೆ. ಪ್ರೀತಿಯಿಂದ ಮಾತಾಡುವಾಗ, ಅಣ್ಣ ತಮ್ಮಂದಿರ ನಡುವಿನ ಚರ್ಚೆಯಂತೆ ಆಚೀಚೆ ಆಗಿರಬಹುದು. ಕೆಲವು ಸಂದರ್ಭಗಳಲ್ಲಿ ಪ್ರತಿಕ್ರಿಯಿಸುವಾಗ ಭಾವನಾತ್ಮಕ ಮಾತುಗಳು ಬಂದು ಬಿಡುತ್ತವೆಂದು ಹೇಳಿದರು.

### ಮೃಗಾಲಯದಲ್ಲಿ 'ಪ್ರಾಚಿ' ಸಾವು

ಸಂಬಂಧಿಸಿದ ಖಾಯಿಲೆಯಿಂದ ಬಳಲುತಿತ್ತು. ಹೆಣ್ಣು ಮರಿಗೆ ಜನ್ಮ ನೀಡಿದ್ದು, ಜನ್ಮ ನೀಡಿದ ಎರಡು ದಿನಗಳ ನಂತರ ಚಿಕಿತ್ಸೆಗೆ, ಸ್ಪಂದಿಸದೆ ಶನಿವಾರ ಮರಣ ಹೊಂದಿದೆ. ಅಲ್ಲದೆ ತಾಯಿಯನ್ನು ಕಳೆದುಕೊಂಡ ಮರಿಯನ್ನು ಕೈಹಾರೈಕೆ ಮಾಡುತ್ತಿರುವುದಾಗಿ ಮೃಗಾಲಯ ತಿಳಿಸಿದೆ.

### ಎಂಎಸ್‌ಐಎಲ್ ಚಿಟ್‌ನಲ್ಲಿ ಹೂಡಿಕೆ ಸುರಕ್ಷಿತ

ಎಂಎಸ್‌ಐಎಲ್‌ನವರು ಶೇ.5ರಷ್ಟು ಕಮಿಷನ್ ತೆಗೆದುಕೊಳ್ಳುತ್ತಾರೆ. ಲಾಭ ಮಾಡುತ್ತಾರೆ. ಅದು ಮಾಡಲೇಬೇಕು. ಕೇರಳದಲ್ಲಿ ಚಿಟ್ನಲ್ಲಿ 47 ಸಾವಿರ ಕೋಟಿ ವಹಿವಾಟು ನಡೆಯುತ್ತಿದೆ. ನಾವು ಎರಡು ವರ್ಷಗಳಲ್ಲಿ 5 ಸಾವಿರ ಕೋಟಿ, ನಂತರ ವರ್ಷಗಳಲ್ಲಿ 10 ಸಾವಿರ ಕೋಟಿ ವಹಿವಾಟು ಮಾಡುವ ಗುರಿ ಇದೆ ಎಂದರು. ಮೈಕ್ರೊ ಫೈನಾನ್ಸ್‌ನಲ್ಲಿ ಬಹಳ ಜನ ಹಣ ಕಳೆದುಕೊಂಡಿದ್ದಾರೆ. ಅದಕ್ಕಾಗಿ ನಾವು ಕಾನೂನು ಮಾಡಿದ್ದೇವೆ. ಮೈಕ್ರೊ ಫೈನಾನ್ಸ್‌ನವರು ಸಾಲು ಕೊಟ್ಟು ಕಿರುಕುಳ ಕೊಡಬಾರದು. ಸಾಲ ಪಡೆದವರು ಕಿರುಕುಳಕ್ಕೆ ಒಳಗಾಗಬಾರದು ಎಂದು ಕಾಯ್ದೆ ಮಾಡಿದ್ದೇವೆ ಎಂದು ಹೇಳಿದರು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಎಂಎಸ್‌ಐಎಲ್ ಅಧ್ಯಕ್ಷ ಪುಟ್ಟರಂಗಶೆಟ್ಟಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇತರರು ಇದ್ದರು.

### ಮೂವರ ಬಂಧನ

ಪ್ರಕರಣಗಳಲ್ಲಿ ಮೂವರು ಪ್ರಯಾಣಿಕರನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

### 54 ನಿಗಮ-ಮಂಡಳಿಗಳ ಅಧ್ಯಕ್ಷರ ಅವಧಿ ವಿಸ್ತರಣೆ

ಬೆಂಗಳೂರು: ಅವಧಿ ಪೂರ್ಣಗೊಂಡಿರುವ ರಾಜ್ಯದ ವಿವಿಧ 54 ನಿಗಮ- ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರ ಅಧಿಕಾರಾವಧಿಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್, ದೇವರಾಜ ಅರಸು ನಿಗಮದ ಅಧ್ಯಕ್ಷ ಕೀರ್ತಿ ಗಣೇಶ್, ಒಕ್ಕಲಿಗ ನಿಗಮ ಅಧ್ಯಕ್ಷ ಎಂ.ಎಸ್. ಆತ್ಮಾನಂದ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್. ಮರಿಯೋಜಿ ರಾವ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಪಿ. ಸುಜ್ಞಾನ ಮೂರ್ತಿ ಸೇರಿದಂತೆ ವಿವಿಧ ನಿಗಮ-ಮಂಡಳಿಗಳ ಅಧ್ಯಕ್ಷರನ್ನು ಅದೇ ಹುದ್ದೆಯಲ್ಲಿ ಮುಂದುವರೆಸಿದೆ. ಅವರಿಗೆ ನೀಡಲಾಗುತ್ತಿದ್ದ ರಾಜ್ಯ ಸಚಿವರ ಸ್ಥಾನಮಾನ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಅಪ್ಪಾಜಿ ನಾಡಗೌಡ, ರಾಜು ಕಾಗೆ, ಎಚ್.ಸಿ.ಬಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ, ಬೇಳೂರು ಗೋಪಾಲಕೃಷ್ಣ, ಟಿ.ಡಿ.ರಾಜೇಗೌಡ, ಶರತ್ ಬಚ್ಚೇಗೌಡ ಸೇರಿ ಅವಧಿ ಪೂರ್ಣಗೊಂಡಿದ್ದ ವಿವಿಧ 25 ನಿಗಮ ಮಂಡಳಿಗಳ ಅಧ್ಯಕ್ಷರ ಪದಾವಧಿಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿತ್ತು.

---

ಪಾಲಿಕೆಯ ಅಭಯ್ ತಂಡದ ನಡೆ ವಿರುದ್ಧ ಪ್ರತಿಭಟನೆ

# ತೆರವು ವೇಳೆ ಅಂಬೇಡ್ಕರ್ ಫ್ಲೆಕ್ಸ್‌ಗೆ ಅಪಮಾನ

ಮೈಸೂರು: ತೆರವುಗೊಳಿಸುವ ನೆಪದಲ್ಲಿ ಅಂಬೇಡ್ಕರ್ ಫ್ಲೆಕ್ಸ್ ಗೆ ಅಪಮಾನ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಸ್ಥಳೀಯರು ಪಾಲಿಕೆಯ ಅಭಯ್ ತಂಡದ ನಡೆ ವಿರುದ್ಧ ಪ್ರತಿಭಟಿಸಿದ ಘಟನೆ ಯರಗನಹಳ್ಳಿಯಲ್ಲಿ ನಡೆದಿದೆ.

ಮೈಸೂರು ನಗರಪಾಲಿಕೆಯ ವ್ಯಾಪ್ತಿಯ ಯರಗನಹಳ್ಳಿ ಅಂಬೇಡ್ಕರ್ ಮಹಾದ್ವಾರ ಗುದ್ದಲಿ ಪೂಜೆ ಕಾರ್ಯಕ್ರಮ ನಡೆಸಲಾಗಿತ್ತು. ಇದಕ್ಕಾಗಿ ಮಹದೇವಪ್ಪ ವೃತ್ತ( ಟೆರಿಷಿಯನ್ ಕಾಲೇಜು ವೃತ್ತ) ಸೇರಿ ದೇವೇಗೌಡ ವೃತ್ತದವರೆಗೂ ಅಂಬೇಡ್ಕರ್ ಫ್ಲೆಕ್ಸ್ ಹಾಕಲಾಗಿತ್ತು. ಈ ವೇಳರ ಅನುಮತಿ ಮುಗಿದ ಹಿನ್ನೆಲೆಯಲ್ಲಿ ಎಲ್ಲಾ ಫ್ಲೆಕ್ಸ್ ಗಳನ್ನು ಪಾಲಿಕೆಯ ಅಭಯ ತಂಡ ತೆರವುಗೊಳಿಸಿದ್ದಾರೆ. ವೃತ್ತದಲ್ಲಿದ್ದ ಅಂಬೇಡ್ಕರ್ ಫ್ಲೆಕ್ಸ್ ತೆರವುಗೊಳಿಸಿ ಸಮೀಪದ ಪಕ್ಕದಲ್ಲಿ ಇಟ್ಟಿದ್ದು, ಈ ವೇಳೆ ಗಾಳಿಗೆ ಫ್ಲೆಕ್ಸ್ ತಲೆಕೆಳಕಾಗಿದೆ. ಇದನ್ನು ಗಮನಿಸಿದ ಸ್ಥಳೀಯರು ಅಂಬೇಡ್ಕರ್ ಫ್ಲೆಕ್ಸ್ ಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ ಪ್ರತಿಭಟಿಸಿದರು.



ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಶಾಸಕ ತನ್ವೀರ್ ಸೇಠ್ ಗಣ್ಯರ ಫ್ಲೆಕ್ಸ್ ಗಳನ್ನು ಗೌರವಯುತವಾಗಿ ವಿಲೇವಾರಿ ಮಾಡಬೇಕು. ಹೀಗೆ ಅಪಮಾನ ಮಾಡುವುದು ಸರಿಯಲ್ಲ ಎಂದು ಅಭಯ್ ತಂಡದ ಪಾಲಿಕೆ ವಿರುದ್ಧ ಕಿಡಿಕಾರಿದ್ದಾರೆ. ಬಳಿಕ ಪ್ರತಿಭಟನಾಕಾರರ ಆಶಯದಂತೆ ಅದೇ ಸ್ಥಳದಲ್ಲಿ ಮತ್ತೆ ಫ್ಲೆಕ್ಸ್ ಕಟ್ಟಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಈ ಬಗ್ಗೆ ಪ್ರತಿಕ್ರಯಿಸಿದ ಪ್ರತಿಭಟನಾಕಾರರು ನಿನ್ನೆ ಕಾರ್ಯಕ್ರಮ ನಡೆದಿದೆ. ರಾಜಕಾರಣಿಗಳ ಫೋಟೊಗಳನ್ನು ಅನೇಕ ದಿನಗಳವರೆಗೂ ಬಿಡುತ್ತಾರೆ. ಅಂಬೇಡ್ಕರ್ ಚಿತ್ರವನ್ನು ಒಂದೇ ದಿನಕ್ಕೆ ತೆರವು ಮಾಡಿದ್ದಾರೆ. ನಮ್ಮ ಸಂಘಟನೆಯಿಂದ ಇದುವರೆವಿಗೂ ನಾವೇ ಫ್ಲೆಕ್ಸ್ ಹಾಕಿ ನಾವೇ ತೆರವು ಮಾಡುತ್ತೇವೆ. ನಮ್ಮ ಗಮನಕ್ಕೂ ತಾರದೇ ತೆರವುಗೊಳಿಸಿ, ಕಸದೊಟ್ಟಿಗೆ ಬಿಸಾಡುವ ಮೂಲಕ ರಾಷ್ಟ್ರ ನಾಯಕರಿಗೆ ಅಪಮಾನ ಮಾಡಿದ್ದರಿಂದ ಅನಿವಾರ್ಯವಾಗಿ ಪ್ರತಿಭಟಿಸಬೇಕಾಯಿತೆಂದು ಹೇಳಿದರು. ಪ್ರತಿಭಟನೆಯಲ್ಲಿ ಅಹಿಂದ ಜವರಪ್ಪ, ಆನಂದ್, ವಿನೋದ್, ಸೋಮಶೇಖರ್, ದೊರಸ್ವಾಮಿ, ಪುಟ್ಟರಾಜು ಇನ್ನಿತರರು ಉಪಸ್ಥಿತರಿದ್ದರು.

---

# ಪೂರ್ಣಗೊಂಡ ಅಖಂಡ ಭಜನೆ

## ರಾಮನಗರದಲ್ಲಿ ಗಜಗೌರಿ ವ್ರತಾಚರಣೆ | 10 ಸಾವಿರ ಗಾಯತ್ರಿ ಜಪ, ಹೋಮ

### ಇಂದು ಗಜಗೌರಿ ಮೂರ್ತಿಗಳ ಮೆರವಣಿಗೆ, ವಿಸರ್ಜನೆ

ರಾಮನಗರ: ನಗರದಲ್ಲಿ ನಡೆಯುತ್ತಿರುವ ಗಜಗೌರಿ ವ್ರತಾಚರಣೆಯ ನಾಲ್ಕನೆ ದಿನ ಇಲ್ಲಿನ ಪೌರ ಕಾರ್ಮಿಕರಿಗೆ ಮಡಲಕ್ಕಿ ತುಂಬಿದ್ದು ಅರ್ಥಪೂರ್ಣ ಎಂದು ನಾಗರೀಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಗರ ವಾಸಿಗಳ ಆರೋಗ್ಯ ಕಾಪಾಡಲು ತಮ್ಮ ಆರೋಗ್ಯವನ್ನೇ ಪಣಕ್ಕಿಟ್ಟು ದುಡಿಯುತ್ತಿರುವ ಪೌರ ಕಾರ್ಮಿಕರನ್ನು ಗಜಗೌರಿ ಆಚರಣೆಯ ಆಯೋಜಕ ಸಂಘಟನೆಗಳು ಗುರುತಿಸಿ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯುಳ್ಳ ಮಡಲಕ್ಕಿ ತುಂಬುವ ಶಾಸ್ತ್ರವನ್ನು ವಿಸ್ತರಿಸಿದ್ದು ಶ್ಲಾಘನೀಯ ಎಂದಿದ್ದಾರೆ.

ಪೌರ ಕಾರ್ಮಿಕರು ತಮ್ಮ ಎಂದಿನ ಕಾಯಕವನ್ನು ಮುಗಿಸಿ ಶುಚಿಗೊಂಡು ನಗರದ ಅಗ್ರಹಾರದಲ್ಲಿ ನಡೆಯುತ್ತಿರುವ ಗಜಗೌರಿ ವ್ರತಾಚರಣೆಯ ಮಂಟಪಕ್ಕೆ ಆಗಮಿಸಿದರು. ಆಯೋಜಕ ಸಂಘಟನೆಗಳ ಪದಾಧಿಕಾರಿಗಳು ಅವರನ್ನು ಸ್ವಾಗತಿಸಿ, ಮಡಲಕ್ಕಿ ತುಂಬುವ ಶಾಸ್ತ್ರವನ್ನು ಪೂರ್ಣಗೊಳಿಸಿದರು. ಪೌರಕಾರ್ಮಿಕರಲ್ಲದೆ, ನಗರಸಭೆಯ ಮಹಿಳಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೂ ಸಹ ಮಡಲಕ್ಕಿ ತುಂಬಲಾಯಿತು.



#### ಅಖಂಡ ಭಜನೆ

ನಾಲ್ಕನೆ ದಿನವಾದ ಶನಿವಾರ ಗಜಗೌರಿ ವ್ರತಾಚರಣೆಯ ಅಂಗವಾಗಿ ಅಖಂಡ ಭಜನಾ ಕಾರ್ಯಕ್ರಮ ನೆರವೇರಿತು. ಬೆಂಗಳೂರಿನ ಅಕ್ಕಿಪೇಟೆಯ ವಾಸವಿ ಭಜನಾ ಮಂಡಳಿ, ಬೆಂಗಳೂರು ತ್ಯಾಗರಾಜನಗರದ ವಾಸವಿ ಮಹಿಳಾ ಮಂಡಳಿ, ಮೈಸೂರಿನ ಸಪ್ತಗಿರಿ ಭಜನಾ ಮಂಡಳಿ, ಚನ್ನಪಟ್ಟಣದ ರಜತಾದ್ರಿ ಭಜನಾ ಮಂಡಳಿ, ಬೆಂಗಳೂರು ಕಾಟನ್ ಪೇಟೆಯ ಕಾಮಾಕ್ಷಿ ಭಜನಾ ಮಂಡಳಿ, ರಾಮನಗರದ ಸರಸ್ವತಿ ಕಲಾಮಂದಿರ, ಸಾಯಿಬಾಬ ಭಜನಾ ಮಂಡಳಿ, ಶ್ರೀ ಬಸವೇಶ್ವರ ಮಹಿಳಾ ಸಂಘ, ಕೈವಾರ ತಾತಯ್ಯ ಬಲಿಜ ಮಹಿಳಾ ಸಂಘ, ವಾಸವಿ ಭಜನಾ ಮಂಡಳಿಗಳ ಸದಸ್ಯರು ಅಖಂಡ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಬೆಳಿಗ್ಗೆ ಆರಂಭವಾದ ಅಖಂಡ ಭಜನೆ ಸಂಜೆವರೆವಿಗೂ ನಿರಂತರವಾಗಿ ನಡೆಯಿತು. ನಿರಂತರ ಭಜನಾ ಕಾರ್ಯಕ್ರಮ ಒಂದೆಡೆಯಾದರೆ ಮತ್ತೊಂದೆಡೆ ದತ್ತ ಉಪಶಂಕರ ಅನಂತ ಸತ್ಯ ಮತ್ತು ತಂಡ 10 ಸಾವಿರ ಗಾಯತ್ರಿ ಜಪ ಮತ್ತು ಗಾಯತ್ರಿ ಹೋಮ ಕಾರ್ಯಕ್ರಮ ನಡೆಸಿಕೊಟ್ಟರು. ಇದೇ ದಿನ ರಾತ್ರಿ ಗಜಗೌರಿ ಹರಿಕಥೆ ಮತ್ತು ದುರ್ಗ ದೀಪ ನಮಸ್ಕಾರ ಸೇವೆ ನೆರವೇರಿತು.

#### ಭಾನುವಾರ ವಿಸರ್ಜನೆ

ಗಜಗೌರಿ ಮೂರ್ತಿಗಳನ್ನು ಫೆ.8ರ ಭಾನುವಾರ ನಗರದ ರಂಗರಾಯರದೊಡ್ಡಿ ಕೆರೆಯಲ್ಲಿ ವಿಸರ್ಜನೆಯ ಮೂಲಕ ವ್ರತಾಚರಣೆ ಸಂಪನ್ನವಾಗಲಿದೆ. ವಿಸರ್ಜನೆಗೂ ಮುನ್ನ ಗಜಗೌರಿ ಮೂರ್ತಿಗಳನ್ನು ಆನೆಯ ಮೇಲಿರಿಸಿ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಗುವುದು. ಭಕ್ತರು ತಮ್ಮ ಮನೆಯ ಬಳಿಯೇ ಗಜಗೌರಿಗಳನ್ನು ದರ್ಶಿಸಬಹುದು ಎಂದು ಆಯೋಜಕರ ಪೈಕಿ ಪ್ರಮುಖರಾದ ಪಿ.ಶಿವಾನಂದ ಮತ್ತು ಆರ್.ಜೆ. ಕುಮಾರಸ್ವಾಮಿ ತಿಳಿಸಿದ್ದಾರೆ.

#### ಗಣ್ಯರು, ಭಕ್ತಾದಿಗಳ ಸಹಕಾರದಿಂದ ವ್ರತಾಚರಣೆ

ಶ್ರೀ ಸೀತಾರಾಮ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಕೆ.ವಿ.ಉಮೇಶ್

ಗಜಗೌರಿ ವ್ರತಾಚರಣೆಯನ್ನು ಆಯೋಜಿಸಿರುವ ಶ್ರೀ ಸೀತಾರಾಮ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಕೆ.ವಿ.ಉಮೇಶ್ ಮಾತನಾಡಿ, ಶಾಸಕ ಇಕ್ಬಾಲ್ ಹುಸೇನ್ ಅವರು ಗಜಗೌರಿ ವ್ರತಾಚರಣೆಗಾಗಿ ವೈಯಕ್ತಿಕವಾಗಿ ಬೃಹತ್ ಪೆಂಡಾಲ್ ಹಾಕಿಸಿ ಸಹಕರಿಸಿದ್ದಾರೆ. ವ್ರತಾಚರಣೆಗೆ ಬೆಂಬಲಕ್ಕೆ ನಿಂತು ಶಕ್ತಿ ತುಂಬಿದ ಶ್ರೀ ಅಯ್ಯಪ್ಪ ಸೇವಾ ಟ್ರಸ್ಟ್ ಅಧ್ಯಕ್ಷರೂ ಆಗಿರುವ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರು ಸ್ಥಳಾವಕಾಶ ನೀಡಿದ್ದಾರೆ. ವ್ರತಾಚರಣೆಯಲ್ಲಿ ಭಾಗವಹಿಸಿದ್ದ 108 ದಂಪತಿಗಳು ಮತ್ತು ಭಕ್ತರು, ದಾನಿಗಳು ವ್ರತಾಚರಣೆಗೆ ಸಂಪೂರ್ಣ ಸಹಕಾರ ನೀಡಿದ್ದಾರೆ. ಶ್ರೀ ಬಲಮುರಿ ಗಣಪತಿ ದೇವಸ್ಥಾನ ಟ್ರಸ್ಟ್,ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಗಳ ಪದಾಧಿಕಾರಿಗಳು, ಸದಸ್ಯರು ಸಹಕಾರ ನೀಡಿದ್ದಾರೆ ಎಂದು ಧನ್ಯವಾದ ತಿಳಿಸಿದರು.

#### ಗಣ್ಯರ ಭೇಟಿ

ಗಜಗೌರಿ ವ್ರತಾಚರಣೆ ಸ್ಥಳಕ್ಕೆ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು, ನಗರಸಭೆ ಆಯುಕ್ತ ಡಾ. ಜಯಣ್ಣ, ನಗರಸಭಾ ಸದಸ್ಯರುಗಳಾದ ಸೋಮಶೇಖರ್ (ಮಣಿ), ಮಹಾಲಕ್ಷ್ಮಿ ಮುಂತಾದವರು ಭೇಟಿ ಕೊಟ್ಟು ತಮ್ಮ ಭಕ್ತಿ ಸಮರ್ಪಿಸಿಕೊಂಡರು.

---

### 11, 12ಕ್ಕೆ ಫ್ಯಾಷನ್ ಮೇಳ

ಮೈಸೂರು:ನಗರದ ಫ್ಯಾಷನ್ ಪ್ರಿಯರು, ವಧು ವರರಿಗೆ ಅನುಕೂಲವಾಗಲೆಂದು ನಗರದ ರ?ಯಾಡಿಸನ್ ಬ್ಲೂ ಫ್ಲಾಜಾದಲ್ಲಿ ಫೆ. 11 ಮತ್ತು 12 ರಂದು ನಿತ್ಯ ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ಹೈ ಲೈಫ್ ಬ್ರೈಡ್ಸ್ ಉಡುಗೆ ಮತ್ತು ಫ್ಯಾಷನ್ ಉತ್ಪನ್ನ, ಆಭರಣ ಪ್ರದ ರ್ಶನ ಮತ್ತು ಮಾರಾಟ ಮೇಳ ಆಯೋಜಿಸಿರುವುದಾಗಿ ಆಯೋಜಕರಾದ ಶೋಮಿಕಾ ಎಸ್. ರಾವ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸೊಗಸು, ಸಂಸ್ಕೃತಿ ಮತ್ತು ಪರಂಪರೆಗೆ ಈ ಮೇಳ ಈಗಾಗಲೇ ಹೆಸರುವಾಸಿ ಯಾಗಿದೆ. ಇಲ್ಲಿ ದೇಶದ ವಿವಿಧ ಭಾಗಗಳ ಡಿಸೈನರ್ ಲೆಹೆಂಗಾ, ಸೀರೆ, ಮದುವೆ ಉಡುಪು, ಸಮಕಾಲೀನ್ ಗೌನ್‌ಗಳು, ಆಭರಣಗಳು ಇರಲಿವೆ. ಫೆ. 11 ರಂದು ಬೆಳಗ್ಗೆ 11ಕ್ಕೆ ಉದ್ಘಾಟನೆ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯ ಮಹಿಳೆಯರನ್ನು ಸನ್ಮಾನಿಸಲಾಗುವುದೆಂದರು. ಕಾರ್ಯಕ್ರಮ ಸಂಯೋಜಕ ಎಸ್. ಶ್ರೀಕಾಂತ್ ಹಾಜರಿದ್ದರು.

### ಮೆಟ್ರೋ ದರ ಏರಿಕೆ ಸದ್ಯಕ್ಕಿಲ್ಲ: ತೇಜಸ್ವಿ

ಬೆಂಗಳೂರು: ಮೆಟ್ರೋ ದರ ಸೋಮ ವಾರದಿಂದ ಏರಿಕೆ ಇಲ್ಲ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಮೆಟ್ರೋ ದರ ಏರಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಮರು ಪರಿಶೀಲನೆ ಮಾಡಿ ದರ ಪರಿಷ್ಕರಣೆ ಮಾಡುವಂತೆ ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರಿಗೆ ಮನವಿ ಮಾಡಲಾಗಿತ್ತು. ಮನವಿ ಮೇರೆಗೆ ದರ ಏರಿಕೆ ತಡೆ ಹಿಡಿಯುವ ಬಗ್ಗೆ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದಾರೆ. ಹೊಸದಾಗಿ ದರ ನಿಗದಿ ಸಮಿತಿ ರಚನೆ ಮಾಡಿ ದರ ಪರಿಷ್ಕರಣೆಗೆ ಮನವಿ ಮಾಡಲಾಗಿತ್ತು. ಸದ್ಯಕ್ಕೆ ಸೋಮವಾರದಿಂದ ದರ ಏರಿಕೆ ಇಲ್ಲ ಎಂದರು. ಈ ಹಿಂದಿನ ದರ ಏರಿಕೆಯಲ್ಲೇ ಹಲವು ನ್ಯೂನತೆಗಳು ಇದ್ದವು. ಆ ಬಗ್ಗೆ ಕೇಂದ್ರ ಸಚಿವ ಖಟ್ಟರ್ ರಲ್ಲಿ ಮನವಿ ಮಾಡಿದ್ದೇವೆ. ಈಗ ಹೊಸದಾಗಿ ದರ ನಿಗದಿ ಸಮಿತಿ ರಚನೆ ಆಗಿ ಪರಿಶೀಲನೆ ಆಗಲಿದೆ. ರಾಜ್ಯ ಸರ್ಕಾರ ಹೊಸದಾಗಿ ದರ ನಿಗದಿ ಸಮಿತಿ ರಚನೆ ಮಾಡಬೇಕಿದೆ. ದರ ನಿಗದಿ ಸಮಿತಿ ರಚನೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಎಂದು ಹೇಳಿದರು.

### ಸಿ.ಟಿ.ರವಿಗೆ ಮೈಸೂರಲ್ಲೂ ಖಂಡನೆ

ಮೈಸೂರು:ರಾಜ್ಯದ ಹಿರಿಯ ನಾಯಕ ನಜೀರ್ ಅಹಮದ್ ಅವರನ್ನು ವಿಧಾನ ಪರಿಷತ್ ಅಧಿವೇಶನದಲ್ಲಿ ಬಿಜೆಪಿ ಶಾಸಕ ಸಿ.ಟಿ. ರವಿ ಪಾಕಿಸ್ತಾನಿ ಎಂದು ಕರೆಯುವ ಮೂಲಕ ಅಪಮಾನಿಸಿ, ಅನುಚಿತವಾಗಿ ಮಾತನಾಡಿರುವುದು ಖಂಡನೀಯ ಎಂದು ಜಾಗೃತ ಕರ್ನಾಟಕ ಸಂಘಟನೆ ಪದಾಧಿಕಾರಿ ಸುಹೇಲ್ ಕಿಡಿ ಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಿ.ಟಿ. ರವಿ ಈ ಹಿಂದೆ ಸಹಾ ಮಹಿಳಾ ಸಚಿವರೊಬ್ಬರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದರು. ಗಾಂಧೀಜಿಯನ್ನು ಸಹಾ ಅಪಮಾನಿಸಿದ್ದರು. ಸಂವಿಧಾನ ರಚಿಸಿದ ಅಂಬೇಡ್ಕರ್ ಅವರನ್ನು ಸಹಾ ತಿರಸ್ಕಾರದಿಂದ ಕಾಣುತ್ತಾರೆ. ಇವರ ಸಂಘಟನೆ ಮತ್ತು ನಾಯಕರನ್ನು ಪ್ರಶ್ನಿಸಿದವರನ್ನು ಪಾಕಿಸ್ತಾನಿ ಎಂದು ಸಲೀಸಾಗಿ ಹೇಳಿಬಿಡುತ್ತಾರೆ. ಇವರ ಈ ನಿಲುವನ್ನು ಬಹಿರಂಗವಾಗಿ ಪ್ರಶ್ನಿಸದೇ ಹೋದರೆ, ಆರ್‌ಎಸ್‌ಎಸ್ ಅನ್ನು ಒಪ್ಪದವರು ಈ ದೇಶಕ್ಕೆ ಸೇರಿದವರೇ ಅಲ್ಲ ಎಂದು ಹೇಳುವ ದಿನ ದೂರವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.




ಇದಲ್ಲದೆ, ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ತಮ್ಮ ದೇಶಪ್ರೇಮವನ್ನು ಫೆ. 17 ರಂದು ತಾವು ಎಲ್ಲಾದರೊಂದು ಕಡೆ ಆಯೋಜಿಸುವ ಸಭೆಯಲ್ಲಿ ಸಮರ್ಥಿಸಿಕೊಳ್ಳಬೇಕೆಂದು ಸವಾಲೆಸೆದು, ಸ್ವಾತಂತ್ರ ?ಯಕ್ಕಾಗಿ ಹೋರಾಟ ಹುತಾತ್ಮರಾದ ಆರ್‌ಎಸ್‌ಎಸ್‌ನ ಕೇವಲ ಹತ್ತು ಮಂದಿಯ ಹೆಸರನ್ನು ಸಿ.ಟಿ. ರವಿ ಹೇಳಲಿ ನೋಡೋಣ ಎಂದು ಕುಟುಕಿದರು.


ಇನ್ನಿತರ ಪದಾಧಿಕಾರಿಗಳಾದ ಡಾ. ಮನು, ಮೋಹನ್, ವಾಜೀದ್ ಹಾಜರಿದ್ದರು.

---

ಬಿಜೆಪಿಯಿಂದ ಪ್ರತಿಭಟನೆ

# ಕೆರೆಗಳಿಗೆ ನೀರು ತುಂಬಿಸಲು ಆಗ್ರಹಿಸಿ ಬೃಹತ್ ತಮಟೆ ಚಳುವಳಿ

ಗುಂಡ್ಲುಪೇಟೆ ತಾಲೂಕಿನ ಕೆರೆಗಳಿಗೆ ಶೀಘ್ರವಾಗಿ ನೀರು ತುಂಬಿಸುವಂತೆ ಆಗ್ರಹಿಸಿ ತಾಲ್ಲೂಕು ಬಿಜೆಪಿ ಘಟಕದ ವತಿಯಿಂದ ಬೃಹತ್ ತಮಟೆ ಚಳುವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಮಡಹಳ್ಳಿ ಸರ್ಕಲ್ ನಿಂದ ತಮಟೆಯ ಮೂಲಕ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಪ್ರತಿಭಟನೆಯುದ್ದಕ್ಕೂ "ಕೆರೆಗಳಿಗೆ ನೀರು ತುಂಬಿಸದ ರಾಜ್ಯ ಸರ್ಕಾರಕ್ಕೆ ದಿಕ್ಕಾರ" ಕೆರೆಗಳಿಗೆ ನೀರು ತುಂಬಿಸಲು ನಿರ್ಲಕ್ಷ್ಯ ಮಾಡುತ್ತಿರುವ ಸ್ಥಳೀಯ ಶಾಸಕರಾದ ಗಣೇಶ್ ಪ್ರಸಾದ್ ರವರಿಗೆ ದಿಕ್ಕಾರ" ರೈತವಿರೋಧಿ ಸರ್ಕಾರಕ್ಕೆ ದಿಕ್ಕಾರ" ರೈತ ವಿರೋಧಿ ಶಾಸಕ ಗಣೇಶ್ ಪ್ರಸಾದ್ ರವರಿಗೆ ದಿಕ್ಕಾರ" ಮುಂತಾದ ಘೋಷಣೆಗಳನ್ನು ಕೂಗುತ್ತಿದ್ದರು. ಮಡಹಳ್ಳಿ ಸರ್ಕಲ್ ನಿಂದ ಹೊರಟ ಮೆರವಣಿಗೆ ತಾಲ್ಲೂಕು ಕಛೇರಿಯ ಮುಂಭಾಗ ಸಮಾವೇಶಗೊಂಡಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಶಾಸಕರು, ಬಿಜೆಪಿಯ ಜಿಲ್ಲಾಧ್ಯಕ್ಷರಾದ ಸಿ ಎಸ್ ನಿರಂಜನ್ ಕುಮಾರ್‌ರವರು ತಾಲೂಕುನಲ್ಲಿ ಬೇಸಿಗೆ ಆರಂಭವಾಗಿದ್ದು ಭೂಮಿಯ ತಾಪಮಾನ ಏರಿಕೆಯಾಗಿ ಅಂತರ್ಜಲ ಕೆಳಗಿಳಿಯುತಿದೆ ರೈತರು ವರ್ಷದಿಂದಲೂ ಸ್ಥಳೀಯ ಶಾಸಕರು ಮತ್ತು ರಾಜ್ಯಸರ್ಕಾರವನ್ನು ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸುತ್ತಾ ತಿಂಗಳಾನುಗಟ್ಟಲೇ ಧರಣಿ ನಡೆಸಿದರೂ ಯಾವುದಕ್ಕೂ ಕೇರ್ ಮಾಡದೇ ತನಗೇನು ಬೇಕೋ ಅಷ್ಟನ್ನೂ ಮಾತ್ರ ಮಾಡುತ್ತಾ ರೈತ ವಿರೋಧಿ ಧೋರಣೆ ತಳೆಯುತ್ತಿದ್ದಾರೆ. ಶಾಸಕರಾಗಿ ಜನಸಾಮಾನ್ಯರ ನೋವುಗಳಿಗೆ ಸ್ಪಂಧಿಸುವಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ. ತಾಲೂಕಿನಲ್ಲಿ ಭ್ರಷ್ಟಚಾರ ಮಿತಿಮೀರಿದೆ, ಕಳ್ಳತನ ಗಾಂಜಾ ಮಾರಾಟ ಎಗ್ಗಿಲ್ಲದೇ ನಡೆಯುತ್ತಿದೆ, ಟಿಪ್ಪರ್ ಗಳ ಹಾವಳಿ ವಿಪರೀತವಾಗಿದ್ದು ಕೇರಳಕ್ಕೆ ತಾಲೂಕಿನ ಕಲ್ಲು, ಜಲ್ಲಿ, ಮರಳು ಅಕ್ರಮವಾಗಿ ಹೋಗುತ್ತಿದೆ. ಇಂತಹ ಸಮಾಜ ಬಾಹಿರ ಕೃತ್ಯಗಳನ್ನು ಹತೋಟಿಗೆ ತರುವಲ್ಲಿ ಸ್ಥಳೀಯ ಶಾಸಕರು ಸೋತಿದ್ದಾರೆ. ಇವುಗಳನ್ನು ಪ್ರಶ್ನಿಸುವ ವಿರೋಧ ಪಕ್ಷದವರ ಮೇಲೆ ಅಧಿಕಾರಿಗಳನ್ನು ಬಳಸಿ ಕೇಸು ಹಾಕಿಸುವ ಮೂಲಕ ಬೆದರಿಸಲಾಗುತ್ತಿದೆ. ತಾಲೂಕಿನಲ್ಲಿ ಪ್ರಜಾಪ್ರಭುತ್ವ ,ಕಾನೂನುಗಳು ಜಾರಿಯಲ್ಲಿಲ್ಲ ಎನಿಸುತ್ತಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳು ಶಾಸಕರ ಮಾತು ಕೇಳಿಕೊಂಡು ನಮ್ಮನ್ನು ಹತ್ತಿಕ್ಕಲು ಪ್ರಯತ್ನಿಸಿದರೆ ನಮಗೇನು ಮಾಡಬೇಕೆಂದು ತಿಳಿದಿದೆ, ನಾವೂ ಕೂಡ ಅಧಿಕಾರ ನಡೆಸಿರುವ ಅನುಭವವಿದೆ ಹಾಗಾಗಿ ಅಧಿಕಾರಿಗಳು ಇದನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕೆಂದು ಎಚ್ಚರಿಕೆ ನೀಡುತ್ತಿದ್ದೇವೆ. ನಮ್ಮ ಅಧಿಕಾರವಧಿಯಲ್ಲಿ ಪ್ರತಿ ವರ್ಷವೂ ಕೆರೆಗಳಿಗೆ ನೀರು ತುಂಬಿಸಿದ್ದೆವು.ನೀವು ಮೂರು ವರ್ಷದಲ್ಲಿ ಕೇವಲ ಒಂದು ವರ್ಷ ನೀರು ತುಂಬಿಸಲಾಗಲಿಲ್ಲ. ಡಿಸೆಂಬರ್ 06 ರಂದು ನೀರು ತುಂಬಿಸಲಿ ಪ್ರಾರಂಭಿಸಿದ್ದೇವೆ ಒಂದು ವೇಳೆ ನೀರು ತುಂಬಿಸಲು ವಿಫಲವಾದರೆ ನಾನೂ ಕೂಡ ನಿಮ್ಮೊಂ ದಿಗೆ ಧರಣಿ ಕೂರುತ್ತೇನೆ ಎಂದು ರೈತರಿಗೆ ಆಶ್ವಾಸನೆ ಕೊಟ್ಟಿದ್ದೀರಲ್ಲ ಅದರಂತೇ ನೀವು ನಡೆದುಕೊಂಡಿರಾ!? ಕೆರೆಗಳಿಗೆ ನೀರು ತುಂಬಿಸುತ್ತಿಲ್ಲ, ಕೇರಳಕ್ಕೆ ಹೋಗುತ್ತಿ ರುವ ಅಕ್ರಮ ಟಿಪ್ಪರ್ ಗಳ ಹಾವಳಿ ತಡೆಗಟ್ಟುತ್ತಿಲ್ಲ, ಹಳ್ಳಿಗಳ ರಸ್ತೆಗಳು ಕಿತ್ತು ಹಾಳಾಗಿದ್ದರೂ ನಿಮ್ಮ ಕೋರೆಗೆ ಹೋಗಲು ದಲಿತರ ಜಮೀನನ್ನು ದುರ್ಬಳಕೆ ಮಾಡಿ ಆ ರಸ್ತೆ ಗೆ ಸರ್ಕಾರದ ಕೋಟ್ಯಾಂತರ ರೂ ಗಳನ್ನು ಹಾಕಿ ನಿರ್ಮಿಸಿದ್ದೀರ.. ಜನಸಾಮಾನ್ಯರ ಕಷ್ಟಗಳಿಗೆ ಕಿವಿಯಾಗದ ಶಾಸಕರು ತಾವೂ ಬದುಕಲು ಏನು ಬೇಕೋ ಅಷ್ಟನ್ನು ಮಾತ್ರ ಮಾಡಿಕೊಂಡು ಕಮಿಷನ್ ಆಸೆಗೆ ಕ್ಷೇತ್ರವನ್ನು ಹಾಳು ಮಾಡಿದ್ದಾರೆ ಎಂದು ಹೇಳಿದರು. ಅ ನಂತರ ತಹಶೀಲ್ದಾರ್ ಎಂ ಎಸ್ ತನ್ಮಯ್ ರವರಿಗೆ ಮನವಿ ಪತ್ರ ಸಲ್ಲಿಸದರು ಪ್ರತಿಭಟನೆಯಲ್ಲಿ ವಿಧಾನಪರಿಷತ್ ಮಾಜಿ ಶಾಸಕರಾದ ಮಲ್ಲಿಕಾರ್ಜು ನಪ್ಪ, ಮಂಡಲ ಆದ್ಯಕ್ಷ ಮಹದೇವಪ್ರಸಾದ್, ಜಿ ಡಿ ಎಲ್ ಸುರೇಶ್, ಎನ್ ಮಲ್ಲೇಶ್, ಎಸ್ ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ , ಪ್ರಣಯ್, ಅಗತಗೌಡನಹಳ್ಳಿ ಬಸವರಾಜು, ಮಹದೇವ ಶೆಟ್ಟಿ, ಕಬ್ಬಹಳ್ಳಿ ರೇವಣ್ಣ, ಅಂಕಹಳ್ಳಿ ಮಹೇಂದ್ರ, ಮೂಡ್ಲು ಸುನೀಲ್, ನಮೋಮಂಜು, ಮಹೇಂದ್ರ, ಬೇರಂಬಾಡಿ ಮಲ್ಲಿಕ್, ಎಸ್ ಸಿ ಮೋರ್ಚಾದ ತಾ. ಅಧ್ಯಕ್ಷ ನಾಗುಸ್ವಾಮಿ ಹಾಗೂ ನೂರಾರು ಮಂದಿ ಕಾರ್ಯಕರ್ತರು ಭಾಗವಹಿಸಿದ್ದರು.



# ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಆದ್ಯತೆ ಕೊಡಿ



ಮೈಸೂರು:ರಾಜ್ಯದಲ್ಲಿ ವಿಶ್ವಕರ್ಮ ಸಮುದಾಯದವರ ಸಂಖ್ಯೆ 40 ಲಕ್ಷಕ್ಕೂ ಅಧಿಕ ಇದ್ದರೂ ಶೈಕ್ಷಣಿಕ, ರಾಜಕೀಯ, ಆರ್ಥಿಕವಾಗಿ ಇನ್ನೂ ಸಬಲೀಕರಣವಾಗಿಲ್ಲ. ಹೀಗಾಗಿ ಈ ಸಮುದಾಯವನ್ನು ಮುಖ್ಯ ವಾಹಿನಿಗೆ ತರಲು ಸಾಧ್ಯವಾಗುವಂತೆ ಸಿಎಂ ಸಿದ್ದರಾಮಯ್ಯ ಅವರು ಈ ಬಜೆಟ್‌ನಲ್ಲಿ ಈ ಸಮುದಾಯಕ್ಕೆ ಆದ್ಯತೆ ನೀಡಬೇಕೆಂದು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆ. ಕೆಂಡಗಣ್ಣ ವಿಶ್ವಕರ್ಮ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ 100 ಕೋಟಿ ಮೀಸಲಿಡಬೇಕು, ಅಮರಶಿಲ್ಪಿ ಜಕಣಾಚಾರ ಪುತ್ಥಳಿಯನ್ನು ಬೆಂಗಳೂರಿನ ವಿಧಾನ ಸೌಧದಲ್ಲಿ ಸ್ಥಾಪಿಸಬೇಕು, ಸಮುದಾಯದ ಅರೆಮಾದನಹಳ್ಳಿ ಮಹಾ ಸಂಸ್ಥಾನ ಪೀಠಕ್ಕೆ ಎರಡು ಕೋಟಿ ಅನುದಾನ ನೀಡಬೇಕು, ಸಮುದಾಯದ ಧಾರ್ಮಿಕ ಪೀಠಗಳ ಅಧ್ಯಕ್ಷರು ಮನವಿ ಸಲ್ಲಿಸಿದಲ್ಲಿ ತಲಾ ಒಂದು ಕೋಟಿ ಅನುದಾನ ನೀಡಬೇಕು, ಮೈಸೂರು ವಿವಿ ಕ್ಯಾಂಪಸ್‌ನಲಿ ವಿಶ್ವಕರ್ಮ ಅಧ್ಯಯನ ಪೀಠ ಸ್ಥಾಪಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಮನವಿ ಮಾಡಿದರು.ಇನ್ನಿತರ ಪದಾಧಿಕಾರಿಗಳಾದ ಸತೀಶ್ ಆಯಿರಹಳ್ಳಿ, ಶ್ರೀಲಕ್ಷಿ ?ಮ, ಸಿದ್ದೇಶ್, ಮಂಜು, ಬಿ. ರಾಜು, ಕೃಷ್ಣಮೂರ್ತಿ, ಶಿವಶಂಕರ್, ನಾಗರಾಜು ಮೊದಲಾದವರು ಇದ್ದರು.

# ಸ್ಪರ್ಧಾತ್ಮಕ ಪರೀಕ್ಷೆ ಒಂದು ದಿನದ ಕಾರ್ಯಗಾರ



ಚಾಮರಾಜನಗರ: ಪ್ರಸ್ತುತ ದಿನಮಾನದಲ್ಲಿ ಶಿಕ್ಷಣದ ಮಹತ್ವವು ಅತ್ಯಧಿಕವಾಗಿದೆ. ಹಣ, ಆಸ್ತಿ, ಆಭರಣಗಳನ್ನು ಖರೀದಿಯಬಹುದು, ಆದರೆ ವಿದ್ಯೆ ಎಂದರೆ ಖರೀದಿಯಲಾಗದ ಅಮೂಲ್ಯ ಸಂಪತ್ತು ಎಂದು ಹಿರಿಯ ಸಿವಿಲ್ ನ್ಯಾಯಾದೀಶರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ ಹೇಳಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ವೃತ್ತಿಮಾರ್ಗದರ್ಶನ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಮೇಲೆ ಹೆಚ್ಚಿನ ಗಮನ ಹರಿಸಬೇಕು. ಪಿಯುಸಿ ಪದವಿಯಲ್ಲಿ ಉತ್ತಮ ಅಂಕಗಳನ್ನು ಪಡೆದರೆ ಅದೇ ಸಾಕಾಗದು. ಅದಕ್ಕೆ ತಕ್ಕ ಉದ್ಯೋಗವನ್ನು ಪಡೆಯಲು ತ್ವರಿತವಾಗಿ ತಯಾರಿ ನಡೆಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಂದಿನಿಂದಲೇ ತಯಾರಿನಡೆಸಿ, ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಿ ಪರೀಕ್ಷೆಯಲ್ಲಿ ಅನುತೀರ್ಣಗೊಳ್ಳುವುದು ಸಹಜ. ಅದರಿಂದ ಎದೆಗುಂದದೇ ಹೆಚ್ಚಿನ ಅಧ್ಯಯನ ಮಾಡಿ ಯಶಸ್ಸು ತಾನಾಗಿಯೇ ಸಿಗುತ್ತದೆ ಎಂದು ಸಲಹೆ ನೀಡಿದರು.

ಸೋಲೇ ಗೆಲುವಿನ ಮೆಟ್ಟಿಲು ಎಂಬ ಹಾಗೆ, ಶ್ರದ್ಧೆಯಿಂದ ಓದಬೇಕು, ತಾಳ್ಮೆಯಿಂದ ಅಭ್ಯಾಸ ಮಾಡಬೇಕು. ಪ್ರತಿಯೊಂದು ಪರೀಕ್ಷೆಯಲ್ಲಿಯೂ ನಿಮ್ಮ ತಪ್ಪುಗಳಿಂದ ಕಲಿಯಿರಿ ಮತ್ತು ಹಿಮ್ಮುಖವಾಗಬೇಡಿ. ಸಮಯವನ್ನು ಸಮರ್ಪಕವಾಗಿ ಯೋಜಿಸಿ, ದಿನನಿತ್ಯದ ಅಧ್ಯಯನವನ್ನು ನಿಯಮಿತವಾಗಿ ಮುಂದುವರಿಸಿ, ಕಷ್ಟವನ್ನು ಎದುರಿಸುವ ಧೈರ್ಯ ವಹಿಸಿ, ನಿರಂತರ ಪ್ರಯತ್ನದಿಂದಲೇ ಯಶಸ್ಸು ಸಿಗುತ್ತದೆ. ಓದು ಮತ್ತು ಅಭ್ಯಾಸವನ್ನು ಜೀವನಶೈಲಿಯಾಗಿ ಮಾಡಿಕೊಂಡರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ನೀವು ಸಾಧನೆ ಮಾಡುವಿರಿ. ಹಾಗಾಗಿ ಶ್ರಮವನ್ನು ತ್ಯಜಿಸಬೇಡಿ, ಹೆಚ್ಚಾಗಿ ಓದಿ, ಪ್ರಯತ್ನಿಸಿ, ನಿಮ್ಮ ಗುರಿಯತ್ತ ಸಾಗಿ ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಮಾತನಾಡಿ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ದೇವರಾಜು ಅರಸು ಅವರು ಕೈಗೊಂಡ ಪ್ರಯತ್ನಗಳನ್ನು ಅರಿತು, ಶಿಕ್ಷಣ ಮತ್ತು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮ ಶಿಕ್ಷಣ ಪಡೆದು ಉನ್ನತ ವಿದ್ಯಾಭ್ಯಾಸ ಪಡೆಯಿರಿ. ಬಡ ಮಕ್ಕಳು ಹಾಸ್ಟೆಲ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಇಲಾಖೆಯ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಂಡು ಯಶಸ್ಸು ಸಾಧಿಸಿ ಎಂದರು. ಆಲೋಚನೆಗಳು ವ್ಯಕ್ತಿತ್ವವನ್ನು ರೂಪಿಸುತ್ತವೆ. ಉತ್ತಮ ಸ್ನೇಹಿತರೊಂದಿಗೆ ಸಹವಾಸ ಮಾಡಿ, ಸ್ಪರ್ಧಾತ್ಮಕ ಮತ್ತು ವೃತ್ತಿಪರ ಉದ್ದೇಶಗಳನ್ನು ಹೊಂದಿ ಕನಸು ಕಾಣಬೇಕು. ಅಬ್ದುಲ್ ಕಲಾಂ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದರೂ, ಕಷ್ಟಪಟ್ಟು ಓದಿ, ಪತ್ರಿಕೆ ಹಂಚಿ, ತಮ್ಮ ಶ್ರಮದಿಂದ ಸಾಧನೆ ಮಾಡಿ ರಾಷ್ಟ್ರಪತಿಯಾಗಿ ಉತ್ತಮ ಆಡಳಿತ ನಡೆಸಿದರು ಅಂತಹ ಮಹಾನ್ ವ್ಯಕ್ತಿಗಳನ್ನೂ ವಿದ್ಯಾರ್ಥಿಗಳು ಮಾದರಿಯಾಗಿ ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎನ್. ವಿಶ್ವನಾಥ್, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಲಿಂಗರಾಜು, ಎಸ್.ಬಿಐ ನಿರ್ದೇಶಕ ರಾಕೇಶ್ ಅಕುಲ್, ಪಿಎಲ್‌ಐ ಅಭಿವೃದ್ಧಿ ಅಧಿಕಾರಿ ಮಹದೇವಪ್ಪ, ಭೀಮನಬೀಡು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ನಂದೀಶ್ ಹಾಜರಿದ್ದರು.

# ಯುಜಿಸಿ ನಿಯಮ ಜಾರಿಗೆ ಆಗ್ರಹ

## ಚಾಮರಾಜನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ, ಅಹಿಂದ ಸಂಘಟನೆಗಳ ಒಕ್ಕೂಟ, ಕಾನ್ಸಿರಾಂ ವಿದ್ಯಾರ್ಥಿ ಸಂಘ ವತಿಯಿಂದ ಪ್ರತಿಭಟನೆ



ಚಾಮರಾಜನಗರ, ಯುಜಿಸಿ ನಿಯಮ ಯಥಾವತ್ತಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾ, ಅಹಿಂದ ಸಂಘಟನೆಗಳ ಒಕ್ಕೂಟ, ಕಾನ್ಸಿರಾಂ ವಿದ್ಯಾರ್ಥಿ ಸಂಘ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್ ಹಾಗೂ ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್ ಮಾತನಾಡಿ, ಹಿಂದುಳಿದ ವಿದ್ಯಾರ್ಥಿಗಳ ಹಿತಕಾಯುವುದಕ್ಕಾಗಿ ಯಥಾವತ್ತಾಗಿ ಯುಜಿಸಿ ನಿಯಮ ಜಾರಿಗೊಳಿಸಸಬೇಕು ಎಂದು ಒತ್ತಾಯಿಸಿದರು.

ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳ ಮೇಲೆ ಧರ್ಮ?ಜಾತಿಯ ಹೆಸರಿನಲ್ಲಿ ನಡೆಯುತ್ತಿರುವ ತಾರತಮ್ಯ, ಕಿರುಕುಳ, ದೌರ್ಜನ್ಯ ತಡೆಗೆ ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗವು ಜಾರಿಗೆ ತಂದಿರುವ ಹೊಸ ನಿಯಮಗಳನ್ನು ಸ್ವಾಗತಿಸಲಾಗುತ್ತದೆ.'ಆದರೆ ನಿಯಮಗಳಿಗೆ ಸುಪ್ರೀಂ ತಡೆಯಾಜ್ಞೆ ನೀಡಿದೆ. ಕೇಂದ್ರ ಸರ್ಕಾರ ತಡೆಯಾಜ್ಞೆ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ಇಕ್ವಿಟಿ ಕಮಿತಿ ಮುಂದೆ ದೂರು ಬಂದ ಸಮಿತಿ ಪರಿಶೀಲಿಸಿ ವರದಿಯನ್ನು ಸಂಬಂಧಿಸಿದ ಕಾನೂನು ಪ್ರಾಧಿಕಾರ ಸಲ್ಲಿಸುವುದು ಮಾತ್ರ ಅವರ ಕೆಲಸವಾಗಿದೆ ಹೊರತು ಶಿಕ್ಷಿಸುವ ಪ್ರಾಧಿಕಾರ ವಲ್ಲ . ಆದರು ಕೂಡ ಮೇಲ್ವರ್ಗ ವಿದ್ಯಾರ್ಥಿಗಳು ವಿರೋಧ ಏಕೆ ಎಂದು ಪ್ರಶ್ನೆಸಿದರು. ಪ್ರತಿಭಟನೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ, ಪದವಿಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಮಂಜುನಾಥಪ್ರಸನ್ನ, ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ರಾಜಶೇಖರ, ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಗಣೇಶ ಪ್ರಸಾದ್, ಎಂ.ಶಿವಮೂರ್ತಿ, ಶಿವರಾಜ್ ಸಿದ್ದಯ್ಯನಪುರ, ಪರ್ವತರಾಜು, ಎಸ್.ಪಿ.ಮಹೇಶ್, ಕುಮಾರ್, ಕಾಗಲವಾಡಿ ಶಿವಸ್ವಾಮಿ, ದೊಡ್ಡರಾಯಪೇಟೆಸಿದ್ದರಾಜು, ರೂಪೇಶ್, ಗೋವಿಂದ, ವಾಸು, ಮಹೇಶ್, ಚನ್ನಪ್ಪ, ಹಾಗೂ ವಿದ್ಯಾರ್ಥಿಗಳು ಇತರರು ಭಾಗವಹಿಸಿದ್ದರು.

### ಜಾತಿ ತಾರತಮ್ಯದಿಂದ ಕೆಳವರ್ಗದ ವಿದ್ಯಾರ್ಥಿಗಳ ಆತ್ಮಹತ್ಯೆ ವಿಷಾಧನೀಯ

**ಜಾತಿ ತಾರತಮ್ಯ ಮತ್ತು ಕಿರುಕುಳ ಕಾರಣದಿಂದಾಗಿ ಮೇಲ್ವರ್ಗದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳಿಲ್ಲ. ಆದರೆ ಕೆಳವರ್ಗದವರು ಆತ್ಮಹತ್ಯೆ ಮಾಡಿಕೊಂಡಿರುವ ನೂರಾರು ಉದಾಹರಣೆಗಳಿವೆ. ಹೈದರಾಬಾದ್ ಕೇಂದ್ರೀಯ ವಿವಿಯ ಸಂಶೋಧನಾ ವಿದ್ಯಾರ್ಥಿ ರೋಹಿತ ವೇಮುಲ, ವೈದ್ಯಕೀಯ ವಿದ್ಯಾರ್ಥಿನಿ ಪಾಯಲ್ ತದ್ವಿ, ಬಾಂಬೆ ಐಐಟಿ ವಿದ್ಯಾರ್ಥಿ ದರ್ಶನ ಸೋಳಂಕಿ ಸೇರಿದಂತೆ ಸಾಕಷ್ಟು ವಿದ್ಯಾರ್ಥಿಗಳ ಪಟ್ಟಿಯೇ ಇದೆ. ಸುಪ್ರೀಂಕೋರ್ಟ್ ಮತ್ತು ಯುಜಿಸಿ ಪ್ಯಾನಲ್ ಗೆ ಸಲ್ಲಿಸಿದ ವರದಿಯಲ್ಲಿ ಉನ್ನತ ವಿಶ್ವವಿದ್ಯಾಲಯ ಗಳಲ್ಲಿ ಜಾತಿ, ತಾರತಮ್ಯದಿಂದ 2019ರಿಂದ 2020ರ ವರಗೆ 173 ದೂರು ದಾಖಲಾಗಿದ್ದು, 2023–24 ರಲ್ಲಿ 378 ದೂರುಗಳು ದಾಖಲಾಗಿದ್ದು, ವರ್ಷದಲ್ಲಿ ಶೇ 118.4 ಹೆಚ್ಚಾಗಿದೆ. 2014ರಿಂದ 2024 ರ ವರಗೆ 122 ಆತ್ಮಹತ್ಯೆ ನಡೆದಿದೆ ಇದರಲ್ಲಿ ಶೇ 55 ರಷ್ಟು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, 2014 ರಿಂದ 2024 ರ ತನಕ ದೇಶ ಪ್ರತಿಷ್ಠಿತ ಕಾಲೇಜುಗಳಲ್ಲಿ 122 ಆತ್ಮಹತ್ಯೆ ಪ್ರಕರಣಗಳು ನಡೆದಿದ್ದು 24 ಮಂದಿ ಎಸ್ ಸಿ, ಎಸ್ಟಿ, 41 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಸೇರಿರುತ್ತಾರೆ. 2021 ಮತ್ತು 2023 ರಲ್ಲಿ ಲೋಕಸಭಾ, ರಾಜ್ಯಸಭಾಗಳು ತಿಳಿಸಿರುವ ದತ್ತಾಂಶ ವಾಗಿದೆ ಈ ಎಲ್ಲ ಬೆಳವಣಿಗೆ ಗಳಿಂದ ಈ ಕಾಯ್ದೆ ಜಾರಿಗೊಳಿಸುವುದು ಅವಶ್ಯಕವಾಗಿದೆ ಎಂದರು.**

# ಕರ್ನಾಟಕದ ಆದರ್ಶ ರಾಜಕಾರಣಿ ಬಿ.ರಾಚಯ್ಯ

**ವಿಧಾನ ಪರಿಷತ್ತು ಸದಸ್ಯರಾದ ಶಿವಕುಮಾರ್ ಹೇಳಿಕೆ**



ಚಾಮರಾಜನಗರ: ಮಾಜಿ ರಾಜ್ಯಪಾಲರಾದ ದಿವಂಗತ ಬಿ.ರಾಚಯ್ಯನವರು ರಾಜ್ಯ ಕಂಡ ಅತ್ಯುತ್ತಮ ಆದರ್ಶ ರಾಜಕಾರಣಿಯಾಗಿದ್ದು, ಅವರಿಗೆ ಮುಖ್ಯಮಂತ್ರಿ ಆಗುವ ಎಲ್ಲ ಅವಕಾಶ ಇತ್ತು ಎಂದು ವಿಧಾನ ಪರಿಷತ್ತು ಸದಸ್ಯರಾದ ಶಿವಕುಮಾರ್ ಹೇಳಿದರು.

ತಾಲೂಕಿನ ಆಲೂರಿನ ಚಿರಶಾಂತಿಧಾಮದಲ್ಲಿ ನಡೆದ ದಿವಂಗತ ಗೌರಮ್ಮರವರ ಮೊದಲನೇ ವರ್ಷದ ಹಾಗೂ ಮಾಜಿ ರಾಜ್ಯಪಾಲ ದಿವಂಗತ ಬಿ.ರಾಚಯ್ಯರವರ 26ನೇ ವರ್ಷದ ಸಂಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರ ಸಮಾಧಿಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿ ಸ್ಮಾರಕದಲ್ಲಿ ಅವರ ಛಾಯಾಚಿತ್ರಗಳನ್ನು ವೀಕ್ಷಿಸಿ ಮಾತನಾಡಿದರು. 50 ವರ್ಷಗಳಿಗೂ ಹೆಚ್ಚು ಕಾಲ ರಾಜಕಾರಣದಲ್ಲಿದ್ದ ಬಿ.ರಾಚಯ್ಯನವರು ದೇಶಕ್ಕೆ ಕಂಡ ಅತ್ಯುತ್ತಮ ರಾಜಕಾರಣಿಯಾಗಿದ್ದರು. ಅವರ ಸಾರ್ವಜನಿಕ ಜೀವನ ನಮ್ಮಂತಹ ಯುವ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ.ಮೈಸೂರು ಹಾಗೂ ಚಾಮರಾಜನಗರ ಭಾಗದಲ್ಲಿ ಅವರ ಮಾಡಿರುವ ಜನಪರ ಕೆಲಸಗಳು ಇನ್ನೂ ಜೀವಂತವಾಗಿವೆ ಸಚಿವರಾಗಿ ರಾಜ್ಯಾದ್ಯಂತ ಪ್ರವಾಸಮಾಡಿ ಉತ್ತಮ ಕಾರ್ಯಕ್ರಮ ನೀಡುವ ಮೂಲಕ ಜನಾನುರಾಗಿ ರಾಜಕಾರಣಿಯಾಗಿದ್ದರು. ಅವರ ವಹಿಸಿಕೊಂಡ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದರು. ಅವರ ಸೇವೆ, ಜನಪ್ರಿಯತೆಗೆ ಮುಖ್ಯಮಂತ್ರಿ ಆಗುವ ಅರ್ಹತೆ ಇತ್ತು ಆದರೆ ನಾನಾ ಕಾರಣಗಳಿಂದ ಅವಕಾಶ ತಪ್ಪಿತು.ಇದುವರೆಗೂ ದಲಿತ ಮುಖ್ಯಮಂತ್ರಿ ಆಗಲಿಲ್ಲ ನೋವು ಇದೆ ಎಂದರು.

ರಾಜಕಾರಣದ ಜೊತೆಗೆ ಸಾರ್ವಜನಿಕ ಜೀವನದಲ್ಲಿ ಸಹ ಸರಳರಾಗಿದ್ದರು. ಒಬ್ಬ ಶುದ್ಧಹಸ್ತರು ರಾಜಕಾರಣಿ ಆಗಿದ್ದರು. ಅವರ ಹಾದಿಯಲ್ಲಿ ಅವರ ಪುತ್ರರಾದ ಎ.ಆರ್.ಕೃಷ್ಣಮೂರ್ತಿ ಸಹೋದರ ಸಾಗುತ್ತಿದ್ದಾರೆ. ರಾಚಯ್ಯನವರ ತುಂಬ ಕುಟುಂಬ ನೋಡಿದರೆ ತುಂಬಾ ಸಂತಸವಾಗುತ್ತದೆ ಎಂದರು.

ಬಿ.ರಾಚಯ್ಯನವರ ಪುತ್ರ, ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಪೂಜ್ಯ ತಂದೆಯವರಾದ ರಾಚಯ್ಯನವರ 26 ನೇ ಸಂಸ್ಮರಣೆ ಹಾಗೂ ತಾಯಿಯವರಾದ ಗೌರಮ್ಮನವರ ಪ್ರಥಮ ವರ್ಷದ ಪುಣ್ಯ ಸ್ಮರಣೆಯನ್ನು ಏರ್ಪಡಿಸಿದ್ದು, ಅವರ ಅಭಿಮಾನಿಗಳು, ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಅವರ ಜನಪ್ರಿಯತೆ ಗೆ ಸಾಕ್ಷಿಯಾಗಿದೆ. ಅವರ ಮಕ್ಕಳಾದ ನಾವು ಅವರ ಹಾದಿ, ಮಾರ್ಗದರ್ಶನ ದಲ್ಲಿ ಸಾಗುವ ಮೂಲಕ ನಿಮ್ಮೆಲ್ಲರ ಪ್ರೀತಿ, ವಿಶ್ವಾಸಕ್ಕೆ ಅಭಾರಿಯಾಗಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯಆರ್.ಬಾಲರಾಜು, ಎ.ಆರ್.ಪ್ರಭಾವತಿ, ವೇದಾವತಿ, ಉಮಾವತಿ, ಆರತಿ, ತ್ರಿವೇಣಿ, ಮಾಜಿ ಸಚಿವ ಬಿ.ಬಿ. ಲಿಂಗಯ್ಯ, ನಿವೃತ್ತ ಅಧಿಕಾರಿಗಳಾದ ಪುಟ್ಟಮಾದಯ್ಯ,ನಿವೃತ್ತ ನಿರ್ದೇಶಕವೆಂಕಟೇಶ್, ಮಂಜುಳ ಕೃಷ್ಣಮೂರ್ತಿ, ವಿಜಯಲಕ್ಷ್ಮಿ ಬಾಲರಾಜು ಶ್ರೀವರ್ಧನ್, ರೋಷಿಣಿ ಪ್ರದೀಪ್ ಕುಮಾರ್, ನಿವೃತ್ತ ಐಪಿಎಸ್ ಅಧಿಕಾರಿ ಬೋಳಯ್ಯ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿ.ಪಂ. ಮಾಜಿ ಅಧ್ಯಕ್ಷ ಎಂ.ರಾಮಚಂದ್ರ,ಉಪಾಧ್ಯಕ್ಷರಾದ ಅಯ್ಯನಪುರ ಶಿವಕುಮಾರ್ ಹಾಗೂ ಇತರರು ಹಾಜರಿದ್ದರು.

# ಸ್ವಚ್ಛ ಸರ್ವೇಕ್ಷಣಾ ವಿದ್ಯಾರ್ಥಿಗಳಿಗೆ ವಿವಿ ಸನ್ಮಾನ



ಮೈಸೂರು: ಸ್ವಚ್ಛ ಸರ್ವೇಕ್ಷಣ್ 25–2026 ಹಾಗೂ ಸ್ವಚ್ಛತೆಯೇ ಸೇವೆ (ಸ್ವಭಾವ ಸ್ವಚ್ಛತೆ –ಸಂಸ್ಕಾರ ಸ್ವಚ್ಛತೆ] ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಇತ್ತೀಚೆಗೆ ಆಯೋಜಿಸಲಾಗಿದ್ದ "ಸ್ವಚ್ಛ ಮೈಸೂರು ರಸಪ್ರಶ್ನೆ" ಸ್ಪರ್ಧೆಯಲ್ಲಿ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳಾದ ಪಿ.ಹಿಮಂತ್ ಮತ್ತು ಎ.ಎಸ್. ಆದರ್ಶ್ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯವು ಅವರನ್ನು ಪ್ರಶಂಸಿಸಿ ಅಭಿನಂದಿಸಲಾಯಿತು. ಕುಲಪತಿ ಪ್ರೊ.ಎನ್. ಕೆ.ಲೋಕನಾಥ್, ಕುಲಸಚಿವೆ ಎಂ.ಕೆ.ಸವಿತಾ, ಕುಲಸಚಿವ (ಪರೀಕ್ಷಾಂಗ) ನಾಗರಾಜ, ಇತರರು ಉಪಸ್ಥಿತರಿದ್ದರು.

# 9ರಿಂದ ಜೆಎಸ್‌ಎಸ್‌ನಲ್ಲಿ ಯುವೋತ್ಸವ



ಮೈಸೂರು: ನಗರದ ಜೆಎಸ್‌ಎಸ್ ಎಎಚ್‌ಇಆರ್ ಆತಿಥ್ಯದಲ್ಲಿ ನಗರದ ಬನ್ನಿಮಂಟಪ ಬಳಿಯ ಸಂಸ್ಥೆಯ ಆವರಣದಲ್ಲಿ ಫೆ. 9 ರಿಂದ 13 ರವರೆಗೆ ಯುವೋತ್ಸವ ಶೀರ್ಷಿಕೆ ಅಡಿಯಲಿ ಅಂತರ ವಿವಿ ನೈಋತ್ಯ ವಲಯ ಯುವ ಉತ್ಸವ ಆಯೋಜಿಸಲಾಗಿದೆ ಎಂದು ಕುಲಪತಿ ಡಾ.ಎಚ್. ಬಸವನಗೌಡಪ್ಪ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಫೆ. 9 ರ ಬೆಳಗ್ಗೆ 11ಕ್ಕೆ ಉದ್ಘಾಟನೆ ನಡೆಯಲಿದ್ದು, ಭಾರತೀಯ ಚಿತ್ರರಂಗ ಮತ್ತು ನಾಟಕ ಕ್ಷೇತ್ರಗಳ ಖ್ಯಾತ ನಟರಾದ ಶ್ರೀ ಕೆ. ಸುಚೇಂದ ಪ್ರಸಾದ್ ಮುಖ್ಯ ಅತಿಥಿಯಾಗಿರಲಿದ್ದಾರೆ. ಅಧ್ಯಕ್ಷತೆ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಿಇಓ ಡಾ.ಸಿ.ಜಿ. ಬೆಟಸೂರಮಠ ವಹಿಸಲಿದ್ದಾರೆ. ಸಮ ಕುಲಾಧಿಪತಿ ಡಾ.ಬಿ. ಸುರೇಶ್, ತಾವು, ಉತ್ತರ ಪ್ರದೇಶದ ಸುಭಾರ್ತಿ ವಿಶ್ವವಿದ್ಯಾಲಯದ ಲಲಿತಕಲೆ ವಿಭಾಗದ ಮುಖ್ಯಸ್ಥ ಪ್ರೊ. ಭಾವನಾ ಗ್ರೂವರ್, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಉತ್ತರ ಪ್ರದೇಶದ ಸಹ ಪ್ರಾಧ್ಯಾಪಕರಾದ ಡಾ. ಬಾಲ ಲಕ್ಷೇಂದ್ರ, ಜೆಎಸ್‌ಎಸ್ ಎಚ್‌ಇಆರ್‌ನ ಕುಲಸಚಿವ ಡಾ. ಬಿ. ಮಂಜುನಾಥ್ ಉಪಸ್ಥಿತರಿರುವರೆಂದರು. ವಲಯದ ಒಟ್ಟು 33 ವಿವಿಗಳು ಭಾಗವಹಿಸುತ್ತಿದ್ದು, 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಪ್ರತಿಭ ಪ್ರದರ್ಶಿಸಲಿದ್ದಾರೆ. ಇವುಗಳಲ್ಲಿ 13 ವಿವಿ, ಮಹಾರಾಷ್ಟ್ರ ದಿಂದ 13 ವಿವಿ, ಗೋವಾದಿಂದ 2 ವಿವಿಗಳು ಸಹಾ ಸೇರಿವೆ. ಫೆ. 13 ರಂದು ಸಮಾರೋಪ ನಡೆದು ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಗುವುದು. ಇಲ್ಲಿ ವಿಜೇತರಾದವರು ಮುಂದಿನ ಹಂತದ ಸ್ಪರ್ಧೆಗಳಿಗೆ ಆಯ್ಕೆಯಾಗಲಿದ್ದಾರೆಂದರು. ಡಾ.ಬಿ. ಮಂಜುನಾಥ್, ಡಾ. ವಿಶಾಲ್ ಕುಮಾರ್ ಗುಪ್ತ ಇದ್ದರು.

**▶▶ ಬನ್ನಿಮಂಟಪ ಬಳಿಯ ಸಂಸ್ಥೆಯ ಆವರಣದಲ್ಲಿ ಕಾರ್ಯಕ್ರಮ**

# 10ರಂದು ವಿದ್ಯುತ್ ವ್ಯತ್ಯಯ

ರಾಮನಗರ: 66 ಕೆವಿ ಅಕ್ಕೂರುಮೊಳೆ ವಿದ್ಯುತ್ ಉಪಕೇಂದ್ರದ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದೆ. ಅಕ್ಕೂರುಮೊಳೆ, ಸಂತೆಮೊಗೇನಹಳ್ಳಿ, ಅಕ್ಕೂರು, ಗರಕಹಳ್ಳಿ, ಸುಳ್ಳೇರಿ, ಮಳೂರುಪಟ್ಟಣ, ಚಕ್ಕೆರೆ, ಚಕ್ಕಲೂರು, ಕೃಷ್ಣಾಪುರ, ತೂಬಿನಕೆರೆ, ಎ.ವಿ.ಹಳ್ಳಿ, ಕೊಂಡಾಪುರ, ಸೋಗಾಲ, ಬಾಣಗಹಳ್ಳಿ, ಮಾದಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಫೆ.10 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರವಿಚಂದ್ರ ತಾಲೂಕು ಅಧ್ಯಕ್ಷ

ಎಚ್.ಡಿ.ಕೋಟೆ: ಅಖಿಲ ಕರ್ನಾಟಕ ಡಾ.ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷರಾಗಿ ಹೊಳೆಹುಂಡಿ ಗ್ರಾಮದ ಎಚ್.ಟಿ.ರವಿಚಂದ್ರ ಆಯ್ಕೆಯಾಗಿದ್ದಾರೆ.



ಶುಕ್ರವಾರ ಮೈಸೂರು ನಗರ್ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ, ಅಖಿಲ ಕರ್ನಾಟಕ ಡಾ.ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ 8ನೆ ವರ್ಷದ ವಾರ್ಷಿಕೋತ್ಸವ, ಜಿಲ್ಲಾ, ತಾಲೂಕು ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಕಾರ್ಮಿಕ ಇಲಾಖೆ ಸಚಿವ ಸಂತೋಷ್ ಲಾಡ್ ಕಾರ್ಯಕ್ರಮ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ತಿಮ್ಮಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಚಿಂತಕ ರಾಜಪ್ಪ ದಳವಾಯಿ ಸೇರಿದಂತೆ ಅನೇಕ ಗಣ್ಯರಿದ್ದ ಕಾರ್ಯಕ್ರಮದಲ್ಲಿ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡಪ್ಪ ಅವರು ಎಚ್.ಟಿ. ರವಿಚಂದ್ರ ಅವರನ್ನು ತಾಲೂಕು ಅಧ್ಯಕರಾಗಿ ನೇಮಕ ಮಾಡಿದ್ದಾರೆ.

**ಫೆ.9ರಂದು ಜೀತ ಪದ್ಧತಿ ನಿರ್ಮೂಲನೆ ದಿನ ಆಚರಿಸಲು ಗೆಜೆಟ್ ಹೊರಡಿಸಿರುವ ಕ್ರಮವನ್ನು ವಿರೋಧಿಸಿ ಪ್ರತಿಭಟನೆ**

# ಅ.25ರಂದೇ ಜೀತ ಪದ್ಧತಿ ಆಚರಿಸಲು ಆಗ್ರಹ



ಎಚ್.ಡಿ.ಕೋಟೆ : ರಾಜ್ಯ ಸರ್ಕಾರ ಅ.25ರ ಬದಲಾಗಿ ಫೆ.9ರಂದು ಜೀತ ಪದ್ಧತಿ ನಿರ್ಮೂಲನೆ ದಿನ ಆಚರಿಸಲು ಗೆಜೆಟ್ ಹೊರಡಿಸಿರುವ ಕ್ರಮವನ್ನು ವಿರೋಧಿಸಿ, ಅ.25ರಂದೆ ಜೀತ ಪದ್ಧತಿ ನಿರ್ಮೂಲನೆ ದಿನ ಆಚರಿಸುವಂತೆ ಒತ್ತಾಯಿಸಿ ತಾಲೂಕು ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾಜ್ಯಾದ್ಯಂತ ಸುಮಾರು 35 ವರ್ಷಗಳಿಂದ ಸಾಮಾಜಿಕ ಪಿಡುಗಾದ ಜೀತ ನಿರ್ಮೂಲನೆಗೆ ಸಂಘಟನೆ ಹಗಲಿರುಳೆನ್ನದೆ ನಿರಂತರವಾಗಿ ಜಾಗೃತಿ ಮೂಡಿಸುತ್ತಾ ಬಂದಿದೆ. ಸಂಘಟನೆ ಹೋರಾಟದ ಫಲವಾಗಿ ಸಾವಿರಾರು ಮಂದಿ ಜೀತ ವಿಮುಕ್ತರು ಜೀತದಿಂದ ವಿಮುಕ್ತರಾಗಿ ಸ್ವತಂತ್ರದ ಸ್ವಾವಲಂಬಿ ಬದುಕು ನಡೆಸುತ್ತಿದ್ದಾರೆ. ಜೀತ ವಿಮುಕ್ತಿಗೆ ಕರ್ನಾಟಕ ರಾಜ್ಯ ಸರ್ಕಾರ ತೆಗೆದುಕೊಂಡ ಪರಿಣಾಮಕಾರಿ ನಿಲುವು ಸ್ವಾಗತಾರ್ಹ. ಸಂವಿಧಾನದ ಆಶಯದಂತೆ 1976 ಅಕ್ಟೋಬರ್ 25ರಂದು ಜೀತ ಪದ್ಧತಿ ನಿರ್ಮೂಲನ ದಿನ ಜಾರಿಗೆ ಬಂತು. ಈ ದಿನವನ್ನು ಜೀವಿಕ ಸಂಘಟನೆ ಕಳೆದ 25 ವರ್ಷಗಳಿಂದ ಜೀತ ಪದ್ಧತಿ ಜಾಗೃತಿ ದಿನವೆಂದು ಆಚರಿಸುತ್ತಿದೆ. ಈ ದಿನದಂದು ಸರ್ಕಾರ ಮತ್ತು ಜೀತದಾಳುಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ತಾಲೂಕು, ಜಿಲ್ಲೆ ರಾಜ್ಯ ಮಟ್ಟದಲ್ಲಿ ಸಂವಾದ, ವಿಚಾರ ಸಂಕೀರಣ, ಧರಣಿ, ಪ್ರತಿಭಟನೆ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ.

ಆದರೆ ಇತ್ತೀಚೆಗೆ ಕರ್ನಾಟಕ ಸರ್ಕಾರ ಯಾರದೋ ಒತ್ತಡಕ್ಕೆ ಮಣಿದು ಜೀತ ಪದ್ಧತಿ ರದ್ದತಿ ಕಾನೂನು ಜಾರಿಗೆ ಬಂದ ಅ.25ರ ಬದಲಾಗಿ 2021– 2014ರ ಗೆಜೆಟ್ ಪ್ರಕಟಣೆ ಮೂಲಕ ಫೆ.9ರಂದು ಆಚರಿಸುತ್ತಿರುವುದು ಸ್ಪಷ್ಟ ಜೀತ ಕಾನೂನಿಗೆ ವಿರೋಧ ಮತ್ತು ಉಲ್ಲಂಘನೆಯಾಗಿದೆ. ಕೂಡಲೆ ಸರ್ಕಾರ ಈ ಸುತ್ತೋಲೆ ರದ್ದುಪಡಿಸಿ ಅ.25ರಂದೆ ದಿನ ಆಚರಣೆಗೆ ಆದೇಶ ನೀಡಬೇಕು.

ಜೀತ ವಿಮುಕ್ತರ ಪುನರ್ವಸತಿಗೆ ಮಾರಕವಾದ ಎಸ್.ಓ.ಪಿ ಕೂಡಲೆ ರದ್ದು ಮಾಡಬೇಕು. 2008ರ ಕ್ರಿಯಾ ಯೋಜನೆಯಂತೆ ಜೀತ ವಿಮುಕ್ತರಿಗೆ ಸಮಗ್ರ ಮನರ್ವಸತಿ ಕಲ್ಪಿಸಬೇಕು. ಜಿಲ್ಲೆ ಮತ್ತು ಉಪ ವಿಭಾಗ ಮಟ್ಟದ ಜಾಗೃತಿ ಸಮಿತಿ ಸಭೆ ಪ್ರತಿ 3ತಿಂಗಳಿಗೊಮ್ಮೆ ನಡೆಯಬೇಕು, ಜೀತ ವಿಮುಕ್ತರ ಸಮಗ್ರ ಪುನರ್ವಸತಿಗೆ ಸರ್ಕಾರ ಈ ಸಾಲಿನ ಬಜೆಟ್ನಲ್ಲಿ 500ಕೋಟಿ ಮೀಸಲಿಡಬೇಕು ಎನ್ನುವ ಒತ್ತಾಯದ ಮನವಿ ಪತ್ರವೊಂದನ್ನು ತಹಸೀಲ್ದಾರ್ ಶ್ರೀನಿವಾಸ್ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಅವರು ಒಂದು ವೇಳೆ ಮನವಿಗೆ ಸ್ಪಂದಿಸದಿದ್ದರೆ ರಾಜ್ಯವ್ಯಾಪ್ತಿ ಉಗ್ರ ಹೋರಾಟ ನಡೆಸುವ ಎಚ್ಚರಿಕೆ ನೀಡಿದರು. ಒಕ್ಕೂಟದ ತಾಲೂಕು ಅಧ್ಯಕ್ಷ ಗಣೇಶ್, ಉಪಾಧ್ಯಕ್ಷೆ ಲಕ್ಷ್ಮಮ್ಮ, ಜಾಗೃತಿ ಸಮಿತಿ ಸದಸ್ಯ ಶಿವಣ್ಣ ಯಲ್ಲಮ್ಮತ್ತೂರು, ಜಯಮ್ಮ, ಮಲ್ಲಿಗಮ್ಮ, ಮಹದೇವು, ಜೀವಿಕ ಬಸವರಾಜು, ಶಿವಣ್ಣ ಚಂದ್ರಶೇಖರ್ ಮೂರ್ತಿ, ಗೋಪಾಲಯ್ಯ ನಂಜುಂಡಯ್ಯ ಶೆಟ್ಟಿಯ್ಯ, ನರಸಿಂಹ, ಕೃಷ್ಣನಾಯಕ ಮೊದಲಾದವರು ಪ್ರತಿಭಟನೆಯಲ್ಲಿದ್ದರು.

# ಗಮನ ಸೆಳೆದ ಮಕ್ಕಳ ಸಂತೆಯಲ್ಲಿ ತರಕಾರಿಗಳ ಕಲರವ

ಚಾಮರಾಜನಗರ, ತಾಲ್ಲೂಕಿನ ನಾಗವಳ್ಳಿ ಗ್ರಾಮದ ಪಿಎಂ ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2025?26ನೇ ಶೈಕ್ಷಣಿಕ ಸಾಲಿನ ಅಂಗವಾಗಿ ಶೈಕ್ಷಣಿಕ ವಸ್ತು ಪ್ರದರ್ಶನೋತ್ಸವ, ಮಕ್ಕಳ ಸಂತೆ, ಆಹಾರ ಮೇಳ ಹಾಗೂ ಹಳೆಯ ವಸ್ತುಗಳ ಸಂಗ್ರಹ ಪ್ರದರ್ಶನವನ್ನು ಅದ್ದೂರಿಯಾಗಿ ಆಯೋಜಿಸಲಾಗಿತ್ತು.



ಶೈಕ್ಷಣಿಕ ವಸ್ತು ಪ್ರದರ್ಶನಕ್ಕೆ ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳಾದ ಮಹದೇವಪ್ಪ, ಸಿದ್ದರಾಜು ಹಾಗೂ ಕ್ಲಸ್ಟರ್ ಸಂಪನ್ಮೂಲ ಅಧಿಕಾರಿಗಳಾದ ಸೋಮಣ್ಣ, ಕಿಟ್ಟು ಅವರು ಚಾಲನೆ ನೀಡಿದರು. ವಿದ್ಯಾರ್ಥಿಗಳು ತಯಾರಿಸಿದ ಶೈಕ್ಷಣಿಕ ಮಾದರಿ ವಸ್ತುಗಳು, ಸೃಜನಾತ್ಮಕ ಪ್ರದರ್ಶನಗಳು ಹಾಗೂ ಮಕ್ಕಳ ಸಂತೆ ಎಲ್ಲರ ಗಮನ ಸೆಳೆದವು. ನಾಗವಳ್ಳಿ ಶಾಲೆಯಲ್ಲಿ ಆಯೋಜಿಸಿದ ಮಕ್ಕಳ ಸಂತೆ ಕಾರ್ಯಕ್ರಮದಲ್ಲಿ ಇರಿಸಿದ್ದ ತಾಜಾ ತರಕಾರಿಗಳನ್ನು ಅಚ್ಚುಕಟ್ಟಾಗಿ ತೋರಿಸಿ ವೀಕ್ಷಕರನ್ನು ಮೆಚ್ಚಿಸಿದರು. ಹಸಿ ಮೆಣಸಿನಕಾಯಿ, ಟೊಮೆಟೊ, ಬದನೆಕಾಯಿ, ಕ್ಯಾರೆಟ್, ವಿವಿಧ ಸೊಪ್ಪುಗಳು ಸೇರಿದಂತೆ ನಾನಾ ತರಕಾರಿಗಳನ್ನು ಪುಟ್ಟ ಅಂಗಡಿಗಳಂತೆ ಜೋಡಿಸಿ, ಖರೀದಿ?ಮಾರಾಟದ ಅನುಭವವನ್ನು ಮಕ್ಕಳು ನಿರ್ವಹಿಸಿದರು. ಈ ಮೂಲಕ ಅವರು ವ್ಯಾಪಾರ ಜ್ಞಾನ, ಆತ್ಮವಿಶ್ವಾಸ ಹಾಗೂ ಜೀವನ ಕೌಶಲ್ಯಗಳನ್ನು ಅಭ್ಯಾಸದ ಮೂಲಕ ಪಡೆದುಕೊಂಡರು. ಶೈಕ್ಷಣಿಕ ವಸ್ತು ಪ್ರದರ್ಶನ ಮತ್ತು ಮಕ್ಕಳ ಸಂತೆ ಕಾರ್ಯಕ್ರಮವನ್ನು ವಿವಿಧ ಶಾಲೆಯ ಶಿಕ್ಷಕರು ಹಾಗೂ ಪೋಷಕರು, ಸಾರ್ವಜನಿಕರು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಚೈತನ್ಯ ಮತ್ತು ಸೃಜನಶೀಲತೆಯನ್ನು ಮೆಚ್ಚಿ ಪ್ರಶಂಸೆ ವ್ಯಕ್ತಪಡಿಸಿದರು.

ಶಾಲಾ ಮುಖ್ಯ ಶಿಕ್ಷಕಿ ಶಾಂತಿ ಅವರ ನೇತೃತ್ವದಲ್ಲಿ ಆಯೋಜನೆಗೊಂಡ ಈ ಕಾರ್ಯಕ್ರಮಕ್ಕೆ ಸಹ ಶಿಕ್ಷಕರು, ಶಾಲಾ ಸಿಬ್ಬಂದಿ, ಎಸ್‌ಡಿಎಂಸಿ, ಅಧ್ಯಕ್ಷರು, ಸದಸ್ಯರು ಹಾಗೂ ವಿದ್ಯಾರ್ಥಿಗಳು ಕೈಜೋಡಿಸಿದರು. ಕಾರ್ಯಕ್ರಮದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಭಾಸ್ಕರ್, ಅಜೀ ಪ್ರೇಮ್ ಜಿ, ಸಂಸ್ಥೆಯ ಮಹೇಂದ್ರ ಹಾಜರಿದ್ದರು.

# ರೈಲ್ವೆ ಪರೀಕ್ಷೆ ಕನ್ನಡದಲ್ಲಿ ನಡೆಸಲು ಆಗ್ರಹ

ಮೈಸೂರು: ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ರಾಜ್ಯದ ಸಿಬ್ಬಂದಿಗೆ ರೈಲ್ವೆ ಮುಂಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲಿಯೇ ನಡೆಸಬೇಕು ಎಂದು ಆಗ್ರಹಿಸಿ ಕರ್ನಾಟಕ ಹಿತರಕ್ಷಣಾ ವೇದಿಕೆವತಿಯಿಂದ ಶನಿವಾರ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಪರ ಜಿಲ್ಲಾಧಿಕಾರಿ ಶಿವರಾಜ್ ಗೆ ಮನವಿ ಸಲ್ಲಿಸಿದರು.

ರೈಲ್ವೆ ಇಲಾಖೆಯ ಗ್ರೂಪ್ ಸಿ ಹಾಗೂ ಗ್ರೂಪ್ ಡಿ ಪರೀಕ್ಷೆಗಳನ್ನು ಪ್ರಥಮ ಹಂತದಲ್ಲಿ ಕನ್ನಡದಲ್ಲಿಯೇ ನಡೆಸಲಾಗುತ್ತದೆ. ಆಯ್ಕೆಯಾದ ನಂತರ ಮುಂಬಡ್ತಿಗೆ ಸಂಬಂಧಿಸಿದ ಇಲಾಖೆವಾರು ಆಂತರಿಕ ಪರೀಕ್ಷೆಯನ್ನು ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ನಡೆಸುವ ಮೂಲಕ ಕನ್ನಡಿಗರನ್ನು ಮುಂಬಡ್ತಿಯಿಂದ ವಂಚಿಸಲಾಗುತ್ತಿದೆ. ಅಧಿಕಾರಿಗಳು ರಾಜ್ಯದ ಸಿಬ್ಬಂದಿಗೆ ಮುಂಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲಿಯೇ ನಡೆಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್ ಮಾತನಾಡಿ, ರೈಲ್ವೆ ಇಲಾಖೆಯ ಉದ್ಯೋಗ ವಿಚಾರವಾಗಿ ಮೊದಲಿನಿಂದಲೂ ಕನ್ನಡಿಗರನ್ನು ವಂಚಿಸುತ್ತಾ ಬಂದಿದೆ. ನೇಮಕಾತಿ ಪರೀಕ್ಷೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ನಲ್ಲಿ ನಡೆಸುವ ಮೂಲಕ ಉನ್ನತ ಹುದ್ದೆಗಳನ್ನು ಕನ್ನಡಿಗರಿಗೆ ತಪ್ಪಿಸುತ್ತಿದೆ



ಎಂದರು. ಕೇಂದ್ರದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕನ್ನಡಿಗರನ್ನು ಅವಮಾನ ಮಾಡುವುದು ತಪ್ಪಿಲ್ಲ, ನಮ್ಮ ಮಾತೃಭಾಷೆಯಲ್ಲಿ ರೈಲ್ವೆ ನೇಮಕಾತಿ ಪರೀಕ್ಷೆ ಬರೆಯುವ ಹಕ್ಕನ್ನು ಕೇಂದ್ರ ಸರ್ಕಾರವೇ ಕಿತ್ತುಕೊಳ್ಳುತ್ತಿದೆ ಕನ್ನಡಿಗರಾದ ವಿ ಸೋಮಣ್ಣ ಅನ್ಯಾಯ ತಪ್ಪಿಸಲಿ ಎಂದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಎಸ್‌ಎನ್ ರಾಜೇಶ್, ಲೋಕೇಶ್, ಈಶ್ವರ್, ರವಿಚಂದ್ರ, ಯತೀಂದ್ರ, ರಾಕೇಶ್, ಅಮಿತ್ ಇನ್ನಿತರರು ಹಾಜರಿದ್ದರು.

# ಡ್ರಗ್ಸ್ ನಿಗ್ರಹಕ್ಕೆ ಕಠಿಣ ಕ್ರಮ: ಜಿ.ಪರಮೇಶ್ವರ್

## ಸಿದ್ಧಾರ್ಥನಗರ ಸಂಚಾರ ಠಾಣೆ ಉದ್ಘಾಟಿಸಿದ ಗೃಹ ಸಚಿವರ ಹೇಳಿಕೆ



ಮೈಸೂರು: ರಾಜ್ಯವನ್ನು ಉಡ್ತಾ ಪಂಜಾಬ್ ಆಗಲು ಬಿಡುವುದಿಲ್ಲ. ಆ ಹಂತಕ್ಕೂ ರಾಜ್ಯ ಹೋಗಲು ಬಿಡುವುದಿಲ್ಲ. ಡ್ರಗ್ಸ್ ವಿರುದ್ಧ ಈಗಾಗಲೇ ತನಿಖೆ, ಕೇಸ್ ದಾಖಲಿಸಿ ಜೈಲಿಗೂ ಕಳುಹಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆಯ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು. ಬೆಂಗಳೂರಿನಲ್ಲಿ ನಿತ್ಯ ನೂರಾರು ಡ್ರಗ್ಸ್ ಪ್ರಕರಣಗಳನ್ನು ದಾಖಲಿಸುತ್ತಿದ್ದೇವೆ. ಕೈಗೊಂಡಿರುವ ಕ್ರಮಗಳ ಬಗ್ಗೆ ನಾವು ಎಲ್ಲೂ ಪ್ರಚಾರ ಮಾಡಿಲ್ಲ. ಏಕೆಂದರೆ ಹೊರ ದೇಶದಿಂದ ಬರುವವರಿಗೆ ಕೆಟ್ಟ ಸಂದೇಶ ಬರುತ್ತದೆ ಎಂಬ ಕಾರಣಕ್ಕೆ ಪ್ರಚಾರ ಮಾಡಲ್ಲ. ನಿತ್ಯ ಬೆಂಗಳೂರಿನಲ್ಲಿ ಸಾವಿರಾರು ಮಂದಿ ತನಿಖೆ ಮಾಡಿ ನೂರಾರು ಕೇಸ್ ಹಾಕುತ್ತಾ ಅನೇಕರನ್ನು ವಾಪಾಸ್ ಅವರ ದೇಶಕ್ಕೆ ಕಳುಹಿಸುವ ಕೆಲಸವನ್ನು ಮಾಡುತ್ತಿದ್ದೇವೆಂದರು.

ಈ ಹಿಂದೆ ಪಂಜಾಬ್‌ನ ಪ್ರತಿ ಮನೆಗಳಲ್ಲಿ ಡ್ರಗ್ಸ್ ಸಿಗುತ್ತಿತ್ತು ಎಂದು ಹೇಳುತ್ತಾರೆ. ಯಾವುದೇ ಕಾರಣಕ್ಕೂ ಕರ್ನಾಟಕವನ್ನು ಉಡ್ತಾ ಪಂಜಾಬ್ ಆಗಲು ಬಿಡಲ್ಲ. ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ 20ಕ್ಕೂ ಹೆಚ್ಚು ಡ್ರಗ್ಸ್ ಘಟಕ ಪತ್ತೆಯಾದ ಬಗ್ಗೆ ಕೇಂದ್ರ ತನಿಖಾ ದಳ ತಿಳಿಸಿವೆ. ಆದರೆ, ಮೈಸೂರಿನಲ್ಲಿ ಯಾವುದೇ ಡ್ರಗ್ಸ್ ಪತ್ತೆ ಆಗಿಲ್ಲ. ಎನ್‌ಸಿಬಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಮಾಹಿತಿಯಲ್ಲಿ ಡ್ರಗ್ಸ್ ಸಿಕ್ಕಿಲ್ಲ ಎಂದಿದೆ. ಆದರೆ ಪತ್ರಿಕಾ ಹೇಳಿಕೆಯಲ್ಲಿ 10 ಕೋಟಿ ಡ್ರಗ್ಸ್ ಸಿಕ್ಕಿದೆ ಎಂದು ಹೇಳಿದೆ. ಯಾಕೆ ಈ ರೀತಿ ದ್ವಂದ್ವ ಹೇಳಿಕೆ ನೀಡಿದೆಯೋ ಗೊತ್ತಿಲ್ಲ. ಮೈಸೂರಿನಲ್ಲಿ ದಾಳಿ ಮಾಡಿದ್ದಾಗ ಫಿನಾಯಿಲ್ ಸಂಬಂಧಿಸಿ ಕೆಮಿಕಲ್ಸ್ ಮಾತ್ರ ಸಿಕ್ಕಿದೆ ಎಂದರು. ಹೀಗಿದ್ದರೂ ಸಹ ರಾಜ್ಯದಲ್ಲಿ ಪೊಲೀಸರ ಕಣ್ತಪ್ಪಿಸಿ ಯಾವುದೇ ಕೆಮಿಕಲ್ ಫ್ಯಾಕ್ಟರಿಗಳನ್ನು ನಡೆಸುತ್ತಿಲ್ಲ. 15 ದಿನಕ್ಕೊಮ್ಮೆ ನಮ್ಮ ಪೊಲೀಸರು ಎಲ್ಲ ಕೆಮಿಕಲ್ ಫ್ಯಾಕ್ಟರಿಗಳಿಗೆ ಭೇಟಿ ನೀಡಿ ಚೆಕ್ ಮಾಡುವಂತೆ ಸೂಚಿಸಲಾಗಿದೆ. ಅಲ್ಲಿ ಬಳಸುವ ರಾ ಮೆಟಿರಿಯಲ್‌ಗಳ ಬಗ್ಗೆಯೂ ಮಾಹಿತಿ ಕಲೆ ಹಾಕಬೇಕಿದೆ. ಅಪ್ಪಿತಪ್ಪಿ ಎಲ್ಲಾದರೂ ಡ್ರಗ್ಸ್ ಸಿಕ್ಕರೆ ಅದಕ್ಕೆ ಆಯಾ ವ್ಯಾಪ್ತಿಯ ಪೊಲೀಸರು ಹೊಣೆಯಾಗುತ್ತಾರೆ ಎಂದು ಎಚ್ಚರಿಸಿದರು.

ಅನಧಿಕೃತವಾಗಿ ತಳವೂರಿರುವ ಬಾಂಗ್ಲಾ ದೇಶದ ಜನರ ಬಗ್ಗೆ ಬಹಳಷ್ಟು ಜನ ಒಂದೊಂದು ರೀತಿ ಹೇಳಿಕೆ ನೀಡುತ್ತಿದ್ದಾರೆ. ಹಾಗಾಗಿ, ಪ್ರತಿಯೊಂದು ಮನೆ, ಕಾಫಿ ತೋಟ, ಕಟ್ಟಡ ನಿರ್ಮಾಣ ಜಾಗ ಸೇರಿ ಎಲ್ಲೆಡೆ ಎಲ್ಲ ಕಾರ್ಮಿಕರನ್ನು ಪರಿಶೀಲನೆ ಮಾಡಬೇಕು ಎಂದು ಸೂಚನೆ ನೀಡಿದ್ದೇನೆ. ಅನಧಿಕೃತ ಬಾಂಗ್ಲಾದೇಶದ ಪ್ರಜೆ ಸೇರಿ ಯಾವುದೇ ದೇಶದ ಅನಧಿಕೃತ ಪ್ರಜೆಗಳನ್ನು ಹಿಡಿಯುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ. ಇದು ನಮ್ಮಲ್ಲಿ ಮಾತ್ರ ಹೊಸದಲ್ಲ. ಅನಧಿಕೃತ ಪ್ರಜ್ಞೆಗಳ ಸಮಸ್ಯೆ ಅಮೆರಿಕಾದಲ್ಲೂ ಇದೆ. ಇದು ಇಂದು ನಮಗೆ ದೊಡ್ಡ ಸವಾಲಾಗಿದೆ ಎಂದರು.

ದೇಶದಲ್ಲಿಯೇ ಮೊದಲು 'ಮನೆ ಮನೆಗೆ ಪೊಲೀಸ್' ಎಂಬ ಕಾರ್ಯಕ್ರಮವನ್ನು ಜಾರಿ ಮಾಡಿದ್ದೇವೆ. ಈ ಹಿಂದೆ ಕೆಪಿಸಿಸಿ ಅಧ್ಯಕ್ಷ ಆಗಿದ್ದಾಗ 'ಮನೆ ಮನೆಗೆ ಕಾಂಗ್ರೆಸ್' ಎಂಬ ಕಾರ್ಯಕ್ರಮ ಮಾಡಿದ್ದೆವು. ಆಗ 2013 ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ಅದು ನನ್ನ ತಲೆಯಲ್ಲಿದ್ದ ಕಾರಣ ಈಗ 'ಮನೆ ಮನೆ ಪೊಲೀಸ್' ಕಾರ್ಯಕ್ರಮ ಜಾರಿ ಮಾಡಲಾಯಿತು. ಸದರಿ ಕಾರ್ಯಕ್ರಮದಿಂದ ಇಡೀ ಬಡಾವಣೆಯ ಮಾಹಿತಿ, ಅಲ್ಲಿ ವಾಸಿಸುತ್ತಿರುವವರ ಮಾಹಿತಿ ಸಿಕ್ಕಿದೆ. ಎಲ್ಲಿ ಏನೇ ನಡೆದರೂ ಮಾಹಿತಿ ದೊರೆಯುತ್ತಿದೆ. ಹಾಗಾಗಿ, ಮನೆ ಮನೆಗೆ ಹೋಗಿ ಸಾರ್ವಜನಿಕರ ಜೊತೆ ಮಾತನಾಡಿ ಅವರ ಕಷ್ಟ ಸುಖ ಕೇಳಬೇಕು ಎಂದು ಪೊಲೀಸರಿಗೆ ತಿಳಿಸಿದ್ದೇನೆ. ಇದಕ್ಕೆ ದೇಶದಲ್ಲೇ ಮೂರನೇ ಸ್ಥಾನ ದೊರೆತಿದೆ ಎಂದರು.

### 'ವಿಮುಕ್ತಿ' ಮಾದಕ ವಸ್ತು ಮುಕ್ತ ಮೈಸೂರಿನತ್ತ ಹೆಜ್ಜೆ

ಮೈಸೂರು: ಡ್ರಗ್ಸ್ ಮುಕ್ತ ಮೈಸೂರು ಮಾಡಲು ಮುಂದಾಗಿರುವ ಮೈಸೂರು ನಗರ ಪೊಲೀಸರು 'ವಿಮುಕ್ತಿ' ಮಾದಕ ವಸ್ತು ಮುಕ್ತ ಮೈಸೂರಿನತ್ತ ಹೆಜ್ಜೆ ಎಂಬ ಕಾರ್ಯಕ್ರಮ ಜಾರಿ ಮಾಡಿದ್ದಾರೆ.

ಇದರ ಅಡಿ ಪೊಲೀಸ್ ಇಲಾಖೆಯ 8277948080 ಎಂಬ ವಾಟ್ಸ್ ಆಪ್ ನಂಬರ್ ಕಾರ್ಯ ನಿರ್ವಹಿಸಲಿದೆ. ಸಾರ್ವಜನಿಕರು ತಮ್ಮ ಸುತ್ತ ಮುತ್ತ ನಡೆಯುತ್ತಿರುವ ಮಾದಕ ವಸ್ತು ಸೇವನೆ ಮತ್ತು ಮಾರಾಟದ ಮಾಹಿತಿಯನ್ನು ಸದರಿ ನಂಬರ್‌ಗೆ ವಾಟ್ಸ್ ಆಪ್ ಮಾಡಬಹುದು. ಸದರಿ ಮಾಹಿತಿ ಮೇಲೆ ಪೊಲೀಸರು ಕ್ರಮ ವಹಿಸಲಿದ್ದಾರೆ. ಮಾಹಿತಿ ನೀಡಿದ ಮಾಹಿತಿದಾರರ ಗುರುತನ್ನು ರಹಸ್ಯವಾಗಿರಿಸಲು ಪೊಲೀಸರು ತೀರ್ಮಾನಿಸಿದ್ದಾರೆ. ಶನಿವಾರ ಆಯೋಜಿಸಿದ್ದ ಸಿದ್ಧಾರ್ಥ ನಗರ ಸಂಚಾರ ಪೊಲೀಸ್ ಠಾಣೆಯ ಕಟ್ಟಡವನ್ನು ಉದ್ಘಾಟನಾ ಸಮಾರಂಭದಲ್ಲಿ ಕಾರ್ಯಕ್ರಮದ ಪೋಸ್ಟರ್‌ನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಬಿಡುಗಡೆ ಮಾಡುವ ಮೂಲಕ ಸದರಿ ಕಾರ್ಯಕ್ರಮಕ್ಕೂ ಚಾಲನೆ ನೀಡಿದರು. ಆ ಮೂಲಕ ಡ್ರಗ್ಸ್ ಮುಕ್ತ ಮೈಸೂರಿಗೆ ಮುನ್ನುಡಿ ಬರೆದರು.

'ಡ್ರಗ್ಸ್ ಮುಕ್ತ ಮೈಸೂರು ಮಾಡುವ ಸಂಬಂಧ ನಮ್ಮ ಇಲಾಖೆ ವತಿಯಿಂದ ಮೈಸೂರು ನಗರದಲ್ಲಿ ಅನೇಕ ಅರಿವು ಕಾರ್ಯಕ್ರಮ ಮಾಡಿದ್ದೇವೆ. ಸಾರ್ವಜನಿಕರು ಕೂಡ ನಮ್ಮೊಂದಿಗೆ ಕೈ ಜೋಡಿಸಬೇಕು. ಪಾಲಕರು, ಶಿಕ್ಷಕರು ಮಕ್ಕಳ ಬಗ್ಗೆ ನಿಗಾವಹಿಸಬೇಕು. ನಿತ್ಯ ಅವರ ಚಲನವಲನದ ಬಗ್ಗೆ ಗಮನಿಸಬೇಕು. ಡ್ರಗ್ಸ್‌ನಿಂದ ಅನೇಕರು ಬಲಿಯಾಗಿದ್ದಾರೆ. ಈ ಸಂಬಂಧ ನಮ್ಮ ಇಲಾಖೆಯಿಂದ ಒಂದು ವಾಟ್ಸ್ ಆಪ್ ನಂಬರ್ ಕಾರ್ಯ ನಿರ್ವಹಿಸಲಿದ್ದು, ಸಾರ್ವಜನಿಕರು ಡ್ರಗ್ಸ್ ಸಂಬಂಧ ಸದರಿ ನಂಬರ್ ಮೂಲಕ ಮಾಹಿತಿ ನೀಡಬುದಾಗಿದೆ. ಎಲ್ಲರೂ ಸಹ ಪೊಲೀಸ್ ಇಲಾಖೆ ಜೊತೆ ಕೈ ಜೋಡಿಸಬೇಕು' ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ ನೀಡಿದರು.

# ಪ್ರವಾಸಿ ಸ್ನೇಹಿ ಪೊಲೀಸ್ ವ್ಯವಸ್ಥೆ ಬರಲಿ

ಮೈಸೂರು: ಮೈಸೂರಿನ ಪೊಲೀಸರಿಗೆ ಪ್ರವಾಸಿ ಸ್ನೇಹಿ ಆಗಿರುವ ಬಗ್ಗೆ ಹಿರಿಯ ಅಧಿಕಾರಿಗಳು ಸೂಕ್ತ ತರಬೇತಿ ನೀಡಿ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಲಹೆ ನೀಡಿದರು.



ನಗರದ ಸಿದ್ದಾರ್ಥ ನಗರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ಧಾರ್ಥ ನಗರ ಸಂಚಾರ ಪೊಲೀಸ್ ಠಾಣೆಯ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು. ಮೈಸೂರು ನಗರಕ್ಕೆ ಹೊರಗಿನಿಂದ ಬರುವ ಪ್ರವಾಸಿಗರ ವಾಹನಗಳಿಗೆ ಯಾವುದಾರೂ ಒಂದು ಪಾಯಿಂಟ್‌ನಲ್ಲಿ ಸ್ಟಿಕರ್ ಹಾಕುವ ವ್ಯವಸ್ಥೆ ಜಾರಿಯಾಗಬೇಕು ಮೈಸೂರಿಗೆ ನಿತ್ಯ ಲಕ್ಷಾಂತರ ಜನ ಪ್ರವಾಸಿಗರು ಬರುತ್ತಾರೆ. ಅವರನ್ನು ಗುರುತಿಸುವ ನಿಟ್ಟಿನಲ್ಲಿ ಅವರ ವಾಹನ ಮೈಸೂರಿಗೆ ನಗರಕ್ಕೆ ಪ್ರವೇಶದ ವೇಳೆ ಪ್ರವಾಸಿಗರು ಎಂಬ ಗುರುತಿನ ಸ್ಟಿಕರ್ ಹಾಕಬೇಕು. ಆ ಸ್ಟಿಕರ್ ನೋಡಿ ಎಲ್ಲರೂ ಅವರು ಪ್ರವಾಸಿಗರು ಎಂದು ಗುರುತಿಸಲು ಸಾಧ್ಯವಾಗುತ್ತದೆ. ಇದರಿಂದ ನಗರಕ್ಕೆ ಯಾರು ಬರುತ್ತಾರೆ ?ಎನ್ನುವುದು ತಿಳಿಯುತ್ತದೆ. ಪ್ರವಾಸಿಸ್ನೇಹಿ ವ್ಯವಸ್ಥೆ ಮಾಡಿದಂತಾಗುತ್ತದೆ. ಈ ಸಂಬಂಧ ಆಯುಕ್ತರು ಪರಿಶೀಲನೆ ಮಾಡಬೇಕು ಎಂದರು.

ಜತೆಗೆ ಮೈಸೂರು ಪೊಲೀಸರಿಗೂ ಈ ಸಂಬಂಧ ವಿಶೇಷ ತರಬೇತಿ ನೀಡಬೇಕು. ಪ್ರವಾಸಿಗರ ಜತೆ ಹೇಗೆ ನಡೆದುಕೊಳ್ಳಬೇಕು? ಹೇಗೆ ವ್ಯವಸರಿಸಬೇಕು? ಎಂದು ತರಬೇತಿ ನೀಡಬೇಕು ಎಂದರು. ಬೆಂಗಳೂರಿನಲ್ಲಿ ಟ್ರಾಫಿಕ್ ಸಂಬಂಧಿಸಿದ ದಂಡದ ಶೇ.50 ರಷ್ಟು ಹಣ ಸರ್ಕಾರಕ್ಕೆ ಹೊದರೆ ಉಳಿದ ಹಣ ಇಲಾಖೆಗೆ ನೀಡಲಾಗುತ್ತಿದೆ. ಅದೇ ವ್ಯವಸ್ಥೆಯನ್ನು ಮೈಸೂರಿನಲ್ಲೂ ಜಾರಿಗೆ ತರುವ ಸಂಬಂಧ ಪರಿಶೀಲಿಸುತ್ತೇನೆ. ಈ ಸಂಬಂಧ ಶಾಸಕ ತನ್ವೀರ್ ಸೇಠ್ ಮನವಿ ಮಾಡಿದ್ದಾರೆ ಎಂದರು. ಕುವೆಂಪು ನಗರದಲ್ಲಿ ಮತ್ತೊಂದು ಸಂಚಾರ ಪೊಲೀಸ್ ಠಾಣೆ ನಿರ್ಮಾಣ ಸಂಬಂಧ ಆಯುಕ್ತರು ಪರಿಶೀಲನೆ ಮಾಡಿ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸೂಚಿಸಿದರು. ಜತೆಗೆ ಪೊಲೀಸ್ ಠಾಣೆಗಳ ಡಿ.ಲಿಮಿಟೇಷನ್ ಸಂಬಂಧ ಚರ್ಚೆ ಮಾಡಲಾಗುತ್ತದೆ. ಸದ್ಯ ಮೈಸೂರಿನಲ್ಲಿ 380 ಕ್ಯಾಮರಾ ಮಾತ್ರ ಇದೆ. ಇದು ಸಾಲುವುದಿಲ್ಲ. 2 ಸಾವಿರ ಕ್ಯಾಮರಾ ಅಳವಡಿಸಬೇಕು. ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲ ಮಾರ್ಗದಲ್ಲೂ ಕ್ಯಾಮರಾ ಬೇಕು. ಬೆಂಗಳೂರಿನಲ್ಲಿ ಸದ್ಯ 10,000 ಕ್ಯಾಮರಾ ಇದೆ. ಇಡೀ ಬೆಂಗಳೂರನ್ನು ಎಐ ಕ್ಯಾಮರಾದಲ್ಲಿ ನೋಡಬಹುದಾಗಿದೆ. ಮೈಸೂರಿನಲ್ಲಿ ಸಹ ವೈಜ್ಞಾನಿಕವಾಗಿ ಕೆಲಸ ಮಾಡಬೇಕಿದೆ. ಇಲ್ಲಿಗೆ ಹೆಚ್ಚು ಪ್ರವಾಸಿಗರು ಬರುವ ಕಾರಣ ಹೆಚ್ಚು ಕ್ಯಾಮರಾ, ಮಾಹಿತಿ ಕೇಂದ್ರ, ಪ್ರವಾಸಿಗರ ಸ್ನೇಹಿ ವ್ಯವಸ್ಥೆ ಜಾರಿ ಮಾಡಬೇಕಿದೆ ಎಂದರು. ಮೈಸೂರಿನಲ್ಲಿ ವಿಶ್ವಕ್ಕೆ ತೋರಿರುವ ಇತಿಹಾಸ ಜೀವಂತವಾಗಿ ಉಳಿದಿದೆ. ನಾನು ಚಿಕ್ಕವನಾಗಿದ್ದಾಗ ನೋಡಿದ ಮೈಸೂರು ಈಗಲೂ ಹಾಗೇ ಇದೆ. ಮೈಸೂರು ತನ್ನ ಇತಿಹಾಸದ ಜತೆಯಲ್ಲಿಯೇ ಬೆಳೆದಿದೆ. ದೇಶದಲ್ಲೇ ನಂ.1 ಸ್ವಚ್ಛ ನಗರಿಯಾಗಿದೆ. ಇಲ್ಲಿಗೆ ಹೆಚ್ಚು ಪ್ರವಾಸಿಗರು ಬರುವ ಕಾರಣ ಮತ್ತಷ್ಟು ಸ್ವಚ್ಛತೆ ಕಾಪಾಡಿಕೊಳ್ಳಬೇಕಿದೆ. ಪ್ರವಾಸಿಗರಿಗೆ ಎಲ್ಲ ರೀತಿಯ ಆತಿಥ್ಯ ವಹಿಸಬೇಕಿದೆ. ಪೊಲೀಸ್, ಸಾರ್ವಜನಿಕರು ಎಲ್ಲರೂ ಪ್ರವಾಸಿಗರನ್ನು ಚೆನ್ನಾಗಿ ಕಾಣಬೇಕಿದೆ ಎಂದು ಮನವಿ ಮಾಡಿದರು.

ಕಳೆದ 10–15 ವರ್ಷಗಳಲ್ಲಿ ನಮ್ಮ ಪೊಲೀಸ್ ಇಲಾಖೆಯಲ್ಲಿ ಅನೇಕ ಬದಲಾವಣೆ ನಡೆದಿದೆ. ನಾನು ಮೊದಲ ಬಾರಿ ಗೃಹ ಸಚಿವ ಆಗಿದ್ದಾಗ ನಾನಾ ಬದಲಾವಣೆ ಮಾಡಿದ್ದೆ. ಆ ವೇಳೆ ನಮ್ಮ ಅಧಿಕಾರಿಗಳ ನಿಯೋಗ ಜರ್ಮನಿಗೆ ಹೋಗಿದ್ದವು. ಅಲ್ಲಿನ ಪೊಲೀಸರು ಬಹಳ ಜನಸ್ನೇಹಿಯಾಗಿದ್ದರು. ಪ್ರವಾಸಿಗರನ್ನು ಬಹಳ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಎಲ್ಲ ರೀತಿಯ ಮಾರ್ಗದರ್ಶನ ಮಾಡುತ್ತಿದ್ದರು. ಅವರ ವ್ಯವಸ್ಥೆ ನೋಡಿ ಖುಷಿಯಾಗಿತ್ತು. ಹಾಗಾಗಿ ನಮ್ಮಲ್ಲೂ ಅಂತಹ ವ್ಯವಸ್ಥೆ ಇರಬೇಕು ಎಂದು 'ಜನಸ್ನೇಹಿ ಪೊಲೀಸ್' ಜಾರಿ ಮಾಡಿದ್ದೇವೆ. ಇದೇ ಕಾರಣಕ್ಕೆ ಪ್ರತಿ ಠಾಣೆಗೆ 1 ಲಕ್ಷ ರೂ. ನೀಡುತ್ತಿದ್ದೇವೆ. ಠಾಣೆಗೆ ಬರುವ ಸಾರ್ವಜನಿಕರನ್ನು ಚೆನ್ನಾಗಿ ಉಪಚಾರ ಮಾಡಲಿ ಎಂದು ಹಣ ನೀಡಲಾಗುತ್ತಿತ್ತು ಎಂದರು.

ಜನರು ತನ್ನ ಕಷ್ಟಗಳಿಗೆ ಪರಿಹಾರ ಕೇಳಲು ದೇವಸ್ಥಾನಗಳಿಗೆ ಹೋಗುತ್ತಾರೆ. ಅದೇ ರೀತಿ ಪೊಲೀಸರಿಂದ ಸಹಾಯ ಕೇಳಲು ಪೊಲೀಸ್ ಠಾಣೆಗಳಿಗೆ ಬರುತ್ತಾರೆ. ಹೀಗೆ ಬರುವ ಸಾರ್ವಜನಿಕರನ್ನು ಪೊಲೀಸರು ಅಪರಾಧಿಗಳ ರೀತಿ ನೋಡಬಾರದು. ಪೊಲೀಸ್ ಠಾಣೆಗಳು ಜನಸ್ನೇಹಿ ಆಗಿರಬೇಕು. ಕಳ್ಳರ ಜತೆ ಫ್ರೆಂಡ್ಲಿ ಆಗಬಾರದು. ದೂರು ನೀಡಲು ಬರುವರಿಗೆ ಗೌರವ ನೀಡಬೇಕು ಎಂದು ಸೂಚನೆ ನೀಡಿದರು. ಇಂಡಿಯನ್ ಜಸ್ಟಿಸ್ ರಿಪೋರ್ಟ್ ಪ್ರಕಾರ ದೇಶದ 120 ನಗರಗಳಲ್ಲಿ ಸೇಫ್ ಸಿಟಿಯಾಗಿ ಬೆಂಗಳೂರು 1ನೇ ಸ್ಥಾನವನ್ನು ಪಡೆದಿದೆ. 5 ಲಕ್ಷ ಜನಸಂಖ್ಯೆ ಇರುವ ಉದಯಗಿರಿಯ ಪೊಲೀಸ್ ಠಾಣೆಯನ್ನು 2 ವಿಭಾಗ ಮಾಡಿ ಹೊಸ ಪೊಲೀಸ್ ಠಾಣೆ ಮಾಡಲು ಕ್ರಮ ವಹಿಸಲಾಗುತ್ತಿದೆ. ಈಗಾಗಲೇ ಪಿ ಕ್ಯಾಪ್ ಅನ್ನು ಪೊಲೀಸ್ ಕಾನ್ಸ್ಟೇಬಲ್‌ಗಳಿಗೆ ಹೊಸ ರೀತಿಯ ಶೈಲಿಯಲ್ಲಿ ನೀಡಿದ್ದೇವೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಎಚ್.ಡಿ.ಕೋಟೆ ತಾಲೂಕಿಗೂ ಹೆಚ್ಚಿನ ಪೊಲೀಸ್ ಠಾಣೆಗಳನ್ನು ನಿರ್ಮಿಸಿಕೊಡಬೇಕು. ಹೆಣ್ಣು ಮಕ್ಕಳು ಇಂದು ಬೆಂಗಳೂರಿನಲ್ಲಿ ಧೈರ್ಯವಾಗಿ ಓಡಾಡುತ್ತಿದ್ದಾರೆ ಎಂದರೆ ಗೃಹ ಇಲಾಖೆ ಕಾರಣ. ವಿವಿಧ ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್‌ನ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು ಎಂದರು. ವಿಧಾನ ಪರಿಷತ್ತು ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿದರು. ಮೈಸೂರು ಪೇಯಿಂಟ್ಸ್ ಆ?ಯಂಡ್ ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಎಚ್.ಡಿ.ಗಣೇಶ್, ದಕ್ಷಿಣವಲಯ ಮಹಾನಿರೀಕ್ಷ ಎಂ.ಬಿ.ಡಾ.ಬೋರಲಿಂಗಯ್ಯ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಇತರರಿದ್ದರು.

### ಕುವೆಂಪುನಗರಕ್ಕೆ ಸಂಚಾರಿ ಪೊಲೀಸ್ ಠಾಣೆಗೆ ಬೇಡಿಕೆ

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರಿನ ಪೊಲೀಸ್ ಮತ್ತು ಬ್ಯಾಂಡ್‌ಗೆ ತನ್ನದೇ ಆದ ಗೌರವ ಮತ್ತು ಘನತೆ ಇದೆ. ಮೈಸೂರು ನಗರಕ್ಕೆ ಹಲವಾರು ದಕ್ಷ ಪೊಲೀಸರು ಅಧಿಕಾರಿಗಳು ತಮ್ಮ ಕೊಡುಗೆ ನೀಡಿದ್ದಾರೆ. ಮೈಸೂರಿನ ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯ ಲಕ್ಷ್ಮೀಪುರಂ ಠಾಣೆ ವ್ಯಾಪ್ತಿಯ ವಿಸ್ತೀರ್ಣ ಬಹಳ ದೊಡ್ಡದಿರುವುದರಿಂದ ಕುವೆಂಪು ನಗರ ಭಾಗಕ್ಕೆ ಒಂದು ಸಂಚಾರ ಪೊಲೀಸ್ ಠಾಣೆಯನ್ನು ನಿರ್ಮಿಸಿ ಕೊಡಬೇಕು. ಇಂದು ಮೈಸೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವುದರಿಂದ ಸಂಚಾರ ವ್ಯವಸ್ಥೆ ಸುಗಮಗೊಳಿಸಬೇಕು ಎಂದರು.

> ಮೈಸೂರಿನ ಸುತ್ತಮುತ್ತ ಪರಿಸರ ವ್ಯವಸ್ಥೆ ಮತ್ತು ಅರಣ್ಯದಿಂದ ಆಕರ್ಷಣೆಯವಾಗಿ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಿದ್ದಾರೆ. ಪ್ರವಾಸೋದ್ಯಮ ಇನ್ನು ಬಹಳಷ್ಟು ಅಭಿವೃದ್ಧಿ ಹೊಂದಬೇಕಾಗಿದೆ. ಇಂದು ವ್ಯಸನ ಮುಕ್ತ ಜತೆಗೆ ಅಪರಾಧ ಮುಕ್ತ ಸಮಾಜ ನಿರ್ಮಾಣ ಮಾಡಬೇಕಾಗಿದೆ. ಪೊಲೀಸ್ ಇಲಾಖೆ ವತಿಯಿಂದ ಮೈಸೂರಿನ ಉದಯಗಿರಿಗೆ ಹೊಸದೊಂದು ಪೊಲೀಸ್ ಠಾಣೆಯನ್ನು ನೀಡಲಾಗಿದೆ. ಸಮಾಜದಲ್ಲಿ ಜನ ಕಾನೂನಿಗೆ ಪಾಲನೆ ಮಾಡುತ್ತಿರುವಾಗ ಸಾರ್ವಜನಿಕರಿಗೆ ನೀವು ಸಹಾಯ ಮಾಡಬೇಕು.
>
> ▸▸ ತನ್ವೀರ್ ಸೇಠ್ ಶಾಸಕ

ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಕಾರ್ಯಕ್ರಮ

# ಹಳೆಯ ವಿದ್ಯಾರ್ಥಿಗಳಿಂದ ಗುರುಗಳಿಗೆ ಹೃದಯಸ್ಪರ್ಶಿ ಗೌರವ

ಚಾಮರಾಜನಗರ: ಶಿಕ್ಷಕರ ಬೋಧನೆಯೇ ತಮ್ಮ ಬದುಕಿಗೆ ದಿಕ್ಕು ತೋರಿತು ಎಂಬ ಭಾವನೆಗೆ ಸಾಕ್ಷಿಯಾಗಿ, ಸುಮಾರು 17 ವರ್ಷಗಳ ಹಿಂದೆ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ್ದ ಹಳೆಯ ವಿದ್ಯಾರ್ಥಿಗಳು ತಮ್ಮ ವಿದ್ಯಾಗುರುಗಳಿಗೆ ವಿಶೇಷ ಗೌರವ ಸಲ್ಲಿಸಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಗೂಳಿಪುರದ ಶ್ರೀ ವಿ.ಮಹಾಂತ ದೇವರ ಸರ್ಕಾರಿ ಪ್ರೌಢಶಾಲೆಯ 2008?09ನೇ ಸಾಲಿನ ಎಸ್ಸೆಸ್ಸೆಲ್ಸಿ ಬ್ಯಾಚ್‌ನ ವಿದ್ಯಾರ್ಥಿಗಳು ಆಯೋಜಿಸಿದ್ದರು. ಗುರುಗಳಿಗೆ ಕೃತಜ್ಞತೆ ಸಲ್ಲಿಸುವ ಉದ್ದೇಶದಿಂದ ನಡೆದ ಗುರುವಂದನಾ ಕಾರ್ಯಕ್ರಮ ಎಲ್ಲರ ಮನಸೂರೆಗೊಂಡಿತು. ಇಂದು ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದ್ದನ್ನು ಹಳೆಯ ವಿದ್ಯಾರ್ಥಿಗಳು ಹಂಚಿಕೊಂಡರು. ಕೆಲವರು ತಮ್ಮ ವಿದ್ಯಾರ್ಥಿ ದಿನಗಳ ಅಜ್ಞಾನ ಅಥವಾ ಅಸಾವಧಾನ ನಡೆಗಳನ್ನು ನೆನಪಿಸಿಕೊಂಡು ಗುರುಗಳ ಬಳಿ ಕ್ಷಮೆ ಯಾಚಿಸಿದರು. ವಿವಿಧ ಕ್ಷೇತ್ರಗಳಲ್ಲಿ ಶಿಕ್ಷಕರಾಗಿ, ಸರ್ಕಾರಿ ನೌಕರರರಾಗಿ, ಉದ್ಯಮಿಗಳಾಗಿ, ಉಪನ್ಯಾಸಕರಾಗಿ ಹಾಗೂ ಖಾಸಗಿ ಕಂಪನಿಗಳ ಉನ್ನತ ಹುದ್ದೆಗಳಲ್ಲಿ ಸೇವೆ



ಸಲ್ಲಿಸುತ್ತಿರುವ ವಿದ್ಯಾರ್ಥಿಗಳು ಗುರುಗಳ ಮುಂದೆ ಮತ್ತೆ ಮಕ್ಕಳಂತಾಗಿದ್ದು ಭಾವುಕ ಕ್ಷಣಗಳಿಗೆ ಕಾರಣವಾಯಿತು.

ಮಕ್ಕಳ ಕೈಯಲ್ಲಿ ಮೊಬೈಲ್ ಅಲ್ಲ, ಪುಸ್ತಕ ಇರಲಿ:

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪುಸ್ತಕಗಳ ಪಾತ್ರ ಅತ್ಯಂತ ಮಹತ್ವದ್ದು ಪೋಷಕರು ಮಕ್ಕಳಿಗೆ ಮೊಬೈಲ್ ನೀಡುವುದಕ್ಕಿಂತ ಪುಸ್ತಕ ಕೊಡುವ ಮನಸ್ಥಿತಿ ಬೆಳೆಸಬೇಕು ಎಂದು ಉಪನ್ಯಾಸಕರಾದ ಅಂಕಶೆಟ್ಟಿ ಸಲಹೆ ನೀಡಿದರು.

ಮೊಬೈಲ್ ಮಕ್ಕಳ ಗಮನವನ್ನು ಚದುರಿಸುತ್ತದೆ. ಆದರೆ ಪುಸ್ತಕಗಳು ಚಿಂತನೆಗೆ ದಾರಿ ತೋರಿಸುತ್ತವೆ. ಪುಸ್ತಕ ಹಿಡಿದು ಓದುವ ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಜ್ಞಾನವೇ ನಿಜವಾದ ಶಕ್ತಿ, ಎಂದು ಹೇಳಿದರು.

ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರವನ್ನು ಉಲ್ಲೇಖಿಸಿದ ಅವರು, "ಅಸ್ತ್ರ ಹಿಡಿದವನನ್ನು ಸೋಲಿಸಬಹುದು, ಆದರೆ ಪುಸ್ತಕ ಹಿಡಿದವನನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಅಂಬೇಡ್ಕರ್ ಅವರ ಮಾತುಗಳು ಇಂದು ಇನ್ನಷ್ಟು ಅರ್ಥಪೂರ್ಣವಾಗಿವೆ. ಜ್ಞಾನವಂತನನ್ನು ಯಾವ ಶಕ್ತಿಯೂ ಮಣಿಸಲಾರದು ಎಂದು ಹೇಳಿದರು.

ಇಂದಿನ ತಂತ್ರಜ್ಞಾನ ಯುಗದಲ್ಲಿ ಮಕ್ಕಳನ್ನು ಪುಸ್ತಕಗಳಿಂದ ದೂರ ಮಾಡಲಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಿದ್ಯಾರ್ಥಿಗಳು ದಿನನಿತ್ಯ ಕನಿಷ್ಠ ಸ್ವಲ್ಪ ಸಮಯವನ್ನಾದರೂ ಓದಿಗೆ ಮೀಸಲಿಡಬೇಕು ಎಂದು ಸಲಹೆ ನೀಡಿದರು. ಪೋಷಕರು ಹಾಗೂ ಶಿಕ್ಷಕರು ಸೇರಿ ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸಿದರೆ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ಶಿಕ್ಷಕ ರೇವಣ್ಣಸ್ವಾಮಿ, ಅಂಕಯ್ಯ, ಜಾಯ್ಸ್ ಎಲ್. ಮೆನೇಜಸ್, ಹಿಂದಿ ಶಿಕ್ಷಕಿ ಎಸ್.ಮಲ್ಲಮ್ಮ, ದೈಹಿಕ ಶಿಕ್ಷಕ ಸುಂದರೇಶ್, ಸಹ ಶಿಕ್ಷಕರಾದ ನಾಗೇಶ್, ಮಹೇಶ್, ರುದ್ರಾಂಬಿಕೆ, ನಂಜುಂಡಸ್ವಾಮಿ, ಹಳೆಯ ವಿದ್ಯಾರ್ಥಿಗಳಾದ ಜಿ.ಕೆ.ಮಹೇಶ್, ಶರತ್, ಪ್ರಶಾಂತ್, ಜಿ.ಎಂ. ಮಹದೇವಸ್ವಾಮಿ ಹಾಗೂ ಇತರರು ಹಾಜರಿದ್ದರು.

> 17 ವರ್ಷಗಳ ನಂತರ ಮತ್ತೆ ನಮ್ಮ ಗುರುಗಳನ್ನು ಕಣ್ಣಾರೆ ಕಂಡಾಗ, ಕ್ಷಣಮಾತ್ರದಲ್ಲಿ ನಾವು ಮತ್ತೆ ಶಾಲಾ ಮಕ್ಕಳಾಗಿ ಬದಲಾದಂತೆ ಅನಿಸಿತು. ಪಾಠದ ಗಂಟೆ, ತರಗತಿಯ ಶಬ್ದ, ಶಿಕ್ಷಕರ ಸಲಹೆ ತಿದ್ದುವಿಕೆಗಳು ಎಲ್ಲವೂ ಕಣ್ಣಮುಂದೆ ಹಾದುಹೋಯಿತು. ಅಂದು ಕೆಲವೊಮ್ಮೆ ಅವರ ಮಾತುಗಳ ಕಠಿಣತೆ ಅರ್ಥವಾಗಿರಲಿಲ್ಲ, ಆದರೆ ಇಂದು ಬದುಕಿನ ಹಾದಿಯಲ್ಲಿ ನಿಂತಾಗ ಅದೇ ಮಾತುಗಳು ನಮ್ಮ ಶಕ್ತಿಯಾಗಿವೆ. ನಮ್ಮನ್ನು ರೂಪಿಸಿದ ಗುರುಗಳ ಮುಂದೆ ತಲೆಬಾಗುವ ಅವಕಾಶ ಸಿಕ್ಕಿದ್ದು ಜೀವನದ ಅತ್ಯಂತ ಸ್ಮರಣೀಯ ಕ್ಷಣ.
>
> ▸▸ ಎಸ್.ಆನಂದ್ ಹೆಚ್ ಮೂಕಹಳ್ಳಿ
> ಹಿರಿಯ ವಿದ್ಯಾರ್ಥಿ, ಚಾಮರಾಜನಗರ.

# ಸಂಕ್ಷಿಪ್ತ ಸುದ್ದಿ

## ಮಕ್ಕಳ ಪುಸ್ತಕ ಪ್ರಶಸ್ತಿಗಾಗಿ ಪುಸ್ತಕಗಳ ಆಹ್ವಾನ

**ರಾಮನಗರ:** ಕರ್ನಾಟಕ ಬಾಲ ವಿಕಾಸ ಅಕಾಡೆಮಿಯು 2024-25ನೇ ಸಾಲಿನ (ಅಂದರೆ ಜನವರಿ- 2024 ರಿಂದ ಡಿಸೆಂಬರ್-2024) ಹಾಗೂ 2025ನೇ (ಅಂದರೆ ಜನವರಿ -2025 ರಿಂದ ಡಿಸೆಂಬರ್-2025) ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿ ನೀಡಲು ಮಕ್ಕಳ ಸಾಹಿತ್ಯದ ಕೃತಿಗಳನ್ನು ಆಹ್ವಾನಿಸಲಾಗಿದೆ.

2024ನೇ ಸಾಲಿನ ಹಾಗೂ 2025ನೇ ಸಾಲಿನ ಅವಧಿಯಲ್ಲಿ ಅಂದರೆ ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದ ಅವಧಿಯಲ್ಲಿ ಪ್ರಕಟಗೊಂಡ ಸ್ವರಚಿತ ಕವನ ಸಂಕಲನ, ಕಥಾಸಂಕಲನ ನಾಟಕ (ಪಠ್ಯಧಾರಿತ ಬಿಟ್ಟು), ಮಕ್ಕಳ ಕಾದಂಬರಿ ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ) ಮತ್ತು ಮಕ್ಕಳ ಸಾಹಿತ್ಯ ವಿಮರ್ಶಾ ಕೃತಿ ಹೀಗೆ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿದೆ.

ಈ ಕ್ಷೇತ್ರಗಳಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಯಾವ ಸಾಲಿಗೆ ಪರಿಗಣಿಸಬೇಕೆಂಬುದರ ಬಗ್ಗೆ ಸ್ಪಷ್ಟವಾಗಿ ನಮೂದಿಸಲು ತಿಳಿಸಿದೆ ಹಾಗೂ ಪ್ರಶಸ್ತಿಗಾಗಿ ಪರಿಗಣಿಸಲು, ಮೌಲ್ಯಮಾಪನಗೊಳಿಸಲು ಪ್ರತಿಯೊಂದು ಕೃತಿಯ 4 ಪ್ರತಿಗಳನ್ನು ಹಾಗೂ ಸ್ವವಿವರಗಳನ್ನು ಒಳಗೊಂಡ ಮನವಿಯೊಂದಿಗೆ ಫೆ.20 ರೊಳಗೆ ಅಕಾಡೆಮಿಯ ಕೇಂದ್ರ ಕಚೇರಿ ವಿಳಾಸಕ್ಕೆ ಅಂಚೆ ಮೂಲಕ ತಲುಪುವಂತೆ ಕಳುಹಿಸಬೇಕು. ನಂತರ ಬಂದ ಅರ್ಜಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.

ಪ್ರಶಸ್ತಿಯ ಮಾನದಂಡಗಳನ್ನು ಕಚೇರಿಯ ವೆಬ್‌ಸೈಟ್ ಲಿಂಕ್ https://balavikasaacademy.karnataka.gov.in/ ನಲ್ಲಿ ವೀಕ್ಷಿಸಬಹುದು.

ಕೇಂದ್ರ ಕಚೇರಿ ವಿಳಾಸ: ಯೋಜನಾಧಿಕಾರಿಗಳು, ಚಂದ್ರಿಕಾ ಲೇಔಟ್ ಹಿಂಭಾಗ, ಕೆ.ಎಚ್.ಬಿ. ಕಾಲೋನಿ, ಲಕಮನಹಳ್ಳಿ ಧಾರವಾಡ-580004, ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ: 0836-2465490, 8050392209, 7204396275, 9448981944 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ರಾಮನಗರ:** ಕರ್ನಾಟಕ ಬಾಲ ವಿಕಾಸ ಅಕಾಡೆಮಿಯಿಂದ 2024-25 ಹಾಗೂ 2025-26ನೇ ಸಾಲಿನಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದ 18 ವರ್ಷದೊಳಗಿನ ಮಕ್ಕಳಿಗೆ ಬಾಲ ಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮಕ್ಕಳು ಕ್ರೀಡೆ, ಸಂಗೀತ, ನೃತ್ಯ, ಬಹುಮುಖ ಪ್ರತಿಭೆ ನಟನೆ, ಚಿತ್ರಕಲೆ ಹಾಗೂ ವಿಜ್ಞಾನ ಮತ್ತು ಸಂಶೋಧನೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿ ಪ್ರಶಸ್ತಿ ಪಡೆದ ಪುರಸ್ಕೃತ ಮಗುವಾಗಿರಬೇಕು. ಇಂತಹ ಮಕ್ಕಳು ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ತಮ್ಮ ಸ್ವಯಂ ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವ ವಿವರಗಳನ್ನೊಳಗೊಂಡ ಮನವಿಯೊಂದಿಗೆ ಅರ್ಜಿಯನ್ನು ಫೆ. 20ರೊಳಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.

ಅರ್ಜಿಯನ್ನು ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯತ್, ಬೆಂಗಳೂರು ದಕ್ಷಿಣ ಜಿಲ್ಲೆ. ಈ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಧಾರವಾಡ ಇಲ್ಲಿಗೆ ಸಲ್ಲಿಸಬೇಕು.

ಕೇಂದ್ರ ಕಚೇರಿ ವಿಳಾಸ: ಯೋಜನಾಧಿಕಾರಿಗಳು, ಚಂದ್ರಿಕಾ ಲೇಔಟ್ ಹಿಂಭಾಗ, ಕೆ.ಎಚ್.ಬಿ. ಕಾಲೋನಿ, ಲಕಮನಹಳ್ಳಿ, ಧಾರವಾಡ-580004, ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ: 0836-2465490, 8050392209, 7204396275, 9448981944 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೂದನೂರು ಉತ್ಸವ: ಹೆಲಿಟೂರಿಸಂ ಸಂಭ್ರಮ

# ಸಾರ್ವಜನಿಕರಿಗೆ ತೊಂದರೆಯಾಗದಂತೆ ಸುರಕ್ಷತಾ ಕ್ರಮಗಳನ್ನು ವಹಿಸಿ: ಡಾ. ಕುಮಾರ



**ಮಂಡ್ಯ:** ಬೂದನೂರು ಉತ್ಸವ ಅಂಗವಾಗಿ ಫೆಬ್ರವರಿ 20 ರಿಂದ 22 ರವರೆಗೆ ಹೆಲಿಟೂರಿಸಂ ಆಯೋಜನೆ ಮಾಡಲಾಗುತ್ತಿದ್ದು

ಹೆಲಿಪ್ಯಾಡ್ ನಿಲ್ದಾಣದ ಸ್ಥಳದಲ್ಲಿ ಎಲ್ಲಾ ರೀತಿಯ ಸುರಕ್ಷತ ಕ್ರಮಗಳನ್ನು ಅನುಸರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ಹೇಳಿದರು.

-ಬೂದನೂರು ಉತ್ಸವ ಅಂಗವಾಗಿ ಜಿಲ್ಲೆಯಲ್ಲಿ 20, 21,22 ರಂದು ಹೆಲಿ ಟೂರಿಸಂ ಅನ್ನು ಆಯೋಜಿಸಲಾಗಿದ್ದು ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯಗಳ ವ್ಯವಸ್ಥೆಯನ್ನು ಕಲ್ಪಿಸಬೇಕು. ಹೆಲಿ ಟೂರಿಸಂ ಮೂರು ದಿನ ಇರುವುದರಿಂದ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು ಮತ್ತು ಲೈಟಿಂಗ್ ವ್ಯವಸ್ಥೆ ಒದಗಿಸಲು ಅಗತ್ಯ ಕ್ರಮಗಳನ್ನು ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಸಾರ್ವಜನಿಕರಿಗೆಯಾವುದೇತೊಂದರೆಯಾಗದಂತೆ ಸೂಕ್ತ ಕ್ರಮಗಳನ್ನು ಕ?ಗೊಂಡು ಪ್ರಥಮ ಚಿಕಿತ್ಸೆಗೆ ಬೇಕಾಗುವ ಔಷಧಿಗಳು ಮತ್ತು ನುರಿತ ವೈದ್ಯರು ಹಾಗೂ ಅಧಿಕಾರಿಗಳು ನಿಗದಿತ ಸ್ಥಳದಲ್ಲಿ ನೇಮಿಸಬೇಕು ಹಾಗೂ ಆಂಬುಲೆನ್ಸ್ ವ್ಯವಸ್ಥೆ ಇರಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ಯಾವುದೇ ಅವಗಡ ಉಂಟಾಗದಂತೆ ಅಗ್ನಿಶಾಮಕ ದಳದವರು ನೋಡಿಕೊಳ್ಳಬೇಕು ಹಾಗೂ ಅಗ್ನಿಶಾಮಕ ದಳದ ವಾಹನ ಸ್ಥಳದಲ್ಲಿರಬೇಕು ಎಂದು ಹೇಳಿದರು.

ಟಿಕೆಟ್ ಕೌಂಟರ್ ಸ್ಥಾಪಿಸಿ ಹೆಲಿಪ್ಯಾಡ್ ನ ನಿಯಮದ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಸಾರ್ವಜನಿಕರಿಗೆ ಹೆಲಿಪ್ಯಾಡ್ ಮೂಲಕ ಬೂದನೂರು ಉತ್ಸವವನ್ನು ಕಣ್ತುಂಬಿಕೊಳ್ಳಲು ಒಬ್ಬರಿಗೆ 3,800 ರೂಪಾಯಿಗಳನ್ನು ಪಾವತಿಸಬೇಕಾಗಿರುತ್ತದೆ. ಒಬ್ಬರಿಗೆ 7 ನಿಮಿಷಗಳ ಕಾಲಾವಕಾಶ ಇದ್ದು 5 ವರ್ಷದೊಳಗಿನ ಮಕ್ಕಳಿಗೆ ಪ್ರವೇಶವಿರುವುದಿಲ್ಲ ಎಂದು ಸೂಚಿಸಿದರು

ಈ ಸಂದರ್ಭದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ.ಜೆ.ಶೋಭಾರಾಣಿ ಮಾತನಾಡಿ ಸಾರ್ವಜನಿಕರು ಸರದಿ ಸಾಲಿನಲ್ಲಿ ಟಿಕೆಟ್ ಗಳನ್ನು ಪಡೆಯಬೇಕು. ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ವಾಟರ್ ಬಾಟಲ್ ಫೋನ್ ಗಳನ್ನು ನಿಷೇಧಿಸಲಾಗಿರುತ್ತದೆ. ಸಾರ್ವಜನಿಕರಿಗೆ ಹೆಲಿಪ್ಯಾಡ್ ಗೆ ಹೋಗಲು ಇರುವ ಮಾರ್ಗದಲ್ಲಿ ಹೋಗುವಂತೆ ಸೂಚಿಸಬೇಕು.

ಸಾರ್ವಜನಿಕರು ಹೆಲಿಪ್ಯಾಡ್ ಮೂಲಕ ಪ್ರಯಾಣಿಸಲು ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು. ಎಂದು ಹೇಳಿದರು.

ಉಪವಿಭಾಗಾಧಿಕಾರಿ ಶಿವಮೂರ್ತಿ, ಅಗ್ನಿಶಾಮಕ ದಳದ ಅಧೀಕ್ಷಕರು ರಾಘವೇಂದ್ರ, ಮಿಮ್ಸ್ ನ ನಿರ್ದೇಶಕರಾದ ನರಸಿಂಹಮೂರ್ತಿ, ಡಾ. ಜವರೇಗೌಡ, ಡಾ. ವೀರಭದ್ರಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

## ಹಾಪ್ ಕಾಮ್ಸ್ ನ ನೂತನ ನಿರ್ದೇಶಕರಾಗಿ ಮಿರ್ಲೆ ಸಂಜಯ್ ಆಯ್ಕೆ

**ಕೆ.ಆರ್.ನಗರ:** ಪ್ರಾಮಾಣಿಕವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಮತದಾರರ ಋಣವನ್ನು ತೀರಿಸಲಾಗುವುದು ಎಂದು ಜಿಲ್ಲಾ ಹಾಪ್ ಕಾಮ್ಸ್ ನ ನೂತನ ನಿರ್ದೇಶಕ ಮಿರ್ಲೆ ಸಂಜಯ್ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಕಾಳಮ್ಮನ ಕೊಪ್ಪಲು ಗ್ರಾಮದಲ್ಲಿ ಗ್ರಾಮಸ್ಥರುಗಳಿಂದ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದರು.

ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಾನು ಇದೇ ಮೊದಲ ಬಾರಿಗೆ ಸ್ಪರ್ಧಿಸಿದ್ದೇನು. ಆದರೂ ಕ್ಷೇತ್ರದ ಎಲ್ಲಾ ಮತದಾರರು ನಮ್ಮ ಮೇಲೆ ಪ್ರೀತಿ, ವಿಶ್ವಾಸವಿಟ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿ ನನ್ನನ್ನು ಬೆಂಬಲಿಸುವ ಮೂಲಕ ನಾನು ನಿರ್ದೇಶಕನಾಗಿ ಆಯ್ಕೆಯಾಗಲು ಕಾರಣರಾಗಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ನಮ್ಮ ಆಡಳಿತದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕೆಲಸವನ್ನು ಮಾಡುವ ಮೂಲಕ ಕ್ಷೇತ್ರದ ಮತದಾರರ ಋಣವನ್ನು ತೀರಿಸಲಾಗುವುದು. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಘದ ಕಾರ್ಯಕ್ರಮಗಳನ್ನು ರೂಪಿಸಿ ಅದರ ಮೂಲಕ ಸದಸ್ಯರುಗಳಿಗೆ ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಕಲ್ಪಿಸಿ ಕೊಡುವಂತಹ ಕೆಲಸವನ್ನು ಮಾಡಲಾಗುವುದು ಎಂದ ಸಂಜಯ್ ಅವರು ನನ್ನ ಗೆಲುವಿಗೆ ಸಹಕರಿಸಿದ ಕ್ಷೇತ್ರದ ಸರ್ವ ಮತದಾರರು, ಮುಖಂಡರುಗಳು, ಸ್ನೇಹಿತರುಗಳು, ಸೇರಿದಂತೆ ಸರ್ವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಮುಖಂಡರುಗಳಾದ ಜೆಸಿಬಿ ಬಲರಾಮ್, ಸುಧಾಕರ್, ಕೆ.ಸಿ.ಸುಬ್ಬೆಗೌಡ, ನಾಗರಾಜು, ರಾಜೇಗೌಡ, ರಾಜು, ಕಾಳೇಗೌಡ, ಗೌ.ಹರೀಶ್, ರಂಗೇಗೌಡ, ಮಂಜುನಾಥ್, ಯೋಗೇಶ್, ನಾಗೇಂದ್ರ, ಸುಂದರ, ಅರುಣ್, ಹರೀಶ್, ಚಂದ್ರ, ಮಹೇಶ್, ತಾ.ಪಂ. ಮಾಜಿ ಅಧ್ಯಕ್ಷ ಟಿ.ಎಸ್. ರವಿ, ನಾಟನಹಳ್ಳಿ ಸಂತೋಷ್, ಮಿರ್ಲೆ ಗ್ರಾಮದ ಬಾಲು, ಮೋಹನ, ಸತೀಶ್, ರತನ್, ಗಣೇಶ್ ಸೇರಿದಂತೆ ಹಲವರು ಇದ್ದರು.



# ಸರ್ವ ಸದಸ್ಯರ ಸಾಮಾನ್ಯ ಸಭೆ

**ಮಂಡ್ಯ:** ದಿ ಮೈಸೂರು ಷುಗರ್ ಕಂಪನಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಫೆ.18ರಂದು ಮೈಶುಗರ್ ಕಾರ್ಖಾನೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014-15ನೇ ಸಾಲಿನಲ್ಲಿ ಅಂದಿನ ಅಧ್ಯಕ್ಷ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಆಯೋಜಿಸಿದ್ದರು. ಅಂದಿನಿಂದ ಹತ್ತು ವರ್ಷಗಳು ಯಾವುದೇ ಸಭೆ ಮಾಡಿರಲಿಲ್ಲ. ಇದೀಗ 2015-16ನೇ ಸಾಲಿನ ಸಭೆಯನ್ನು ಅಂದು ಬೆಳಿಗ್ಗೆ 10 ಗಂಟೆಗೆ, 2016-17ನೇ ಸಾಲಿನ ಸಭೆಯನ್ನು ಮಧ್ಯಾಹ್ನ 12ಗಂಟೆಗೆ ಆಯೋಜಿಸಲಾಗಿದೆ ಎಂದರು.

ಮೈಶುಗರ್ ಕಂಪನಿಯ 82 ಹಾಗೂ 83ನೇ ಸಾಲಿನ ವಾರ್ಷಿಕ ವರದಿಯನ್ನು ವಿತರಣೆ ಮಾಡಲಾಗುತ್ತಿದೆ. ಆಡಿಟ್ ವರದಿಯನ್ನು ಸದಸ್ಯರು ಕಂಪನಿಯಿಂದ ಪಡೆಯಬಹುದಾಗಿರುತ್ತದೆ. ಸದಸ್ಯರು ಯಾವುದೇ ಪ್ರಶ್ನೆ ಕೇಳುವುದಿದ್ದರೆ ಫೆ.12ನೇ ತಾರೀಖಿನೊಳಗೆ ಲಿಖಿತ ರೂಪದಲ್ಲಿ ನೀಡುವಂತೆ ಮನವಿ ಮಾಡಿದರು.

ಮೈಶುಗರ್ ಕಂಪನಿಗೆ ಸಂಬಂಧಿಸಿದಂತೆ 2017ರಿಂದ 2025ರವರೆಗಿನ ವಾರ್ಷಿಕ ವರದಿಯೂ ಸಿದ್ದವಾಗಿದೆ. ಅದನ್ನೂ ಸಂಪೂರ್ಣವಾಗಿ ಐಟಿ ಫೈಲ್ ಮಾಡಿಸಿ ಅಂತಿಮ ಮಾಡಲಾಗುವುದು. ಈ ಮೂಲಕ ಕಂಪನಿಯ ಶೇರುದಾರರಿಗೆ ಮಾಹಿತಿ ಒದಗಿಸಲಾಗುವುದು. ಕಳೆದ ಎರಡು ವರ್ಷಗಳಿಂದ ಕಾರ್ಖಾನೆಯನ್ನು ಸಬಲೀಕರಣಗೊಳಿಸು 300 ಕೋಟಿ ಗೂ ಹೆಚ್ಚು ಆರ್ಥಿಕ ಶಕ್ತಿ ತುಂಬಿರುವ ಸಲುವಾಗಿ ಸಭೆಯಲ್ಲಿ ಮಾಹಿತಿ ನೀಡಲಾಗುವುದು. ಸಭೆಗೆ ಕಾರ್ಖಾನೆಯ ಸಂಸ್ಥಾಪಕ ಕೋಲ್ಮನ್ ಅವರ ಕುಟುಂಬದಿಂದ ಯಾರನ್ನಾದರೂ ಓರ್ವ ಸದಸ್ಯರನ್ನು ಕರೆತರುವ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಸರಕಾರದಿಂದ 113.5 ಕೋಟಿ ಸರಕಾರದಿಂದ ಆರ್ಥಿಕ ಶಕ್ತಿ ನೀಡಲಾಗಿದೆ. ಸರಕಾರೇತರವಾಗಿ 2024ರ ಜುಲೈನಲ್ಲಿ ಐಟಿ ಮುಕ್ತವಾಗಿದ್ದೇವೆ. 127 ಕೋಟಿ ಜಿಓಗೆ ಸರಕಾರಿ ಆದೇಶವಾಗಿದೆ. 300 ಕೋಟಿ ಬೆಲೆ ಬಾಳುವ 27 ಎಕರೆ ಭೂಮಿಯ ವಶಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ಹಂಗಾಮಿಗೆ 5.70 ಲಕ್ಷ ಟನ್ ಒಪ್ಪಿಗೆ ಮಾಡಿಕೊಂಡಿದ್ದು, ಎಲ್ಲವನ್ನು ನುರಿಸುವ ಪ್ರಯತ್ನ ಮಾಡಲಾಗುವುದು ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೌಡ್ಲೆ ಚನ್ನಪ್ಪ, ಸ್ವಾಮೀಗೌಡ, ಸುಂಡಹಳ್ಳಿ ಮಂಜುನಾಥ ಇತರರಿದ್ದರು.




# ಅಂಬೇಡ್ಕರ್ ವ್ಯಕ್ತಿತ್ವ ರೂಪಗೊಳ್ಳುವಲ್ಲಿ ರಮಾಬಾಯಿ ಪಾತ್ರ ಅಪಾರ: ಗುರುಮೂರ್ತಿ



**ಮಂಡ್ಯ:** ಅಂಬೇಡ್ಕರ್ ಅವರ ವ್ಯಕ್ತಿತ್ವ ರೂಪಗೊಳ್ಳುವಲ್ಲಿ ರಮಾಬಾಯಿ ಅವರ ಪಾತ್ರ ಅಪಾರವಾಗಿದೆ ಎಂದು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ನಿವೃತ್ತ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗುರುಮೂರ್ತಿ ಶ್ಲಾಘಿಸಿದರು.

ನಗರದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ನಿವೃತ್ತ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಮಾಬಾಯಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ರಮಾಬಾಯಿ ಅವರು ಡಾ.ಬಿ.ಆರ್.ಬಿ.ಆರ್.ಅಂಬೇಡ್ಕರ್ ಅವರ ಬದುಕು ಹಾಗೂ ಓದು ಬರಹದಲ್ಲಿ ಬೆನ್ನಲುಬಾಗಿ ನಿಂತಿದ್ದರು. ಅಂಬೇಡ್ಕರ್ ಆಶಯಂತೆ ರಮಾಬಾಯಿ ಅಂಬೇಡ್ಕರ್ ಅವರು ಕೂಡ ಓದು ಬರಹವನ್ನು ಕಲಿತರು ಎಂದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಅನಂತ್‌ರಾಜ್, ಸಂಘದ ಎಚ್.ಎಸ್.ಬಸವರಾಜು, ಸತ್ಯಾನಂದಸ್ವಾಮಿ, ಜಯರಾಮು, ಬಿ.ಪಾಪಯ್ಯ, ಚೆನ್ನಕೇಶವ, ಸಿದ್ದರಾಮು, ನಾರಾಯಣಸ್ವಾಮಿ ಮಾದಯ್ಯ, ವೆಂಕಟಾಚಲಯ್ಯ, ಜಯರಾಮ್, ಚಿಕ್ಕಣ್ಣ, ಶಿವರಾಮ್‌ಮೂರ್ತಿ ಭಾಗವಹಿಸಿದ್ದರು.

# ಜಾತವಾರ ಹೊಸಹಳ್ಳಿ ರೇಷ್ಮೆ ಬೆಳೆಗಾರರ ಸಂಘಕ್ಕೆ ಆಯ್ಕೆ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಜಾತವಾರ ಹೊಸಹಳ್ಳಿ ರೇಷ್ಮೆ ಬೆಳೆಗಾರರು ಹಾಗೂ ರೈತರ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ರೆಡ್ಡಿ ಹಾಗೂ ಉಪಾಧ್ಯಕ್ಷರಾಗಿ ವೆಂಕಟೇಶಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಯ ಬಳಿಕ ಅಪಾರ ಸಂಖ್ಯೆಯಲ್ಲಿ ಹಾಜರಿದ್ದ ಬೆಂಬಲಿಗರು ನೂತನ ಪದಾಧಿಕಾರಿಗಳಿಗೆ ಹಾರ ಹಾಕಿ ಅಭಿನಂದನೆ ಸಲ್ಲಿಸಿ,ಸಿಹಿ ಹಂಚುವ ಮೂಲಕ ಶುಭಕೋರಿದರು.




# ಮಾನಸಿಕ ಒತ್ತಡಗಳೆಲ್ಲವೂ ಹುಚ್ಚು ಎನ್ನುವುದು ಬೇಡ

**ಮಂಡ್ಯ:** ಮಾನಸಿಕ ಒತ್ತಡ ಪ್ರತಿಯೊಬ್ಬರಲ್ಲಿಯೂ ಇರುತ್ತದೆ ಅದನ್ನು ಹುಚ್ಚು ಎಂಬುವ ಮಾತಿನಿಂದ ಕರೆಯುವುದು ಬೇಡ ಎಂದು ಭಾರತೀಯ ಮನೋ ವೈದ್ಯಕೀಯ ಪರಿಷತ್ ಅಧ್ಯಕ್ಷ ಡಾ.ಟಿ.ಎಸ್. ಸತ್ಯನಾರಾಯಣ್ ಅಭಿಪ್ರಾಯ ಪಟ್ಟರು.

ಇಲ್ಲಿನ ಅಶೋಕ ನಗರದ ಡಾ.ಯಶ್ ನ್ಯೂರೋಸೈಕಿಯಾಟ್ರಿ ಸೆಂಟರ್ ಉದ್ಘಾಟಿಸಿ ಅವರು ಮಾತನಾಡಿ, ಮಾನಸಿಕ ರೋಗ ಎನ್ನುವುದರ ಬಗ್ಗೆ ಅರಿವು ಮೂಡಿಸುವ ಅಗತ್ಯತೆ ಇದೆ. ಆಸ್ಪತ್ರೆಗೆ ಮಾನಸಿಕ ರೋಗ ತೋರಿಸಲು ಬಂದವರೆಲ್ಲಾ ಹುಚ್ಚರಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಒಂದು ಸಾವಿರಕ್ಕೆ 8 ಜನರಿಗೆ ಮಾನಸಿಕ ಖಾಯಿಲೆ ಇರಬಹುದು. ಕರ್ನಾಟಕ ಅಥವಾ ಯಾವುದೇ ಜಿಲ್ಲೆಯಾಗಿರಲಿ ಮಾನಸಿಕ ಒತ್ತಡವು ಪ್ರತಿಯೊಬ್ಬರೂ ಎದುರಿಸುತ್ತಿರುತ್ತಾರೆ. ಧೈರ್ಯವಾಗಿ ಎದುರಿಸುವ ಮನೋಭಾವ ಮುಖ್ಯವಾಗಬೇಕು ಎಂದು ತಿಳಿಸಿದರು.

ನರ ಮನೋವೈದ್ಯಕೀಯ ಕೇಂದ್ರದ ಡಾ.ಯಶ್ವಂತ್ ಕೆ. ಮಾತನಾಡಿ, ಮಾನಸಿಕ ಒತ್ತಡಗಳು ಹೆಚ್ಚಿರುತ್ತವೆ. ಒತ್ತಡಗಳು ಜಾಸ್ತಿಯಾದರೆ ಖಿನ್ನತೆ ಹೆಚ್ಚಾಗುತ್ತಾ ಹೋಗುತ್ತದೆ. ಆ ಸಮಯದಲ್ಲಿ ಸಮಸ್ಯೆ ಪರಿಹಾರ ಕಂಡುಕೊಳ್ಳಬೇಕು. ಯಾವುದೇ ಒತ್ತಡಗಳನ್ನು ಸಮಾಜದಲ್ಲಿ ಮುಚ್ಚಿಡುವುದು ಬೇಡ, ಮಾನಸಿಕ ಒತ್ತಡಗಳನ್ನು ನಿವಾರಣೆ ಮಾಡಿಕೊಳ್ಳುವ ಕಡೆ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಇತಿಹಾಸದಲ್ಲಿ ಒಂದು ಮಾನಸಿಕ ಚಿಕಿತ್ಸಾ ಕೇಂದ್ರವು ಮಂಡ್ಯದಲ್ಲಿ ಸ್ಥಾಪನೆ ಆಗಿದೆ. ಆರೋಗ್ಯ ವಿಚಾರದಲ್ಲಿ ಒಂದು ಶಕೆ ಆರಂಭವಾಗಿದೆ. ಅವರಿಗೇ ಇಡೀ ಜಿಲ್ಲೆಯ ಜನರ ಪರವಾಗಿ ಶುಭಕಾಮನೆಗಳನ್ನು ತಿಳಿಸಲು ಇಷ್ಟ ಪಡುತ್ತೇನೆ, ಆ ಮೂಲಕ ಜನರ ಸಮಸ್ಯೆಗಳು ಕಡಿಮೆ ಆಗಿ ನಿವಾರಣೆ ಆಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.




ಕಾರ್ಯಕ್ರಮದಲ್ಲಿ ಅಲಯನ್ಸ್ ಕೆ.ಟಿ.ಹನುಮಂತು, ಡಾ.ನಾರಾಯಣ್, ಡಾ.ಹೇಮ ಶಿವಲಿಂಗಯ್ಯ, ಡಾ.ನಾರಾಯಣ, ಡಾ.ರಾಮಲಿಂಗಯ್ಯ, ಡಾ.ಬಿ.ಕೆ.ಸುರೇಶ್, ಡಾ.ಚಂದ್ರೇಗೌಡ, ಡಾ.ವಸುಮತಿರಾವ್, ಡಾ.ಸೊನಾಲಿ, ಡಾ.ಶ್ರೇಯ ಭಾಗವಹಿಸಿದ್ದರು.

# ಕುಡಿಯುವ ನೀರಿನ ಸಮಸ್ಯೆ : ಸಹಾಯವಾಣಿ ಕೇಂದ್ರ ಸ್ಥಾಪನೆ



**ತುಮಕೂರು:** ತುಮಕೂರು ತಾಲ್ಲೂಕು ವ್ಯಾಪ್ತಿಯ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ತಾಲ್ಲೂಕು ಕಚೇರಿ ಹಾಗೂ ತಾಲ್ಲೂಕು ಪಂಚಾಯತಿಯಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ತಾಲ್ಲೂಕಿನಾದ್ಯಂತ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಸಂಭವಿಸಿದಲ್ಲಿ ಸಾರ್ವಜನಿಕರು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಸಹಾಯವಾಣಿ ಸಂಖ್ಯೆ 0816-2278496, 0816-2277503ನ್ನು ಸಂಪರ್ಕಿಸಬೇಕೆಂದು ತಹಶೀಲ್ದಾರ್ ರಾಜೇಶ್ವರಿ ಮನವಿ ಮಾಡಿದ್ದಾರೆ.



ವೀಣಾ ಪ್ರಭಾಕರ್ ಕಡೇಕಾರ್




# ತುಂಬಿದ ಕೊಡ ತುಳುಕಲಾರದು

ದೇಹವೆಂಬ ಈ ಮಡಿಕೆಯಲ್ಲಿ ಎಲ್ಲಾ ಉತ್ತಮ ಹಾಗೂ ಉತ್ತಮವಲ್ಲದ ಕಶ್ಮಲಗಳು ತುಂಬಿಕೊಂಡಿದೆ?ಅವುಗಳಲ್ಲಿ ನಾವು ಯಾವುದನ್ನು ಇಟ್ಟುಕೊಳ್ಳಬೇಕು ಮತ್ತು ತ್ಯಜಿಸಬೇಕೆಂಬುದು ನಮ್ಮ ಅಂತರಂಗದ ವಿವೇಚನೆಗೆ ಬಿಟ್ಟಿರುತ್ತದೆ .. ಎಲ್ಲರೂ ಮೆಚ್ಚುವಂತೆ ಬದುಕಲು ಸಾಧ್ಯವಿಲ್ಲ ಆದರೆ ನಮಗೂ ಒಂದು ಆತ್ಮಸಾಕ್ಷಿ ಎಂಬ ಕಡಿವಾಣ ಹಾಕುವ ಸೂತ್ರಧಾರ ಇರುವನಲ್ಲವೇ ಅಂತಹ ಆತ್ಮಸಾಕ್ಷಿಗೆ ಮೆಚ್ಚುವಂತೆ ನಾವು ಬದುಕಿದರೆ ಜೀವನವೊಂದು ಸಾರ್ಥಕವಾದಂತೆ ?ಅಹಂಕಾರ ದರ್ಪ ಕೋಪ ಆವೇಶ ಅಸಮಾಧಾನ ಎಲ್ಲವನ್ನೂ ಸಮಯಕ್ಕನುಗುಣವಾಗಿ ತೋರ್ಪಡಿಸುವ ಈ ದೇಹ ಒಂದು ದಿನ ಎಲ್ಲವನ್ನೂ ತ್ಯಜಿಸಲೇಬೇಕು ಎನ್ನುವುದು ತಿಳಿದಿದ್ದರು ಎಲ್ಲವೂ ನನ್ನಿಂದಲೇ ಎಲ್ಲವೂ ನನ್ನದೇ.. ನಾನು ಜ್ಞಾನಿ ನಾನು ಶ್ರೀಮಂತ ನಾನೇ ಸರಿ ನಾನೇ ತಿಳಿದವನು ಎನ್ನುವ ಭ್ರಮೆಯಲ್ಲಿ ಇತರರನ್ನು ಕೀಳಾಗಿ ಕಾಣುವ ಮಾತಿಬ್ರಮಣೆಯ ತಲೆಗಳು ನಮಗೆ ದಿನನಿತ್ಯ ಕಾಣಸಿಗುತ್ತಾರೆ .. ಜ್ಞಾನಿ ಎಲ್ಲರಿಂದಲೂ ಸತ್ಕಾರನಾಗುತ್ತಾನೆಂದರೆ ಅಲ್ಲಿ ಜ್ಞಾನಕ್ಕಿಂತಲೂ ಇತರರ ಜೊತೆಯಲ್ಲಿ ಅವರಿರುವ ಆತ್ಮೀಯತೆ ಹಾಗೂ ಉತ್ತಮ ನಡೆತೆ ಸರಿಸಮನಾಗಿ ಕಾಣುವ ದೃಷ್ಟಿಕೋನದ ಒಳಆಂತರ್ಯವೇ ಕಾರಣವಾಗಿರುತ್ತದೆ ?ನಾನು ಸಿರಿವಂತ ಅಥವಾ ನಾನು ಪ್ರಸಿದ್ಧಿ ನಾನು ಎಲ್ಲರಿಗೂ ಬೇಕು ಹೀಗೆ ನಾನು ನಾನು ಎನ್ನುವ ಕಾರಣದಿಂದ ಬೇರೆಯವರನ್ನು ತುಚ್ಚವಾಗಿ ನೋಡುವವರನ್ನು ಎಂದಿಗೂ ಮಾತನ್ನಾ ಡಿಸುವ ಗೊಡವೆಗೆ ಹೋಗಬಾರದು.. ಸಿರಿವಂತನಾಗಿದ್ದು ಗುಣದಲ್ಲಿ ಬಡವನಾಗಿರುವವರಲ್ಲಿ ಬೆರೆಯುವ ಬದಲು ಬಡವರಾಗಿದ್ದರು ಗುಣದಲ್ಲಿ ಸಿರಿವಂತರಾದವರಲ್ಲಿ ಬೆರೆತು ಕಲೆತರೆ ಅನೇಕ ಸತ್ಯ ದರ್ಶನಗಳನ್ನು ಒಳ ನೋಟದಿಂದ ಅರಿತಂತೆ ಹಾಗೂ ನಮ್ಮ ಬೆಳವಣಿಗೆಗೂ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಅಬ್ದುಲ್ ಕಲಾಮ್ ಒಬ್ಬರು ಮಹಾನ್ ಚಿಂತಕ, ಆರ್ಥಿಕ ತಜ್ಞ, ವಿಜ್ಞಾನಿ ದೇಶದ ಅತಿ ದೊಡ್ಡ ಪಾತ್ರವನ್ನೇ ನಿರ್ವಹಿಸಿದವರು ಎಂದಿಗೂ ಅವರ ಮನದೊಳಗೆ ಅಹಂ ಎನ್ನುವ ವಿಷ ಬೀಜ ಬಿತ್ತಿ ಬೆಳೆಯಲೇ ಇಲ್ಲ..ಪ್ರತಿಯೊಬ್ಬರಲ್ಲೂ ಹೊಸ ವಿಷಯದ ಭೋದಿಕೆಯನ್ನೇ ನಿರೀಕ್ಷಿಸಿದರು ಪುಟ್ಟ ಮಕ್ಕಳಿಂದ ದೊಡ್ಡವರವರೆಗೂ ಎಲ್ಲರೊಂದಿಗೆ ಆತ್ಮೀಯತೆಯನ್ನು ಹೊಂದಿ ಗೌರವವವನ್ನು ಕೊಟ್ಟು ತೆಗೆದುಕೊಂಡರು. ರತನ್ ಟಾಟಾ ಉದ್ಯಮದ ದೊಡ್ಡ ಕೋಟೆಯನ್ನು ಕಟ್ಟಿ ಅದೆಷ್ಟೋ ಜನರಿಗೆ ಉದ್ಯೋಗದಾತರಾದರು ಎಂದಿಗೂ ನಾನೇ ಎಲ್ಲ..ನಾನೊಬ್ಬ ಮಹಾನ್ ಉದ್ಯಮಿ ಎನ್ನುವುದನ್ನು ತೋರಿಸದೆ ಸಾಮಾನ್ಯ ಉದ್ಯೋಗಿಯಾಗಿಯೇ ಕೊನೆಯಾದರು ಹೀಗೆ ಅರಿಯಬೇಕಿದ್ದವರು ಅರಿತವರನ್ನೇ ಆರಿಸಿಕೊಂಡು ಅಂತಹವರ ಜೊತೆಗೆ ಬೆರೆತು ಬದುಕಿ ಅವರ ಆದರ್ಶಗಳನ್ನು ರೂಢಿಸಿಕೊಂಡು ಮುನ್ನಡೆಯಬೇಕು ನಾವು ಅವರಾಗಲು ಸಾಧ್ಯವಿಲ್ಲ ಆದರೆ ಅವರಂತೆ ಬಾಳಲು ಸಾಧ್ಯವಿದೆ ಅದೆಷ್ಟೇ ಸಂಪತ್ತು ಇರಲಿ ಅದೆಷ್ಟೇ ಜ್ಞಾನ ವಿದ್ಯೆ ಇರಲಿ ಬಾಗಿ ನಡೆದರೆ ಗೌರವ ತಲೆಯ ಮೇಲೆ ಇರುತ್ತದೆ. ಇಲ್ಲದೆ ಹೋದರೆ ಅಹಂಕಾರ ತಲೆ ಏರುತ್ತದೆ ಅಹಂಕಾರ ತಲೆಯ ಮೇಲೆ ಕುಳಿತಾಗ ಅಲ್ಲಿ ಗೌರವ ಕೆಳಗಿಳಿಯುತ್ತದೆ ಗೌರವ ಎಂದೂ ಅಹಂಕಾರದ ಜೊತೆ ನಿಲ್ಲುವುದಿಲ್ಲ ಹಾಗೆಂದು ಎಲ್ಲರೂ ಗೌರವಿಸುವಂತೆ ಬದುಕಲು ಸಾಧ್ಯವಿಲ್ಲ ?

ತುಂಬಿದ ಕೊಡದ ನೀರು ತುಳುಕುವುದಿಲ್ಲ ಎನ್ನುವಂತೆ ಸಕಲವನ್ನು ತಿಳಿದವರು ಉತ್ತಮರು ಎಂದಿಗೂ ಅಹಂಕಾರಿಗಳಾಗಿರುವುದಿಲ್ಲ ಎಲ್ಲರನ್ನೂ ಸಮಾನವಾಗಿ ನೋಡುತ್ತಾ ಎಲ್ಲರ ಸರಿಸಮಾನವಾದ ಸಾಮಾಜಿಕ ಜೀವನವನ್ನು ನಡೆಸುತ್ತಿರುತ್ತಾರೆ ಆದರೆ ಇನ್ನೂ ಕೆಲವರು ಅಲ್ಪತಿಳಿದವರು ಎಲ್ಲವನ್ನೂ ತಿಳಿದವರೆಂಬಂತೆ ನಾವೇ ದೊಡ್ಡ ಪ್ರಸಿದ್ದರು ಎನ್ನುವಂತೆ ಇತರರನ್ನು ಕೀಳಾಗಿ ನೋಡುವ ಅಥವಾ ತಾತ್ಸಾರ ಮಾಡುತ್ತಾ ತಮ್ಮ ವರ್ಚಸ್ಸನ್ನು ತಾವೇ ಕುಗ್ಗಿಸಿಕೊಳ್ಳುತ್ತಾರೆ ?

**ಗೌರವಕಷ್ಟೇ ಪ್ರತಿಗೌರವ :** ಯಾರನ್ನು ಮೆಚ್ಚಿಸುವ ಪ್ರಯತ್ನವಾಲಿ ಸ್ನೇಹವಾಗಲಿ ಸಲ್ಲದು ಅದೆಷ್ಟೇ ಪ್ರಭಾವಿಗಳಾಗಲಿ ಎಲ್ಲಿ ಗೌರವ ಸಿಗುತ್ತದೋ ಅಲ್ಲಿ ಮಾತ್ರ ನಮ್ಮ ಪ್ರವೇಶವಿರಬೇಕು ಯಾರು ಗೌರವ ಕೊಡುತ್ತಾರೆ ಅವರಿಗಷ್ಟೇ ಪ್ರತಿಗೌರವ ನೀಡಬೇಕು ಬದುಕು ನಿರಂತರ ಅಲ್ಲವೇ ಅಲ್ಲ ಯಾವ ಕ್ಷಣದಲ್ಲಿಯೂ ನಿಂತುಹೋಗಬಹುದು ಬದುಕಿರುವವರೆಗೆ ನಮಗಾಗಿ ನಾವು ಬದುಕಬೇಕಿದೆ .. ನಮ್ಮನ್ನು ನಾವು ಮೊದಲು ಗೌರವಿಸಿಕೊಳ್ಳಬೇಕಿದೆ ನಮ್ಮನ್ನು ನಾವು ಪ್ರೀತಿಸಿಕೊಳ್ಳಬೇಕಿದೆ ನಮ್ಮ ಆರೋಗ್ಯವನ್ನು ನಾವು ಪ್ರೀತಿ ಆಧರದಿಂದ ನೋಡಿಕೊಳ್ಳಬೇಕಾಗಿದೆ ಯಾರಿಂದಲೂ ಯಾರು ಬದುಕುವುದಿಲ್ಲ ಎನ್ನುವುದು ಅರಿವಿದ್ದ ಮೇಲೆ ಇನ್ನೊಬ್ಬರಿಗೆ ಅಂಜಿ ಬದುಕುವುದು ಇನ್ನೊಬ್ಬರಿಗೆ ಮೆಚ್ಚುವಂತೆ ಬದುಕುವುದನ್ನು ಬಿಟ್ಟುಬಿಡಬೇಕು ನಮ್ಮ ಮನಃಸಾಕ್ಷಿಗೆ ಅನುಗುಣವಾಗಿ ಬದುಕುತ್ತಾ ನಿರ್ಲಕ್ಷ್ಯಕ್ಕೆ ನಿರ್ಲಕ್ಷ್ಯವೆ ಮದ್ದು ಎನ್ನುವ ಹಾಗೆ ಗೌರವ ಕೊಡುವವರು ಎಂಥವರೇ ಆಗಿರಲಿ ಅವರಿಗೆ ಪ್ರತಿ ಗೌರವ ಪ್ರೀತಿ ಸ್ನೇಹ ಕೊಟ್ಟು ಗೌರವ ನೀಡದವರು ಎಷ್ಟೇ ಪ್ರಭಾವಿಗಳಾಗಿರಲಿ ಅಂಥವರನ್ನು ಕಡೆಗಣಿಸಿ ಮುಂದಕ್ಕೆ ಸಾಗಬೇಕು ತಿರಸ್ಕಾರಕ್ಕೆ ತಿರಸ್ಕಾರವೇ ಮದ್ದಾಗಿರಬೇಕು.. ಸಂಖ್ಯೆ ಮುಖ್ಯವಲ್ಲ ನಮ್ಮ ಜೊತೆ ವಿಶ್ವಾಸ ಹಾಗೂ ನಮ್ಮ ಒಳಿತನ್ನು ಹಾರೈಸುವವರು ಮುಖ್ಯ ನೂರುಜನರ ಸ್ನೇಹ ಸಂಪಾದಿಸಿ ಸಂಖ್ಯೆ ತೋರಿಸಿ ಅಹಂ ಪಡುವುದಕ್ಕಿಂತ ಪ್ರೀತಿಸುವ ಉತ್ತಮ ಹೃದಯ ಇರುವ ಬೆರಳಣಿಕೆಯ ಜನರ ಸಂಘ ಉತ್ತಮ.. ಹರಿಯುವ ನದಿ ಹರಿಯದೆ ಬಿಡುವುದಿಲ್ಲ,ಹುಟ್ಟುವ ಸೂರ್ಯ ಉದಯಿಸದೇ ಇರಲಾರ, ಇವುಗಳು ಯಾರನ್ನು ಕಾಯುವುದಿಲ್ಲ ಯಾರನ್ನು ಕೇಳುವುದಿಲ್ಲ ಹಾಗೆಯೇ ಭರವಸೆಯ ಹಿಂಬಾಲಿಸಿ ಬದುಕಿನಲ್ಲಿ ಎದುರಾದ ಬವಣೆಗಳನ್ನು ಸವಾಲುಗಳಾಗಿ ಪರಿವರ್ತಿಸಿ ಪಾಠಗಳಾಗಿ ಕಲಿತು ಸಾಗಿ ನಮ್ಮ ನೋವಿಗೆ ನಮ್ಮ ಮನಸ್ಸನ್ನೇ ಔಷಧವನ್ನಾಗಿ ಮಾಡಿಕೊಂಡು ನಮ್ಮವರು ಎಂದವರಿಗೆ ನಮಿಸಿ ನಮ್ಮನ್ನು ನಾವೇ ಹುರಿದುಂಬಿಸಿ ಬದುಕೆಂಬ ಅಲ್ಪ ಕಾಲದ ತಿರುವುಗಳ ಮಹಾ ನಾಟಕದ ಪರದೆಯ ಮೇಲೆ ನಮ್ಮತನಕ್ಕೆ ಬೆಲೆಕೊಟ್ಟು ನಮಗಾಗಿ ನಮ್ಮನ್ನು ಪ್ರೀತಿಸುವವರಿಗಾಗಿ ಬದುಕಿಗೆ ತಲೆಬಾಗಿ ಹಿತ ನುಡಿಯ ಸತ್ಯದಲ್ಲಿ ಅರಿತು ಬಾಳಿ ಪ್ರತಿ ದಿನವನ್ನು ನಮ್ಮ ಅಂತರಂಗಕ್ಕೆ ಒಪ್ಪುವ ಹಾಗೆ ಒಪ್ಪಓರಣವ ಮಾಡಿ ಬದುಕುವ ಬದುಕುವ ಕಲೆಯನ್ನು ತಿಳಿಯುವ ಅಲ್ಲವೇ

# ಸುಳ್ಳು ಹೇಳಿದಷ್ಟು ಹಣ ಜಾಸ್ತಿ..



| ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಇದೇನು ಸುಳ್ಳು ಹೇಳಿ ಹಣ ಪಡೆಯಿರಿ.... ವಿಚಿತ್ರವಲ್ಲವೇ, ಆದರೂ ಸತ್ಯ. ಎಲ್ಲಿ ಹೇಗೆ ಎಂದು ತವಕವೇ, ಆ ಸುಳ್ಳುಗಳು ನಿಮಗೂ ಗೊತ್ತು. ಹೇಳುವೆ ಕೇಳಿ.

ಫೇರ್ ಅಂಡ್ ಲವಲಿ ಹಚ್ಚಿ ಆರೇ ವಾರಗಳಲ್ಲಿ ಗಮನೀಯ ಮೈ ಕಾಂತಿ... ಅರವತ್ತು ವರುಷ ಹಚ್ಚಿದರೂ ಯಾವ ಬದಲಾವಣೆ ಆಗದು. ಚರ್ಮದ ಬಣ್ಣ, ಚರ್ಮದಲ್ಲಿರುವ ಮೆಲಿನಿನ್ ಮೇಲೆ ನಿರ್ಧರಿತವಾಗುತ್ತದೆ. ಫೇರ್ ಅಂಡ್ ಲವ್ಲಿ ಯಿಂದ ಬೆಳ್ಳಗಾಗುವುದಿದ್ದರೆ ವೆಸ್ಟ್ ಇಂಡೀಸ್ ನಲ್ಲಿ ಯಾರು ಕಪ್ಪಗೆ ಉಳಿಯುತ್ತಿರಲಿಲ್ಲ. ಅಮೆರಿಕದಲ್ಲಿ ಕರಿಯರು ಬಿಳಿಯರು ಎಂಬ ವ್ಯತ್ಯಾಸವೇ ಇರುತ್ತಿರಲಿಲ್ಲ.

ಮಕ್ಕಳಿಗೆ ಸಮತೋಲನ ಆಹಾರದ ಕೊರತೆ ನಿಮ್ಮ ಮಕ್ಕಳು ಎತ್ತರವಾಗಿ ಬೆಳೆಯುತ್ತಿಲ್ಲವೇ ಅವರಿಗೆ ರೋಗನಿರೋಧಕ ಶಕ್ತಿ ಕಡಿಮೆ ಇದೆಯೇ, ಕಾಂಪ್ಲಾ ್ಯನ, ಹಾರ್ಲಿಕ್ಸ... ಬೂಸ್ಟ ಈಜ ಸಿಕ್ರೇಟ ಆಫ್ ಎನರ್ಜಿ ಎಂದು ಹೇಳುವ ಪೇಯಗಳು ಅಕ್ಷರಶಃ ಸುಳ್ಳು.

ಯಾವ ನ್ಯೂಟ್ರಿಷನ್ ಎಕ್ಸ್ಪರ್ಟ್ ಕೂಡ ಈ ಪೇಯಗಳನ್ನು ಸಲಹೆ ಮಾಡುವುದಿಲ್ಲ. ಯಾವ ಮಕ್ಕಳ ವೈದ್ಯರು ಇವುಗಳನ್ನು ತೆಗೆದುಕೊಳ್ಳಲು ಹೇಳುವುದಿಲ್ಲ. ಹಾಗೆ ನೋಡಿದರೆ ಇದರಲ್ಲಿರುವ ಅತಿ ಹೆಚ್ಚಿನ ಪ್ರಮಾಣದ ಸಕ್ಕರೆ ಮಕ್ಕಳ ಆರೋಗ್ಯಕ್ಕೂ ಒಳ್ಳೆಯದಲ್ಲ.

ಇನ್ನು "ಸಂತೂರ್ ಮಮ್ಮಿ" ಎಂದು ಹೆಸರಾಗಿರುವ ಸಂತೂರ್ ಸೋಪಿನ ಪಿಎಚ್ ಬ್ಯಾಲೆನ್ಸ್ ನಿಗದಿತ ನಿಗದಿತ ಮಟ್ಟಕ್ಕೆ ಇರುವುದಿಲ್ಲ. ವಯಸ್ಸನ್ನು ನಿಯಂತ್ರಿಸುವ ಯಾವ ಔಷಧಿಗಳು ಅದರಲ್ಲಿ ಇಲ್ಲ. ಆದರೂ ಹಲವಾರು ವರ್ಷಗಳಿಂದ ಸುಳ್ಳು ಹೇಳಿಕೊಂಡೇ ಬರುತ್ತಾರೆ.

ಮನದ ಮಾತು...

ಇನ್ನೊಂದು ವಿಶೇಷಯೆಂದರೆ ಸಿನಿಮಾ ತಾರೆಯರು ನಟ ನಟಿಯರು ಪಾಂಡ್ಸ್, ಓಲೆ ಇಂತಹ ಸೌಂದರ್ಯ ವರ್ಧಕಗಳು ಮತ್ತು ಆಹಾರ ಪದಾರ್ಥಗಳ ಜಾಹೀರಾತು ಮಾಡುತ್ತಾರೆ. ಆದರೆ ಅದನ್ನು ಅವರು ನಿಜ ಜೀವನದಲ್ಲಿ ಬಳಸುವದೇ ಇಲ್ಲ,. ಸತ್ಯದ ನೆತ್ತಿಯ ಮೇಲೆ ಹೊಡೆದಂತಹ ಸುಳ್ಳಲ್ಲವೇ.


ಮಾಝಾ, ಸ್ಟಿಂಗ್ ಅಂತ ಪೇಯಗಳು ಅತಿಯಾದ ಸಕ್ಕರೆ, ಬಣ್ಣ ಮತ್ತು ರಾಸಾಯನಿಕ ಗುಣಗಳಿಂದ ಕೂಡಿವೆ. ಇದನು ಯಾವ ಸಿನಿ ತಾರೆಯರುಒಂದು ಹನಿ ಕುಡಿಯುವದಿಲ್ಲ ಆದರೆ ತಾಜಾ ಹಣ್ಣಿನರಸ ಎಂದು ತೋರಿಸುತಾರೆ. ಇವು ಆರೋಗ್ಯಕೆ ಹಾನಿಕರ.

**ಜಾಹಿರಾತುಗಳ ಮೂಲ ಉದ್ದೇಶ.**

1 ಮಾಹಿತಿ ನೀಡುವುದು ? ಹೊಸ ಉತ್ಪನ್ನ, ಸೇವೆ ಅಥವಾ ಯೋಜನೆಯ ಬಗ್ಗೆ ಜನರಿಗೆ ತಿಳಿಸುವುದು
2 ಆಕರ್ಷಣೆ ಮೂಡಿಸುವುದು ? ಜನರ ಗಮನ ಸೆಳೆದು ಆಸಕ್ತಿ ಹುಟ್ಟಿಸುವುದು
3 ಖರೀದಿಗೆ ಪ್ರೇರೇಪಿಸುವುದು ? ಉತ್ಪನ್ನ ಅಥವಾ ಸೇವೆ ಖರೀದಿಸಬೇಕು ಎಂದು ಮನವರಿಕೆ ಮಾಡುವುದು
4 ಬ್ರಾಂಡ್ ಪರಿಚಯ ? ಕಂಪನಿ ಅಥವಾ ಬ್ರಾಂಡ್‌ಗೆ ಗುರುತಿನ ಮುದ್ರೆ ನೀಡುವುದು
5 ಸ್ಪರ್ಧೆಯಲ್ಲಿ ಮುಂಚೂಣಿ ಸಾಧನೆ ? ಇತರ ಉತ್ಪನ್ನಗಳಿಗಿಂತ ತನ್ನದೇ ವಿಶೇಷತೆ ತೋರಿಸುವುದು
6 ಜನಮನದಲ್ಲಿ ನೆಲೆಗೊಳ್ಳುವುದು ? ಪದೇಪದೇ ಕಾಣಿಸಿಕೊಂಡು ನೆನಪಿನಲ್ಲಿ ಉಳಿಯುವುದು.

**ಜಾಹಿರಾತುಗಳಲ್ಲಿ ಮಾಡಬಾರದ ವಿಷಯಗಳು**

ಸುಳ್ಳು ಮಾಹಿತಿ ನೀಡಬಾರದು
ಜನರನ್ನು ತಪ್ಪು ದಾರಿಗೆ ಒಯ್ಯಬಾರದು




ಉತ್ಪನ್ನಕ್ಕೆ ನಕಲಿ ಕೀರ್ತಿ ಸೃಷ್ಟಿಸಬಾರದು
ಮುಖ್ಯ ಮಾಹಿತಿಯನ್ನು ಮರೆಮಾಚಬಾರದು
ಮಕ್ಕಳ ಭಾವನೆಗಳನ್ನು ದುರುಪಯೋಗಪಡಿಸಬಾರದು
ಇತರ ಉತ್ಪನ್ನಗಳನ್ನು ಅವಮಾನಿಸಬಾರದು
ಅಸಾಧ್ಯ ಫಲಿತಾಂಶಗಳನ್ನು ತೋರಿಸಬಾರದು
ಆರೋಗ್ಯಕ್ಕೆ ಹಾನಿಕಾರಕ ಅಭ್ಯಾಸಗಳನ್ನು ಪ್ರೋತ್ಸಾಹಿಸಬಾರದು.

ಇಲ್ಲಿ ನಕಲಿ ಕೀರ್ತಿ / ಭ್ರಾಂತಿದಾಯಕ ಖ್ಯಾತಿ (fake fame) ಪಡೆದಿರುವ ಕೆಲವು ಜಾಹಿರಾತುಗಳ ಉದಾಹರಣೆಗಳ.

* ಫೇರ್ & ಲವ್ಲಿ (ಈಗ: Glow & Lovely)? ಚರ್ಮದ ಬಣ್ಣ ಹೆಚ್ಚಿಸುತ್ತದೆ ಎಂಬ ತಪ್ಪು ಭರವಸೆ
* ಮಾಝಾ ? ?ನಿಜವಾದ ಹಣ್ಣುಗಳಿಂದ ತಯಾರಿಸಲಾಗಿದೆ? ಎಂಬ ಅತಿಶಯಿತ ಹೇಳಿಕೆ
* ಹಾರ್ಲಿಕ್ಸ್ / ಬೋರ್ನವಿಟಾ ? ಮಕ್ಕಳನ್ನು ಹೆಚ್ಚು ಬುದ್ಧಿವಂತರು, ಶಕ್ತಿಶಾಲಿಗಳು ಮಾಡುತ್ತದೆ ಎಂಬ ಭ್ರಾಂತಿ
* ಪತಂಜಲಿ ಉತ್ಪನ್ನಗಳು (ಕೆಲವು ಜಾಹಿರಾತುಗಳು) ? ಆಯುರ್ವೇದ ಪರಿಹಾರ ಎಂಬ ದಾವೆ
* ಇನ್‌ಸ್ಟಂಟ್ ಫೇರ್‌ನೆಸ್ ಕ್ರೀಮ್‌ಗಳು ? ಕೆಲವೇ ದಿನಗಳಲ್ಲಿ ಬಿಳಿತನ ನೀಡುತ್ತದೆ ಎನ್ನುವ ಸುಳ್ಳು ಪ್ರಚಾರ
* ಎನರ್ಜಿ ಡ್ರಿಂಕ್ಸ್ ? ಕುಡಿದ ತಕ್ಷಣ ಅತಿಯಾದ ಶಕ್ತಿ ಬರುತ್ತದೆ ಎಂಬ ತಪ್ಪು ಚಿತ್ರಣ
* ಮ್ಯೂಸ್ಲಿ ಜಾಹಿರಾತುಗಳಲ್ಲಿ ಇದನ್ನು ತುಂಬಾ ಆರೋಗ್ಯಕರ, ತೂಕ ಕಡಿಮೆ ಮಾಡುತ್ತದೆ ಎಂದು ತೋರಿಸಲಾಗುತ್ತದೆ.
  ಆದರೆ ಹಲವಾರು ಮ್ಯೂಸ್ಲಿಗಳಲ್ಲಿ ಸಕ್ಕರೆ, ಚಾಕೊಲೇಟ್, ಹೆಚ್ಚುವರಿ ಕ್ಯಾಲೊರಿಗಳು ಇರುತ್ತವೆ.
* ಕೋರ್ನ್‌ಫ್ಲೇಕ್ಸ್ ಪೂರ್ಣ ಆರೋಗ್ಯಕರ ಬೆಳಗಿನ ಉಪಾಹಾರ ಎಂದು ಜಾಹಿರಾತು ಮಾಡುತ್ತಾರೆ. ವಾಸ್ತವದಲ್ಲಿ ಇದರಲ್ಲಿ ಸಕ್ಕರೆ ಮತ್ತು ಸಂಸ್ಕರಿಸಿದ ಅಂಶಗಳು ಹೆಚ್ಚಿರುತ್ತವೆ.

ಆದ್ದರಿಂದ ಜನರಿಗೆ ತಪ್ಪು ಕಲ್ಪನೆ ಮೂಡಿಸುವ ಕಾರಣ ಇವುಗಳನ್ನು ಭ್ರಾಂತಿದಾಯಕ ಜಾಹಿರಾತುಗಳು ಎಂದು ಕರೆಯಬಹುದು.

**ಭಾರತೀಯ ಕಾನೂನು ಏನು ಹೇಳತ್ತದೆ.**

ಭಾರತದಲ್ಲಿ ಜಾಹಿರಾತುಗಳಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಗ್ರಾಹಕ ಸಂರಕ್ಷಣಾ ಕಾಯ್ದೆ 2019 (Consumer Protection Act, 2019) ಅನ್ವಯವಾಗುತ್ತದೆ.

* ಭ್ರಾಂತಿದಾಯಕ ಜಾಹಿರಾತುಗಳು ಕಾನೂನುಬಾಹಿರ
  ಸುಳ್ಳು ಮಾಹಿತಿ ನೀಡುವ ಅಥವಾ ಜನರನ್ನು ತಪ್ಪು ದಾರಿಗೆ ಒಯ್ಯುವ ಜಾಹಿರಾತುಗಳನ್ನು ನಿಷೇಧಿಸಲಾಗಿದೆ.
* ಸುಳ್ಳು ಭರವಸೆ ನೀಡಬಾರದು
  ಸಾಬೀತು ಮಾಡಲಾಗದ ಫಲಿತಾಂಶಗಳನ್ನು (ಉದಾ: ತಕ್ಷಣ ಬಿಳಿತನ, ಅದ್ಭುತ ಚಿಕಿತ್ಸೆ) ಜಾಹಿರಾತುಗಳಲ್ಲಿ ತೋರಿಸಬಾರದು.
* **ದಂಡ ಮತ್ತು ಶಿಕ್ಷೆ**
  ಮೊದಲ ತಪ್ಪಿಗೆ ರೂ. 10 ಲಕ್ಷವರೆಗೆ ದಂಡ
  ಮರುತಪ್ಪಿಗೆ ರೂ. 50 ಲಕ್ಷವರೆಗೆ ದಂಡ
  ಜಾಹಿರಾತು ನಿಷೇಧ ಅಥವಾ ತಿದ್ದುಪಡಿ ಆದೇಶ
* **ಪ್ರಚಾರಕರ (ಸೆಲೆಬ್ರಿಟಿಗಳ) ಜವಾಬ್ದಾರಿ**
  ತಪ್ಪು ಜಾಹಿರಾತು ಪ್ರಚಾರ ಮಾಡಿದ ಸೆಲೆಬ್ರಿಟಿಗಳಿಗೂ ದಂಡ ಹಾಗೂ ನಿರ್ಬಂಧ ವಿಧಿಸಬಹುದು.

**ಗ್ರಾಹಕರ ಹಕ್ಕು ರಕ್ಷಣೆ**

ಗ್ರಾಹಕರು ದೂರು ಸಲ್ಲಿಸಿ ಪರಿಹಾರ ಪಡೆಯಲು ಹಕ್ಕುದಾರರು.
ಜಾಹಿರಾತುಗಳಲ್ಲಿ ಮಾಡಬಾರದ ವಿಷಯಗಳು

1 ಸುಳ್ಳು ಮಾಹಿತಿ ನೀಡಬಾರದು
2 ಜನರನ್ನು ತಪ್ಪು ದಾರಿಗೆ ಒಯ್ಯಬಾರದು
3 ಉತ್ಪನ್ನಕ್ಕೆ ನಕಲಿ ಕೀರ್ತಿ ಸೃಷ್ಟಿಸಬಾರದು
4 ಮುಖ್ಯ ಮಾಹಿತಿಯನ್ನು ಮರೆಮಾಚಬಾರದು
5 ಮಕ್ಕಳ ಭಾವನೆಗಳನ್ನು ದುರುಪಯೋಗಪಡಿಸಬಾರದು
6 ಇತರ ಉತ್ಪನ್ನಗಳನ್ನು ಅವಮಾನಿಸಬಾರದು
7 ಅಸಾಧ್ಯ ಫಲಿತಾಂಶಗಳನ್ನು ತೋರಿಸಬಾರದು




**ಆರೋಗ್ಯಕ್ಕೆ ಹಾನಿಕಾರಕ ಅಭ್ಯಾಸಗಳನ್ನು ಪ್ರೋತ್ಸಾಹಿಸಬಾರದು**

ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಪ್ರಕಾರ ಭ್ರಾಂತಿದಾಯಕ ಜಾಹಿರಾತುಗಳು ಕಾನೂನುಬಾಹಿರವಾಗಿದ್ದು ದಂಡ ಹಾಗೂ ನಿಷೇಧಕ್ಕೆ ಒಳಪಡುತ್ತವೆ. ಯಾವದನ್ನು ಜಾಹೀರಾತು ಮಾಡಬೇಕಾಗಿದೆ ಆದರೆ ಮಾಡುವುದಿಲ್ಲ.

ಭಾರತೀಯ ಪ್ರತಿ ಐದು ಮಹಿಳೆಯರಲ್ಲಿ ಮೂವರುಯರಿಗೆ ಕಬ್ಬಿಣಾಂಶದ ಕೊರತೆ ಇದೆ ಇದಕ್ಕೆ ಉಚಿತವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಪೂರಕ ಔಷಧಿ ನೀಡುತ್ತಾರೆ . ಇದರ ಮಾಹಿತಿಯನ್ನು ಜಾಹೀರಾತುಗಳು ನೀಡುತ್ತಿವೆಯಾ. ಸರ್ಕಾರದ ಹಲವು ಯೋಜನೆಗಳ ಬಗ್ಗೆ ಅರಿವು ನಮಗೆ ಇಲ್ಲವೇ ಇಲ್ಲ. ಜನರಿಗೆ ಸರಿಯಾಗಿ ತಿಳಿಯದ / ಕಡಿಮೆ ತಿಳಿದಿರುವ ಉಚಿತ ಸರ್ಕಾರಿ ಯೋಜನೆಗಳು

**ಆರೋಗ್ಯ**

* **ಆಯುಷ್ಮಾನ್ ಭಾರತ ? PM-JAY**
  ವರ್ಷಕ್ಕೆ ?5 ಲಕ್ಷವರೆಗೆ ಉಚಿತ ಚಿಕಿತ್ಸೆ
  ದೊಡ್ಡ ಶಸ್ತ್ರಚಿಕಿತ್ಸೆ, ಆಸ್ಪತ್ರೆ ಖರ್ಚು ಕೂಡ ಒಳಗೊಂಡಿದೆ
* **ಉಚಿತ ಲಸಿಕೆ ಯೋಜನೆ**
  ಮಕ್ಕಳ ಎಲ್ಲಾ ಲಸಿಕೆಗಳು ಸಂಪೂರ್ಣ ಉಚಿತ
  ಗರ್ಭಿಣಿಯರಿಗೆ ಖಿಖಿ, ಖಡಿಂಟಿ, ಅಚಿಟಭಿಣಾಟ
  ಉಚಿತ ಡಯಾಲಿಸಿಸ್ ಯೋಜನೆ
  ಸರ್ಕಾರಿ ಆಸ್ಪತ್ರೆಗಳಲ್ಲಿ ಕಿಡ್ನಿ ರೋಗಿಗಳಿಗೆ ಉಚಿತ ಡಯಾಲಿಸಿಸ್
* **ಮಹಿಳೆ ಮತ್ತು ಮಕ್ಕಳು**
  ಮಾತೃ ವಂದನಾ ಯೋಜನೆ
  ಮೊದಲ ಮಗುವಿಗೆ ಗರ್ಭಾವಸ್ಥೆಯಲ್ಲಿ ಹಣ ಸಹಾಯ + ಉಚಿತ ಆರೋಗ್ಯ ಸೇವೆ
  ಪೋಷಣ್ ಅಭಿಯಾನ್
  ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಪೌಷ್ಟಿಕ ಆಹಾರ
  ಉಚಿತ ಸ್ಯಾನಿಟರಿ ನ್ಯಾಪ್ಕಿನ್ ಯೋಜನೆ
  ಶಾಲಾ ಹುಡುಗಿಯರಿಗೆ ಮತ್ತು ಗ್ರಾಮೀಣ ಮಹಿಳೆಯರಿಗೆ
* **ಶಿಕ್ಷಣ**
  ಉಚಿತ ಶಿಕ್ಷಣ + ಪುಸ್ತಕಗಳು
  ಸರ್ಕಾರಿ ಶಾಲೆಗಳಲ್ಲಿ ಪುಸ್ತಕ, ಯೂನಿಫಾರ್ಮ್, ಮಧ್ಯಾಹ್ನ ಊಟ
  ವಿದ್ಯಾರ್ಥಿವೇತನಗಳು
  SC/ST/OBC/ಅಲ್ಪಸಂಖ್ಯಾತರಿಗೆ ಉಚಿತ ವಿದ್ಯಾರ್ಥಿವೇತನ
  ಉಚಿತ ಕೋಚಿಂಗ್
  UPSC, ಬ್ಯಾಂಕ್, SSCಪರೀಕ್ಷೆಗಳಿಗೆ
* **ರೈತರಿಗೆ**
  ಮಣ್ಣಿನ ಆರೋಗ್ಯ ಕಾರ್ಡ್
  ಉಚಿತ ಮಣ್ಣು ಪರೀಕ್ಷೆ
  ಉಚಿತ ಬೆಳೆ ವಿಮೆ (ಸಬ್ಸಿಡಿ)
  ಬೆಳೆ ನಷ್ಟಕ್ಕೆ ಪರಿಹಾರ



* **ಸಾಮಾಜಿಕ ಭದ್ರತೆ**
  ಉಚಿತ ರೇಷನ್ ಯೋಜನೆ
  ಅಕ್ಕಿ, ಗೋಧಿ, ಧಾನ್ಯಗಳು
  ಉಚಿತ ಪಿಂಚಣಿ
  ವೃದ್ಧ, ವಿಧವಾ, ಅಂಗವಿಕಲರಿಗೆ
* **ಉದ್ಯೋಗ ಮತ್ತು ಕೌಶಲ್ಯ**
  ಕೌಶಲ್ಯ ಭಾರತ ಯೋಜನೆ
  ಉಚಿತ ತರಬೇತಿ + ಪ್ರಮಾಣಪತ್ರ
  ಉಚಿತ ಉದ್ಯೋಗ ಮೇಳಗಳು

**ಸರ್ಕಾರದಿಂದ ಇರುವ ಆಯೋಜನೆಗಳು ಜನರಿಗೆ ತಿಳಿದಿಲ್ಲ ಏಕೆ?**


ಜಾಹಿರಾತು ಕಡಿಮೆ.
ಆನ್‌ಲೈನ್ ಮಾಹಿತಿ ಅರ್ಥವಾಗದ ಭಾಷೆ.
ಗ್ರಾಮೀಣ ಪ್ರದೇಶದಲ್ಲಿ ಮಾಹಿತಿ ತಲುಪದೆ ಇರುವುದು.

ಹೀಗೆ ಸೊಪ್ಪು ಮಾಡುವ ಹತ್ತಿರ ಎರಡು ರೂಪಾಯಿಗಳಿಗೆ ಜಗಳ ಮಾಡುವ ನಾವು, ಗಕೊಂಡು ತಂದ ಹಣ್ಣುಗಳಲಿ ಎರಡು ಕೆಟ್ಟರೂ ವಾಪಸ್ ಕೊಟ್ಟು ಪ್ರತಿಯಾಗಿ ಬೇರೆ ಬೇರೆ ಹಣ್ಣನ್ನು ತರುವೆವೂ. ಆದರೆ ಇಂತಹ ಸುಳ್ಳು ಮಾಹಿತಿ ನೀಡುವ ಜಾಹೀರಾತು ನೋಡಿಕೊಂಡು ಸುಮ್ಮನೆ ಇದ್ದುಬಿಡುತ್ತೇವೆ.

**ಮತ್ತಷ್ಟು ಮನದ ಮಾತು ಮತ್ತೆ ಮುಂದಿನ ವಾರ.**

---

# ಭಕ್ತಿಯ ಮೌಲ್ಯವನ್ನು ಸಾರಿದ ಶಬರಿ



| ಉಮಾಸುತ

**ಶಬರಿ ಜಯಂತಿ ವಿಶೇಷ ಲೇಖನ**

ನಾವು ಚಿಕ್ಕವರಿರುವಾಗಿ ನಮ್ಮ ಪಠ್ಯಪುಸ್ತಕದದಲ್ಲಿ ವಿ. ಸೀತಾರಾಮಯ್ಯನವರ ?ಕಾದಿರುವಳು ಶಬರಿ, ರಾಮ ಬರುವನೆಂದು, ತನ್ನ ಪೂಜೆಗೊಳುವನೆಂದು? ಎಂಬ ಪದ್ಯವಿತ್ತು. ರಾಮಾಯಣದ ಅರಣ್ಯಕಾಂಡದ ಪ್ರಸಂಗವೊಂದರ ಕುರಿತಾದ ಆ ಪದ್ಯದಲ್ಲಿ ರಾಮನ ಮೇಲಿನ ಉತ್ಕಟ ಶ್ರದ್ಧೆಯುಳ್ಳ ವಯಸ್ಸಾದ ಮಹಿಳೆ ಶಬರಿ, ಕಾಡಿನಲ್ಲಿ ರಾಮನ ದರ್ಶನಕ್ಕಾಗಿಯೇ ತನ್ನ ಜೀವವನ್ನು ಕಾಯ್ದಿಟ್ಟುಕೊಂಡಿರುವ ಮತ್ತು ರಾಮ ಲಕ್ಷಣರನ್ನು ನೋಡಿ ಆವರಿಗೆ ಆತಿಥ್ಯ ಮಾಡಿ, ಮುಕ್ತಿ ಹೊಂದುವ ಸುಂದರವಾದ ಪ್ರಸಂಗವಿದ್ದು ಆಕೆಯ ಜಯಂತಿಯಂದು ಆಕೆಯ ಕುರಿತಾಗಿ ಸವಿವರವಾಗಿ ತಿಳಿಯೋಣ ಬನ್ನಿ.

ಬಹುತೇಕರು ಶಬರಿ ಒಬ್ಬ ಬಡ ಮಹಿಳೆ ಎಂದೇ ಭಾವಿಸಿದ್ದಾರಾದರೂ, ಆಕೆಯ ಪೂರ್ವಾಶ್ರಮದ ಹಿನ್ನಲೆ ಅತ್ಯಂತ ರೋಚಕವಾಗಿದೆ. ಶಬರಿಯು ನಿಷಾದ ಬುಡಕಟ್ಟಿನ ಬೇಟೆಗಾರ ರಾಜನ ಮುದ್ದಿನ ಮಗಳಾಗಿದ್ದು, ಆಕೆ ವಿವಾಹದ ವಯಸ್ಸಿಗೆ ಬಂದಾಗ, ಆಕೆಗೊಂದು ಸುಂದರನಾದ ವರನನ್ನು ಹುಡುಕಿ ಆಕೆಯ ಮದುವೆ ಮಾಡಲು ಮುಂದಾಗುತ್ತಾನೆ. ಮದುವೆ ಬಗ್ಗೆ ಏನನ್ನೂ ಅರಿಯದಿದ್ದ ಶಬರಿ, ತನ್ನ ಮದುವೆಯ ಔತಣಕ್ಕಾಗಿ ಭಾರೀ ಪ್ರಮಾಣದ ಪ್ರಾಣಿ ಬಲಿಯನ್ನು ಮಾಡಲು ಮುಂದಾಗಿದ್ದದನ್ನು ಕಂಡು ಹಾಗೆ ಮಾಡಬಾರದೆಂದು ತಂದೆಯನ್ನು ಪರಿಪರಿಯಾಗಿ ಕೇಳಿಕೊಂಡರೂ, ಅವರು ಗದರಿಸಿದಾಗ, ತಂದೆಯ ಮಾತಿಗೆ ಎದುರಾಡಲು ಮನಸ್ಸಿಲ್ಲದ ಆಕೆ, ತನ್ನ ಮದುವೆಯ ಹಿಂದಿನ ದಿನ ಯಾರಿಗೂ ತಿಳಿಸದೇ, ಮನೆಯಿಂದ ಓಡಿಹೋಗಿ, ಆಧ್ಯಾತ್ಮಿಕ ಜ್ಞಾನವನ್ನು ಅರಸುತ್ತಾಳೆ. ಅನೇಕ ಋಷಿಮುನಿಗಳು ಆಕೆಯನ್ನು ಶಿಷ್ಯಳಾಗಿ ಸ್ವೀಕರಿಸಲು ನಿರಾಕರಿಸಿದಾಗ, ಅಂತಿಮವಾಗಿ ದಕ್ಷಿಣದ ಕಡೆಗೆ ಬಂದಾಗ, ಋಷ್ಯಮುಖ ಪರ್ವತದ ತಪ್ಪಲಿನಲ್ಲಿ ಮಾತಂಗ ಋಷಿಯನ್ನು ಭೇಟಿಯಾಗಿ, ಆವರ ಶಿಷ್ಯೆಯಾಗಿ, ನಿರಂತರವಾಗಿ ಭಕ್ತಿಯಿಂದ ಗುರುಗಳ ಸೇವೆ ಮಾಡುತ್ತಾ, ಜ್ಞಾನಾರ್ಜನೆಯಲ್ಲಿ ತೊಡಗಿಕೊಂಡಳು. ಮಾತಂಗ ಮಹರ್ಷಿಗಳ ದೇಹಾಂತ್ಯದ ಸಮಯದಲ್ಲಿ ತಾನೂ ಸಹಾ ಗುರುಗಳೊಂದಿಗೆ ಮುಕ್ತಿ ಹೊಂದುವ ಬಯಕೆಯನ್ನು ವ್ಯಕ್ತಪಡಿಸಿದಾಗ, ಮಾತಂಗ ಋಷಿಗಳು, ಮುಂದೊಂದು ದಿನ ವಿಷ್ಣುವಿನ ಅವತಾರವಾದ ಪ್ರಭು ಶ್ರೀರಾಮನು ಇಲ್ಲಿಗೆ ಬಂದಾಗ, ಆತನ ದರ್ಶನ ಪಡೆದು, ಅವನ ಸೇವೆ ಮಾಡಿದ ನಂತರವೇ ನಿನಗೆ ಮುಕ್ತಿ ದೊರೆಯುತ್ತದೆ ಎಂಬ ಗುರುಗಳ ಮಾತಿನಂತೆ, ಅಂದಿನಿಂದ ಆಕೆ ಪ್ರಭು ಶ್ರೀರಾಮ ಬರುವಿಕೆಗಾಗಿ ಋಷ್ಯಮುಖ ಪರ್ವತದ ತಪ್ಪಲಿನ ಆಶ್ರಮದಲ್ಲಿ ಕಾಯತೊಡಗಿದಳು.

ಪ್ರತಿದಿನವೂ ಶಬರಿಯು ತನ್ನ ದಿನನಿತ್ಯದ ಕರ್ಮಗಳನ್ನು ಮುಗಿಸಿ, ದೇವರ ಪೂಜೆಗೈದು, ರಾಮನಿಗೆ ಹಣ್ಣುಗಳನ್ನು ಸಂಗ್ರಹಿಸಿ ತರುತ್ತಿದ್ದಳು. ಹಾಗೆ ತಂದ ಪ್ರತೀ ಹಣ್ಣುಗಳನ್ನೂ ಕಚ್ಚಿ, ಅವು ಸಿಹಿಯಾಗಿದ್ದಲ್ಲಿ ಮಾತ್ರವೇ ರಾಮನಿಗೆಂದು ತನ್ನ ಬುಟ್ಟಿಯಲ್ಲಿ ತೆಗೆದಿರಿಸಿ, ಅದು ಹುಳಿ/ಕಹಿಯಾಗಿದ್ದಲ್ಲಿ ಅದನ್ನು ಅಲ್ಲಿಯೇ ಬಿಸಾಡುತಿದ್ದಳು. ಆಕೆಗೆ ಪ್ರಭು ಶ್ರೀರಾಮನ ನೈವೇದ್ಯಕ್ಕೆ ಎಂಜಿಲು ಮಾಡಿದ ಹಣ್ಣುಗಳು ಸಲ್ಲುವುದಿಲ್ಲ ಎಂಬ ಪರಿವೇ ಇರುತ್ತಿರಲಿಲ್ಲ. ವರ್ಷದ ಮೇಲೆ ವರ್ಷ ಉರುಳಿದರೂ, ರಾಮನ ಆಗಮನವಾಗದೇ ಹೋದರೂ, ಅತನಿಗಾಗಿ ಕಾಯುವ ಆಕೆಯ ಕಾಯಕದಲ್ಲಿ ಕೊಂಚವೂ ಬದಲಾಗಲಿಲ್ಲ. ಕೊಟ್ಟ ಭಾಷೆಯಂತೆ ರಾಮನು ಮಡದಿ ಸೀತೆ ಮತ್ತು ಲಕ್ಷ್ಮಣನೊಡನೆ ವನವಾಸ ಮಾಡುತ್ತಿರುವಾಗ, ರಾವಣನ ಕಪಟತನದಿಂದ ಸೀತಾಪಹರಣವಾದಾಗ, ಆಕೆಯನ್ನು ಅರಸುತ್ತಾ ರಾಮ ಮತ್ತು ಲಕ್ಷ್ಮಣರು ಋಷ್ಯಮುಖ ಪರ್ವತದ ತಪ್ಪಲಿಗೆ ಬರುತ್ತಿರುವಾಗ ಅದಾಗಲೇ ಕತ್ತಲಾಗಿದ್ದರೂ, ವೃದ್ದೆಯಾದ ಶಬರಿ ತರಗೆಲೆಗಳ ಸದ್ದನ್ನೇ ಆಲಿಸಿ ಯಾರೋ ತಮ್ಮ ಆಶ್ರಮದೆಡೆಗೆ ಬರುತ್ತಿದ್ದಾರಲ್ಲಾ ಎಂದು ತನ್ನ ಊರುಗೋಲಿನ ಸಹಾಯದಿಂದ ಬಂದು ನೋಡಿದರೆ, ಆ ಕತ್ತಲಿನಲ್ಲೂ, ರಾಮನ ಪರಿಚಯವೇ ಇಲ್ಲದ ಹೆಂಗಸು, ಅದೆಷ್ಟೋ ವರ್ಷಗಳಿಂದಲೂ ಚಿರಪರಿತಳಂತೆ ರಾಮನನ್ನು ಕರೆದುಕೊಂಡು ಹೋಗುತ್ತಿರುವುದನ್ನು ಕಂಡ ಲಕ್ಷ್ಮಣನಿಗೆ ಆಚ್ಚರಿಯಾದರೂ, ಅಣ್ಣನನ್ನು ಸದ್ದಿಲ್ಲದೇ ಹಿಂಬಾಲಿಸುತ್ತಾನೆ. ಸಾಕಷ್ಟು ದಣಿವಾಗಿರಬಹುದು ಮತ್ತು ಹೊಟ್ಟೆಯೂ ಹಸಿದಿರಬಹುದು ಎಂದು ರಾಮನಿಗಾಗಿಯೇ ಸಂಗ್ರಹಿಸಿ ತಂದಿದ್ದ ಗೆಡ್ಡೆ ಗೆಣಸುಗಳು ಮತ್ತು ಹಣ್ಣು ಹಂಪಲನ್ನು ತಂದು ರಾಮನ ಮುಂದಿಟ್ಟು ಬಹಳ ವಿನಮ್ರದಿಂದ ರಾಮಾ, ಈ ಬಡವಿಯ ಆತಿಥ್ಯವನ್ನು ಸ್ವೀಕರಿಸು ಎಂದು ಕೋರಿಕೊಂಡಳು. ಆಕೆಯ ಭಕ್ತಿ ಪರಾಕಾಷ್ಠೆಯ ಪ್ರೀತಿಗೆ ಮಾರು ಹೋದ ರಾಮನು ಒಂದು ಹಣ್ಣನ್ನು ತೆಗೆದುಕೊಂಡು ಇನ್ನೇನು ಹಲ್ಲುಗಳಿಂದ ಕಚ್ಚಿ ತಿನ್ನಬೇಕು ಎನ್ನುವಷ್ಟರಲ್ಲಿ, ಥಟ್ ಎಂದು ರಾಮನ ಕೈಗಳಿಂದ ಹಣ್ಣನ್ನು ಕಿತ್ತುಕೊಂಡ ಶಬರಿ ಕೂಡಲೇ ಆ ಹಣ್ಣನ್ನು ಮತ್ತೊಮ್ಮೆ ಕಚ್ಚಿ, ಛೀ!! ಇದು ಹುಳಿಯಾಗಿದೆ ಇದು ಬೇಡ ಎಂದು ಬೇರೊಂದು ಹಣ್ಣನ್ನು ತೆಗೆದುಕೊಂಡು ಅದು ಸಿಹಿಯಾಗಿದೆ ಎಂದು ಖಾತ್ರಿ ಪಡಿಸಿಕೊಂಡು ತಗೋ ರಾಮಾ!! ಈ ಹಣ್ಣು ತಿನ್ನು ಬಹಳ ರುಚಿಯಾಗಿದೆ ಎಂದು ಹೇಳಿದಾಗ, ತಾನು ತಿನ್ನಬೇಕಾದ ಹಣ್ಣನ್ನು ಆಕೆ ಕಚ್ಚಿ ಎಂಜಲು ಮಾಡಿದ್ದಾಳೆ ಎಂಬುದನ್ನೂ ಲೆಕ್ಕಿಸದ ರಾಮಚಂದ್ರ ಸಂತೋಷದಿಂದ ಶಬರಿ ನೀಡುತ್ತಿದ್ದ ಹಣ್ಣು ಹಂಪಲುಗಳನ್ನು ಒಂದೊಂದಾಗಿ ತಿನ್ನತೊಡಗಿದನು.

ಶಬರಿಯ ಎಂಜಲು ಹಣ್ಣುಗಳನ್ನು ಲಕ್ಷ್ಮಣನು ತಿನ್ನಲು ಒಪ್ಪದೇ ಹಾಗೇ ಕುಳಿತಿದ್ದದ್ದನ್ನು ಗಮನಿಸಿದ ರಾಮನು ಅಯ್ಯಾ ಅನುಜಾ, ತಾವು ಇದುವರೆಗೂ ಸೇವಿಸಿದ ಬಗೆ ಬಗೆಯ ಆಹಾರಗಳಲ್ಲಿ, ಇಷ್ಟು ಭಕ್ತಿಯಿಂದ ಅರ್ಪಿಸಿದ ಈ ರುಚಿ ರುಚಿಯಾದ ಹಣ್ಣುಗಳಿಗೆ ಸರಿಸಮವಾಗಿ ಇಲ್ಲ. ಹಾಗಾಗಿ ನಿಸ್ಸಂಕೋಚವಾಗಿ ಒಂದು ಹಣ್ಣನ್ನು ನೀನು ತಿಂದು ನೋಡು. ಯಾರು ನಮಗೆ ಪ್ರೀತಿಯಿಂದ ಗೆಡ್ಡೆಗೆಣಸುಗಳು, ಹಣ್ಣು, ಹೂವು ಅಥವಾ ಕನಿಷ್ಠ ಪಕ್ಷ ನೀರನ್ನಾದರೂ ಅರ್ಪಿಸುತ್ತಾರೋ, ಅದನ್ನು ನಾವು ಯಾವುದೇ ಸಂಕೋಚವಿಲ್ಲದೇ ಸೇವಿಸಿದಾಗಲೇ ಅವರ ಭಕ್ತಿಗೆ ಒಂದು ರೀತಿಯ ಫಲ ದೊರೆಯುತ್ತದೆ. ಹೀಗೆ ಅಣ್ಣನ ಮಾತುಗಳನ್ನು ಎಂದಿಗೂ ಮೀರದ ಲಕ್ಷಣನೂ ಸಹಾ ಫಲಾಹಾರಗಳನ್ನು ಸ್ವೀಕರಿಸಿ ಸಂತುಷ್ಟನಾಗುತ್ತಾನೆ. ಪ್ರಭು ಶ್ರೀರಾಮಚಂದ್ರನ ದರ್ಶನವೇ ತನ್ನ ಜೀವನದ ಅಂತಿಮ ಗುರಿ ಎಂದು ಆತನಿಗಾಗಿ ವರ್ಷಾನುಗಟ್ಟಲೆ ಕಾದಿದ್ದ ಶಬರಿಗೆ, ಇಂದಿಗೆ ತನ್ನ ಜೀವನ ಸಾರ್ಥಕವಾಯಿತು. ದಯವಿಟ್ಟು ನನ್ನೀ ದೇಹತ್ಯಾಗ ಮಾಡಿ ನನ್ನ ಗುರು ಮಾತಂಗರನ್ನು ಸೇರಿಕೊಳ್ಳಲು ಅನುಮತಿ ನೀಡು ರಾಮಾ! ಎಂದು ಕೇಳಿಕೊಂಡ ತಕ್ಷಣವೇ, ರಾಮನೂ ಸಹಾ ಆಕೆಯ ತಲೆಯ ಮೇಲೆ ಕೈ ಇಡುತ್ತಿದ್ದಂತೆಯೇ ಆಕೆಯ ಪ್ರಾಣ ಪಕ್ಷಿ ಹಾರಿಹೋಗಿ, ಭಗವಂತನಲ್ಲಿ ಲೀನವಾಗುವುದರೊಂದಿಗೆ ಶಬರಿಯ ಪುರಾಣ ಮುಕ್ತಾಯವಾಗುತ್ತದೆ.

ಇನ್ನು ಶಬರಿಯ ಆಶ್ರಮದ ಬಗ್ಗೆ ಹಲವಾರು ಪ್ರತೀತಿಗಳಿವೆ. ಕೆಲವರು ಇಂದಿನ ಛತ್ತೀಸ್‌ಗಢದ ಜಾಂಜ್‌ಗೀರ್–ಚಂಪಾ ಜಿಲ್ಲೆಯಲ್ಲಿರುವ, ಶಿವನಾರಾಯಣದಲ್ಲಿ ನೆಲೆಸಿರುವ ಶಬರಿನಾರಾಯಣ ಎಂದರೆ, ಇನ್ನೂ ಕೆಲವರು ಕೇರಳದ ಪಟ್ಟಣಂತಿಟ್ಟ ಜಿಲ್ಲೆಯಲ್ಲಿರುವ ಅಯ್ಯಪ್ಪ ಸ್ವಾಮಿ ನೆಲೆಸಿರುವ ಶಬರಿಮಲೆಯಲ್ಲಿಯೇ ಶಬರಿಯ ಆಶ್ರಮವಿದ್ದು ಅಲ್ಲಿಯೇ ಆಕೆಗೆ ರಾಮನ ದರ್ಶನವಾಗಿ ಮುಕ್ತಿ ಪಡೆದ ಕಾರಣ ಆ ಪ್ರದೇಶಕ್ಕೆ ಶಬರಿಮಲೆ ಎಂಬ ಹೆಸರು ಬಂದಿದೆ ಎನ್ನಲಾಗುತ್ತದೆ. ಇನ್ನು ಪಂಪಾ ಸರೋವರ ಬಳಿ ಶಬರಿಯ ಆಶ್ರಮ ಇತ್ತು ಎಂದು ಹೇಳಲಾಗುತ್ತಿದ್ದು ಆ ಪಂಪಾ ಸರೋವರವು ಪ್ರಸುತ ಕರ್ನಾಟಕದ ಕೊಪ್ಪಳ ಜಿಲ್ಲೆಯ ಹಂಪೆ ಬಳಿ, ತುಂಗಭದ್ರಾ ನದಿಯ ದಕ್ಷಿಣದಲ್ಲಿದ್ದು, ಇಂದಿಗೂ ಕಾಣಬಹುದಾಗಿದ್ದು ಇದರ ಸುತ್ತಮುತ್ತಲೇ ಆಂಜನೇಯ, ವಾಲಿ ಮತ್ತು ಸುಗ್ರೀವ ಎಲ್ಲರೂ ವಾಸಿಸುತ್ತಿದ್ದ ಕಿಷ್ಕಿಂದೆಯೂ ಇದ್ದು, ಅದೊಮ್ಮೆ ದುಂದುಭಿ ಎಂಬ ಅಸುರನನ್ನು ಕೊಂದು ಸೋಲಿಸಿದ ವಾಲಿಯು ಕೋಪದಲ್ಲಿ ಆತನ ದೇಹವನ್ನು ಆಕಾಶದಿಂದ ಸುಮಾರು ದೂರ ಎಸೆಯುತ್ತಾನೆ. ಹಾಗೆ ಎಸೆಯುವ ಭರದಲ್ಲಿ, ದುಂದುಭಿಯ ದೇಹದ ಕೆಲವು ಹನಿ ರಕ್ತವು ಗಾಳಿಯಲ್ಲಿ ಹಾರಿ ಮಾತಂಗ ಋಷಿಯ ಆಶ್ರಮದ ಮೇಲೆ ಬಿದ್ದದ್ದನ್ನು ಕಂಡ ಮಾತಂಗ ಋಷಿಗಳು ತಮ್ಮ ಋಷ್ಯಮುಖ ಪರ್ವತದ ಮೇಲೆ ವಾಲಿ ಕಾಲಿಟ್ಟರೆ, ಆತನ ತಲೆ ಸಾವಿರ ಹೋಳಾಗಲಿ ಎಂಬ ಶಾಪವನ್ನು ನೀಡುತ್ತಾರೆ ಎಂಬ ಪ್ರತೀತಿಯೂ ಇದ್ದು, ಈ ಎಲ್ಲಾ ಪುರಾವೆಗಳ ಆಧಾರದ ಮೇಲೆ ಶಬರಿಯು ಇತಿಹಾಸ ಪ್ರಸಿದ್ಧ ಹಂಪೆಯ ಬಳಿಯೇ ವಾಸಿಸುತ್ತಿದ್ದಳು ಎಂಬದು ಖಚಿತವಾಗುತ್ತದೆ.

ಶಬರಿಯ ಆಶ್ರಮದ ಕುರಿತಾಗಿ ಎಷ್ಟೇ ಪ್ರತೀತಿ ಇದ್ದರೂ, ಶಬರಿಯು ತನ್ನ ಜಾತಿ ಮತ್ತು ಸಾಮಾಜಿಕ ಸ್ಥಾನಮಾನವನ್ನೆಲ್ಲವನ್ನೂ ಮೀರಿ ಶುದ್ಧವಾದ ಮತ್ತು ನಿಶ್ಕಲ್ಮಶವಾದ ಭಕ್ತಿಯ ಸಂಕೇತದ ಪ್ರತೀಕ ಎಂದರು ತಪ್ಪಾಗದು. ಲೋಕದ ದೃಷ್ಟಿಯಲ್ಲಿ ಶಬರಿ ನೀಡುತ್ತಿದ್ದ ಹಣ್ಣುಗಳು ಎಂಜಲು ಹಣ್ಣುಗಳಾಗಿದ್ದರೂ, ಆಕೆಯ ನಿಷ್ಕಲ್ಮಶವಾದ ಅನನ್ಯ ಭಕ್ತಿಗೆ ಜಾತಿ, ಕುಲ ಅಥವಾ ಶ್ರೀಮಂತಿಕೆಯ ಹಂಗಿಲ್ಲ ಎಂದು ಸಂತೋಷದಿಂದ ಆ ರಾಮನು ಜಗತ್ತಿಗೆ ಸಾರಿ ತೋರಿಸಿದ್ದು, ನಮ್ಮ ?ವಸುದೈವ ಕುಟುಂಬಕಂ? ಎಂಬ ಸನಾತನ ಸಂಸ್ಕಾರಕ್ಕೆ ಮಾದರಿಯಾಗಿದೆ ಅಲ್ವೇ?



---



# ಸಂತೃಪ್ತಿ ಅಂದ್ರ ಇದು!



| ಸ್ನೇಹಾ ಆನಂದ್

**ಸ್ನೇಹ ಲೋಕ**

ಹೌದ್ರಿ ನಮ್ ಜೀವನ ಹಿಂಗ ಇತ್ತು, ಕೈಯೊಳಗ ರೊಕ್ಕ ಇರ್ಲಿಲ್ಲ ಅಂದ್ರೂ ಸಂತೃಪ್ತಿ ಇತ್ತು!

ಫ್ಯಾನ್ ಇಲ್ಲ ಅಂದ್ರೂ ನೆಮ್ಮದಿಯ ನಿದ್ದಿಗೆ ಬರ ಇರಲಿಲ್ಲ, ಅದೂ ಉತ್ತರ ಕರ್ನಾಟಕದ ಬಿಸಿಲು ಅಂದ್ರ ಕೇಳ್ತಿರೇನು! ಆದ್ರ ಆ ಬಿಸಿಲು ನಮಗೆ ಬಡಿತಿರಲಿಲ್ಲ ಅನ್ನುವಷ್ಟು ತಂಪಾಗಿತ್ತು ನಮ್ ಮನಸ್ಸು ಆವಾಗ !

ಅಪ್ಪಾ ಏನಾದ್ರೂ ತಿನ್ಲಿಕ್ಕೆ ತಂದ್ರ ಸಾಕು ಇದ್ಯಾಕ ತಂದಿ ಅದು ಬೇಕಿತ್ತು ಅಂತ ಅನ್ಲಿಕ್ಕೆ ಗೊತ್ತಿರ್ಲಿಲ್ಲ, ಹಿಂಗಿರೋ ಮುಗ್ಧ ಮನಸ್ಸು ನಾವು ಭಾಳ ದಿನಾ ಜೋಪಾನ ಮಾಡ್ಕೊಂಡಿದ್ವಿ!

ಅಪ್ಪಾ, ಅಮ್ಮಗ ಎದುರುತ್ತರ ಕೊಟ್ಟು ಗೊತ್ತಿರಲಿಲ್ಲ! ಸಿಟ್ಟು ಬಂದ್ರ ಹೊದ್ಕೊಂಡು ಮಕ್ಕೊತಿದ್ವಿ ಅಷ್ಟ!??

ಓದು ಅತಿ ಜಾಸ್ತಿ ಆದ್ರ ಮುಗ್ಧತನ ಜಲ್ದಿ ಮುಚ್ಕೊಂಡು ಹೋಗ್ತದ! ಆದ್ರ ಮುಗ್ಧತನ ಇರೋಷ್ಟು ದಿನ ಸಂತೋಷ, ಆರೋಗ್ಯ ಭಾಳ ಛೊಲೋ ಇರ್ತದ!

ಯಾಕಂದ್ರ ತಿಳಿ ನೀರಿನ ಮನ್ಸು ಇನ್ನೂ ವಂಡ ಆಗಿರಂಗಿಲ್ಲ!

ಅಮ್ಮಾ ಮಾಡೋ ಮಂಡಾಳುಂಡಿ, ಖರ್ಜೂರದ ಹೋಳಿಗಿ, ರಾಮನ ಪ್ರಸಾದ ಇದರ ರುಚಿ ಈಗೂ ನಾಲಿಗಿ ಮ್ಯಾಲೆನೇ ಅದ!

ಆಟ ಅಂದ್ರ ಉಸುಕಿನೊಳಗ ಕೂಡದಷ್ಟ ಗೊತ್ತಿತ್ತು ಅದ್ರೊಳಗ ಮನಿ ಕಟ್ಟೋದು ನನಗ ಭಾಳ ಖುಷಿ ತರ್ತಿತ್ತು! ನಾವು ಕ್ಯಾಂಪ್ ನ್ಯಾಗ ಇದ್ವಿ ಹಿಂಗಾಗಿ ಜಾಗಕ್ಕ ಬರ ಇದ್ದಿಲ್ಲ, ಆಶ್ಚರ್ಯ ಅಂದ್ರ ಕರೆಂಟ್ ಫ್ರೀ ಇದ್ರೂ ನಮ್ಮನ್ಯಾಗ ಟೀವಿ, ಫ್ಯಾನ್ ,ಮಿಕ್ಸಿ , ಫ್ರಿಡ್ಜ್ ಇದ್ದಿಲ್ಲ!



ತಣ್ಣಂದು ಗಡಗಿ ನೀರು ಕುಡಿತಿದ್ವಿ, ಸಂತಿಗೆ ವಾರಕ್ಕೊಮ್ಮೆ ತಂದಿದ್ದು ಕಾಯಿಪಲ್ಯ ಫ್ರಿಜ್ ಇಲ್ಲದೆ ಬಳಸ್ತಿದ್ವಿ, ತಂಗಳನ್ನ ಮರುದಿನ ಉಳಿದಿದ್ದು ಪ್ರಾಣಿ ,ಪಕ್ಷಿಗಳಿಗೆ ಹಾಕತಿದ್ವಿ!

ಹಿಟ್ಟು ರುಬ್ಬಿ ದ್ವಾಸಿ ವಾರಕ್ಕೊಮ್ಮ ಮಾಡ್ತಿದ್ರು, ಭಕ್ರಿ ಪಲ್ಯ,ಚಟ್ನಿ ದಿನದ ಟಿಫಿನ್, ಮಧ್ಯಾಹ್ನಕ್ಕ ಅನ್ನ, ಹುಳಿ, ಸಂಜಿಗೆ ಅವಲಕ್ಕಿ ,ಮಂಡಾಳು,ಬಿಸ್ಕಿಟ್ ಇವು ಸ್ನ್ಯಾಕ್ಸ್ ಹಂಗ , ರಾತ್ರಿ ಮತ್ತ ಅದ ಉಳಿದಿದ್ದು ಸಾರು,ಅನ್ನ ಜೊತಿಗೆ ಒಂದು ಪಚಡಿ ಇಷ್ಟೇ ದಿನದ ನಮ್ ಆಹಾರ!


ಕೇಕ್, ಬರ್ಗರ್,ಪಿಜ್ಜಾ,ಗಿಜ್ಜಾ ಇವು ಗೊತ್ತ ಇದ್ದಿಲ್ಲ, ಜ್ವರ ಬಂದ್ರ ಬ್ರೆಡ್ ಅಷ್ಟ!

ಆವಾಗೆಲ್ಲ ನಾವು ಹಟ ಮಾಡಿದ್ರ ಒಂದು ತಾಸು ಅಳ್ತಾರ ಬಿಡು ಇರ್ಲಿ ಅಂತ ಸುಮ್ನಾಗ್ತಿದ್ರು ಹೊರತು ಕೇಳಿದ್ದೆಲ್ಲ ಕೊಡಸ್ತಿದ್ದಿಲ್ಲ! ಅತ್ತು,ಅತ್ತು ಕಣ್ಣು ಸ್ವಚ್ಛ ಆಗ್ತಿದ್ವು ಅಷ್ಟ!??

ಮಂಚ ಇಲ್ದ ನಿದ್ದಿ, ಕರೆಂಟ್ ಇಲ್ದಿರೋ ಜೀವನ, ಒತ್ತಡ ಇರಲಾರದ ಓದು ಇವೆಲ್ಲ ಖುಷಿಗೆ ಎಂದೂ ಅಡ್ಡ ಆಗಿದ್ದಿಲ್ಲ!ಈಗ ಫ್ಯಾನ್ ಇರ್ಲಿ ಎಸಿ ಇರಲಾರದ ಯಾರೂ ನಿದ್ದಿ ಮಾಡಂಗಿಲ್ಲ, ಅನುಕೂಲ ಭಾಳ ಬಂದಷ್ಟು ಜೀವನ ಸೂಕ್ಷ್ಮ ಆಕ್ಕೊತ ಹೋಗ್ತದ!

ಯಾರೇ ಬರ್ಲಿ ಜಮಖಾನ ಹಾಸಿದ್ರ ಸಾಕು ಎಲ್ಲಾರು ರೈಲು ಬಂಡಿಯಂಗ್ಗ ಮಲ್ಕೋತಿದ್ವಿ, ನಿದ್ದಿ ಮಾತ್ರ ಭರ್ತಿ ಬರ್ತಿತ್ತು, ಮುಂಜಾನೆ ಆಗೋದು ತಿಳಿತಿರಲಿಲ್ಲ, ನೆಮ್ಮದಿಯ ನಿದ್ದಿ ಕಾಣ್ತಿದ್ವಿ

**ಉತ್ತರ ಕರ್ನಾಟಕ ಭಾಷಾದಾಗ ಬರದೀನಿ ಸ್ವಲ್ಪ ಸುಧಾರ್ಸೊಕೊಂಡು ಓದ್ರಿ..??**



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,